

ಇಟಗಿಯ

ಸಾಧು ಶಿವಲಿಂಗೇಶ್ವರ ಮಹಾತ್ಮೆ

(ರಂಗನಾಟಕ)

ಎಲ್.ಬಿ.ಕೆ.ಆಲ್ದಾಳ

ಶ್ರೀ ಚನ್ನಬಸವೇಶ್ವರ ಸಂಸ್ಥಾನ ಹಿರೇಮಠ
ಸುಕ್ಷೇತ್ರ ಹಾರಕೂಡ, ಜಿಲ್ಲೆ: ಬೀದರ

ಸೃಜನಶೀಲ ಸಾಹಿತ್ಯ ಮಾಲೆ-೧೫

ಇಟಗಿಯ

ಸಾಧು ಶಿವಲಿಂಗೇಶ್ವರ ಮಹಾತ್ಮೆ

(ರಂಗ ನಾಟಕ)

ರಚನೆ :
ಎಲ್. ಬಿ. ಕೆ. ಆಲ್ದಾಳ
ಮಳ್ಳಿ

೨೦೧೩

ಪ್ರಕಾಶಕರು :
ಶ್ರೀ ಚನ್ನಬಸವೇಶ್ವರ ಸಂಸ್ಥಾನ ಹಿರೇಮಠ
ಸುಕ್ಷೇತ್ರ ಹಾರಕೂಡ – ೫೮೫ ೪೩೭
ತಾ. ಬಸವಕಲ್ಯಾಣ, ಜಿಲ್ಲೆ ಬೀದರ

"Itagiya Sadhu Shivalingeshwara Mahatme" Stage play written by L. B. K. Aldal, Malli Tq. : Jewargi Dist. : Gulbarga. Published by Shri Chennabasaveshwara Samsthan Hiremath, Sukshetra Harkud- 585 437. Tq. Basavakalyana Dist. Bidar.

First Impression : 2013

Copies : 1000

Pages : x + 98 = 108

Used Paper : 70 GSM N. S. Bookprint

Price : Rs. 80 /-

ಇಟಗಿಯ ಸಾಧು ಶಿವಲಿಂಗೇಶ್ವರ ಮಹಾತ್ಮೆ (ರಂಗ ನಾಟಕ) ರಚನೆ : ಎಲ್. ಬಿ. ಕೆ. ಆಲ್ದಾಳ, ಪ್ರಕಾಶಕರು : ಶ್ರೀ ಚನ್ನಬಸವೇಶ್ವರ ಸಂಸ್ಥಾನ ಹಿರೇಮಠ, ಸುಕ್ಷೇತ್ರ ಹಾರಕೂಡ-೫೮೫೪೩೭. ತಾ. ಬಸವಕಲ್ಯಾಣ ಜಿಲ್ಲೆ ಬೀದರ

ಪ್ರಥಮ ಮುದ್ರಣ : ೨೦೧೩

ಪ್ರತಿಗಳು : ೧೦೦೦


ಪುಟಗಳು : x + ೯೮ = ೧೦೮

ಬೆಲೆ : ರೂ. ೮೦/-


ಬಳಸಿದ ಕಾಗದ : ೭೦ ಜಿ.ಎಸ್.ಎಮ್. ಎನ್.ಎಸ್. ಬುಕ್‌ಪ್ರಿಂಟ್

ಸೂಚನೆ : ಈ ನಾಟಕವನ್ನು ರಂಗದ ಮೇಲೆ ಪ್ರಯೋಗಿಸುವವರು ಲೇಖಕರ ಅಥವಾ ಪ್ರಕಾಶಕರ ಅನುಮತಿ ಲಿಖಿತವಾಗಿ ಪಡೆಯಬೇಕು.

ಮುದ್ರಕರು :
ತ್ವರಿತ ಮುದ್ರಣ ಆಫ್‌ಸೆಟ್ ಪ್ರಿಂಟರ್ಸ್
ಕಾಗದಗೇರಿ ಓಣಿ, ಗದಗ – 582 101.
☎ : (08372) 237566, 235509
Email : chaitanya_offset@yahoo.co.in



ಪೂಜ್ಯ ಲಿಂ. ಶ್ರೀ ಷ. ಬ್ರ. ಚೆನ್ನಬಸವ ಶಿವಯೋಗಿಗಳು
ಸುಕ್ಷೇತ್ರ ಹಾರಕೂಡ



ಪೂಜ್ಯಶ್ರೀ ಷ. ಬ್ರ. ಚನ್ನವೀರ ಶಿವಾಚಾರ್ಯರು

ಆಶೀರ್ವಚನ

ಶ್ರೀ ಲಾಲ್ ಅಹಮ್ಮದ್ ಬಂದೇನವಾಜ ಆಲ್ದಾಳ ಅವರು ಕಲ್ಯಾಣ ಕರ್ನಾಟಕದ ಕಲಾ ಕ್ಷೇತ್ರದ ಕಣ್ಮಣಿ. ಎಲ್.ಬಿ.ಕೆ. ಆಲ್ದಾಳ ಅವರ ಹೆಸರನ್ನು ಈ ನಾಡಿನಲ್ಲಿ ಕೇಳದವರೇ ಇಲ್ಲವೆನ್ನುವಷ್ಟು ಅವರ ಪ್ರಖ್ಯಾತಿ. ಎಡೆಬಿಡದೆ ಅರ್ಧಶತಮಾನಕ್ಕೂ ಹೆಚ್ಚು ಕಾಲ ನಾಟಕಕಲೆ, ತತ್ತ್ವಸಾಹಿತ್ಯ, ವಚನವಾಹಿನಿ, ಮಹಾತ್ಮರ ಜೀವನಚರಿತ್ರೆ, ಪುರಾಣ, ಸಂಗೀತ, ಜಾನಪದ ಹೀಗೆ ಹತ್ತು ಹಲವು ಕ್ಷೇತ್ರಗಳಲ್ಲಿ ಅವರು ಮಾಡಿರುವ ಸೇವೆ ಅನನ್ಯ. ಕೊಟ್ಟ ಕಾಣಿಕೆ ಅಪೂರ್ವ.

ನಟ, ನಾಟಕಕಾರರಾಗಿ, ನಿರ್ದೇಶಕರಾಗಿ, ಸಂಗೀತಕಾರರಾಗಿ ಸಾಹಿತಿಯಾಗಿ ಅವರು ಜನಮನ ಗೆದ್ದಿದ್ದಾರೆ. ಇದೆಲ್ಲಕ್ಕೂ ಹೆಚ್ಚಾಗಿ ಅವರು ಹಾರಕೂಡ ಸಂಸ್ಥಾನ ಹಿರೇಮಠದ ಸದ್ಭಕ್ತ ಶಿರೋಮಣಿಯಾಗಿರುವುದು ವಿಶೇಷ. ಅಂತೆಯೆ ಅವರು ಕರ್ನಾಟಕ ರಾಜ್ಯೋತ್ಸವ, ಗುಬ್ಬಿ ವೀರಣ್ಣ ಪ್ರಶಸ್ತಿಗಳನ್ನು ಒಳಗೊಂಡು ನಾಡಿನ ಹಲವಾರು ಪ್ರತಿಷ್ಠಿತ ಪ್ರಶಸ್ತಿಗಳಿಗೆ ಭಾಜನರಾಗಿದ್ದಾರೆ. ನಾಡಿನ ಶ್ರೇಷ್ಠ ಮಠಮಾನ್ಯಗಳ ಪ್ರೋತ್ಸಾಹ ಪುರಸ್ಕಾರ ಅದರಲ್ಲೂ ಹಾರಕೂಡ ಸಂಸ್ಥಾನ ಹಿರೇಮಠದ "ಶ್ರೀಚೆನ್ನರೇಣುಕಬಸವಪ್ರಶಸ್ತಿ" ಅವರಿಗೆ ಲಭಿಸಿದ್ದು ಗಮನಾರ್ಹ.

ಹುಟ್ಟಿನಿಂದ ಮುಸಲ್ಮಾನರಾಗಿದ್ದರೂ ವೀರಶೈವ ಸಂಸ್ಕೃತಿಯನ್ನು ಮೈಗೂಡಿಸಿಕೊಂಡು ಅವರು ರಚಿಸಿದ ಚರಿತ್ರೆ, ತತ್ತ್ವಗೀತೆ, ಪುರಾಣ, ವಚನವಾಹಿನಿ, ಜನಪದಸಂಗೀತ ಮುಂತಾದ 50 ಕ್ಕೂ ಹೆಚ್ಚು ಸಂಖ್ಯೆಯ ಕೃತಿಗಳು ಅದ್ಭುತವಾಗಿವೆ.

ರಂಗಭೂಮಿ ಅವರ ಪ್ರಥಮ ಪ್ರಾಶಸ್ತ್ಯದ ಕ್ಷೇತ್ರ, ಅದರಲ್ಲಿ ಅವರ ಸೇವೆ ಅನನ್ಯ. ಹಾರಕೂಡ ಶ್ರೀ ಚೆನ್ನಬಸವೇಶ್ವರ ಮಹಾತ್ಮೆ ಎಂಬ ಶ್ರೇಷ್ಠ ರಂಗನಾಟಕವನ್ನು ಬರೆದು ಯಶಸ್ವಿಯಾಗಿ ನೂರಾರು ಪ್ರಯೋಗಗಳನ್ನು ನಡೆಸಿಕೊಟ್ಟದ್ದು ಸ್ಮರಣೀಯ ಸಂಗತಿಯಾಗಿದೆ.

ಇದೀಗ ಅವರು ಬರೆದ ಒಂದು ಹೊಸ ನಾಟಕಕೃತಿ 'ಇಟಗಿಯ ಸಾಧು ಶಿವಲಿಂಗೇಶ್ವರ ಮಹಾತ್ಮೆ' ಅವರ ಅನೇಕ ರಂಗನಾಟಕಗಳ ಶ್ರೇಣಿಗೆ ಒಂದು ಹೊಸ ಸೇರ್ಪಡೆಯಾಗಿದೆ. ಜನಸಾಮಾನ್ಯರಿಗೆ ಅರ್ಥವಾಗುವ ಹಾಗೆ ಉತ್ತಮ

ಆಶೀರ್ವಚನ

ಶ್ರೀ ಲಾಲ್ ಅಹಮ್ಮದ್ ಬಂದೇನವಾಜ ಆಲ್ದಾಳ ಅವರು ಕಲ್ಯಾಣ ಕರ್ನಾಟಕದ ಕಲಾ ಕ್ಷೇತ್ರದ ಕಣ್ಮಣಿ. ಎಲ್.ಬಿ.ಕೆ. ಆಲ್ದಾಳ ಅವರ ಹೆಸರನ್ನು ಈ ನಾಡಿನಲ್ಲಿ ಕೇಳದವರೇ ಇಲ್ಲವೆನ್ನುವಷ್ಟು ಅವರ ಪ್ರಖ್ಯಾತಿ. ಎಡೆಬಿಡದೆ ಅರ್ಧಶತಮಾನಕ್ಕೂ ಹೆಚ್ಚು ಕಾಲ ನಾಟಕಕಲೆ, ತತ್ತ್ವಸಾಹಿತ್ಯ, ವಚನವಾಹಿನಿ, ಮಹಾತ್ಮರ ಜೀವನಚರಿತ್ರೆ, ಪುರಾಣ, ಸಂಗೀತ, ಜಾನಪದ ಹೀಗೆ ಹತ್ತು ಹಲವು ಕ್ಷೇತ್ರಗಳಲ್ಲಿ ಅವರು ಮಾಡಿರುವ ಸೇವೆ ಅನನ್ಯ. ಕೊಟ್ಟ ಕಾಣಿಕೆ ಅಪೂರ್ವ.

ನಟ, ನಾಟಕಕಾರರಾಗಿ, ನಿರ್ದೇಶಕರಾಗಿ, ಸಂಗೀತಕಾರರಾಗಿ ಸಾಹಿತಿಯಾಗಿ ಅವರು ಜನಮನ ಗೆದ್ದಿದ್ದಾರೆ. ಇದೆಲ್ಲಕ್ಕೂ ಹೆಚ್ಚಾಗಿ ಆವರು ಹಾರಕೂಡ ಸಂಸ್ಥಾನ ಹಿರೇಮಠದ ಸದ್ಭಕ್ತ ಶಿರೋಮಣಿಯಾಗಿರುವುದು ವಿಶೇಷ. ಅಂತೆಯೆ ಅವರು ಕರ್ನಾಟಕ ರಾಜ್ಯೋತ್ಸವ, ಗುಬ್ಬಿ ವೀರಣ್ಣ ಪ್ರಶಸ್ತಿಗಳನ್ನು ಒಳಗೊಂಡು ನಾಡಿನ ಹಲವಾರು ಪ್ರತಿಷ್ಠಿತ ಪ್ರಶಸ್ತಿಗಳಿಗೆ ಭಾಜನರಾಗಿದ್ದಾರೆ. ನಾಡಿನ ಶ್ರೇಷ್ಠ ಮಠಮಾನ್ಯಗಳ ಪ್ರೋತ್ಸಾಹ ಪುರಸ್ಕಾರ ಅದರಲ್ಲೂ ಹಾರಕೂಡ ಸಂಸ್ಥಾನ ಹಿರೇಮಠದ "ಶ್ರೀಚೆನ್ನರೇಣುಕಬಸವಪ್ರಶಸ್ತಿ" ಅವರಿಗೆ ಲಭಿಸಿದ್ದು ಗಮನಾರ್ಹ.

ಹುಟ್ಟಿನಿಂದ ಮುಸಲ್ಮಾನರಾಗಿದ್ದರೂ ವೀರಶೈವ ಸಂಸ್ಕೃತಿಯನ್ನು ಮೈಗೂಡಿಸಿಕೊಂಡು ಅವರು ರಚಿಸಿದ ಚರಿತ್ರೆ, ತತ್ತ್ವಗೀತೆ, ಪುರಾಣ, ವಚನವಾಹಿನಿ, ಜನಪದಸಂಗೀತ ಮುಂತಾದ 50 ಕ್ಕೂ ಹೆಚ್ಚು ಸಂಖ್ಯೆಯ ಕೃತಿಗಳು ಅದ್ಭುತವಾಗಿವೆ.

ರಂಗಭೂಮಿ ಅವರ ಪ್ರಥಮ ಪ್ರಾಶಸ್ತ್ಯದ ಕ್ಷೇತ್ರ. ಅದರಲ್ಲಿ ಅವರ ಸೇವೆ ಅನನ್ಯ. ಹಾರಕೂಡ ಶ್ರೀ ಚೆನ್ನಬಸವೇಶ್ವರ ಮಹಾತ್ಮೆ ಎಂಬ ಶ್ರೇಷ್ಠ ರಂಗನಾಟಕವನ್ನು ಬರೆದು ಯಶಸ್ವಿಯಾಗಿ ನೂರಾರು ಪ್ರಯೋಗಗಳನ್ನು ನಡೆಸಿಕೊಟ್ಟದ್ದು ಸ್ಮರಣೀಯ ಸಂಗತಿಯಾಗಿದೆ.

ಇದೀಗ ಅವರು ಬರೆದ ಒಂದು ಹೊಸ ನಾಟಕಕೃತಿ 'ಇಟಗಿಯ ಸಾಧು ಶಿವಲಿಂಗೇಶ್ವರ ಮಹಾತ್ಮೆ' ಅವರ ಅನೇಕ ರಂಗನಾಟಕಗಳ ಶ್ರೇಣಿಗೆ ಒಂದು ಹೊಸ ಸೇರ್ಪಡೆಯಾಗಿದೆ. ಜನಸಾಮಾನ್ಯರಿಗೆ ಅರ್ಥವಾಗುವ ಹಾಗೆ ಉತ್ತಮ

ಸಂಭಾಷಣೆ, ದೃಶ್ಯ ಸಂಯೋಜನೆ, ಮಧುರಹಾಸ್ಯ, ಗಂಭೀರ ಆಧ್ಯಾತ್ಮ ಒಳ್ಳೆ ರಾಗಸಂಯೋಜಿತ ಹಾಡುಗಳಿಂದ ಕೂಡಿ ರಂಗದ ಮೇಲೆ ಅಭಿನಯಿಸಲು ಈ ನಾಟಕ ಉತ್ತಮ ನಾಟಕ ಎನಿಸಿದೆ. ಇಂತಹ ಉತ್ತಮ ರಂಗನಾಟಕ ಕೃತಿಯನ್ನು ಪ್ರಕಟಿಸಲು ನಮಗೆ ಸಂತೋಷವೆನಿಸುತ್ತದೆ.

ಈ ಕೃತಿಯನ್ನು ಮುದ್ರಿಸಿದ ತ್ವರಿತ ಮುದ್ರಣಾಲಯದ ಶ್ರೀ ಅಶೋಕ ಅವರಿಗೂ, ಕೃತಿಯನ್ನು ಆಮೂಲಾಗ್ರವಾಗಿ ಪರಿಶೀಲಿಸಿದ ಡಾ. ಸಂಗಮೇಶ ಸವದತ್ತಿಮಠ ಅವರಿಗೂ, ಗ್ರಂಥಕರ್ತರಾದ ಶ್ರೀ ಎಲ್.ಬಿ.ಕೆ. ಆಲ್ದಾಳ ಅವರಿಗೂ ಪೂಜ್ಯ ಶ್ರೀ ಚನ್ನಬಸವ ಶಿಯೋಗಿಗಳ ಕೃಪಾಶೀರ್ವಾದ ಇರಲಿ.


ಷ. ಬ್ರ. ಚನ್ನವೀರ ಶಿವಾಚಾರ್ಯರು
ಸಂಸ್ಥಾನ ಹಿರೇಮಠ, ಸುಕ್ಷೇತ್ರ ಹಾರಕೂಡ

■■

ಅರ್ಪಣೆ



ನಾಟಕ ನಿರ್ದೇಶಕರು, ಸಂಗೀತಗಾರರು, ಪುರಾಣ ಪ್ರವಚನಾಚಾರ್ಯರೂ ಹಾರಕೂಡ ಸಂಸ್ಥಾನ ಹಿರೇಮಠ ಅಧ್ಯಕ್ಷರಾದ ಶ್ರೀ ಷ. ಬ್ರ. ಚನ್ನವೀರ ಶಿವಾಚಾರ್ಯರ ಪೂರ್ವಾಶ್ರಮದ ಪಿತೃವರ್ಯರೂ ಆದ ಶ್ರೀ ವೇ. ಮೂ. ಕರಬಸಯ್ಯ ಹಿರೇಮಠ ಸ್ವಾಮಿಗಳಿಗೆ ಭಕ್ತಿಪೂರ್ವಕ ಈ ಕೃತಿ ಸಮರ್ಪಣೆ.



ನನ್ನ ನುಡಿ

ಸಂಗೀತ-ಸಾಹಿತ್ಯ, ಕಲೆ-ಜ್ಞಾನ, ಅನ್ನದಾನ, ಈ ತ್ರಿವೇಣಿ ಸಂಗಮ ಕಲ್ಯಾಣ ನಾಡಿನ ಶ್ರೀ ಚನ್ನಬಸವೇಶ್ವರ ಸಂಸ್ಥಾನ ಮಠ ಹಾರಕೂಡ ಎಂದರೆ ಆಶ್ಚರ್ಯ ಪಡಬೇಕಾಗಿಲ್ಲ. ಅದು ನಿರಂತರವಾಗಿ, ಶಿಕ್ಷಣ, ಶಿಲ್ಪಿ, ಸಾಹಿತಿ, ವಿದ್ವನ್ಮಣಿ, ಜನಪ್ರವಾಹದ ಮಧ್ಯ ಪರಿಶೋಭಿಸುತ್ತಿರುವ ಶ್ರೀ ಷ. ಬ್ರ. ಚನ್ನವೀರ ಶಿವಾಚಾರ್ಯರು ನಡೆಸಿಕೊಂಡು ಬರುತ್ತಿರುವದು ಇತಿಹಾಸ.

ಮಹಾನವಮಿಯಂದು ನನ್ನಿಂದ ರಚಿತವಾದ "ಇಟಗಿಯ ಶ್ರೀ ಸಾಧು ಶಿವಲಿಂಗೇಶ್ವರ ಮಹಾತ್ಮೆ" ಬಿಡುಗಡೆಯಾಗುತ್ತಿರುವದು ನನ್ನ ಸೌಭಾಗ್ಯ.

"ಶ್ರೀ ಸಾಧು ಶಿವಲಿಂಗೇಶ್ವರ ಮಹಾತ್ಮೆ" ನಾಟಕವನ್ನು ಇಟಗಿ (ಕೆ) ಗ್ರಾಮದ ಸರ್ವ ಭಕ್ತರು, ನನ್ನಿಂದ ಬರೆಯಿಸಿ ೧೩ ನೇ ವರ್ಷಕ್ಕೆ ಅತಿ ಭಕ್ತಿಯಿಂದ ರಂಗದ ಮೇಲೆ ಪ್ರಯೋಗಿಸಿ ಜನಮಾನಸದಲ್ಲಿ ನಿಂತಿದೆ.

ಈ ನಾಟಕದ ಉದ್ಘಾಟನೆಗೆ ಪರಮ ಪೂಜ್ಯರಾದ ಶ್ರೀ ಷ.ಬ್ರ.ಚನ್ನವೀರ ಶಿವಾಚಾರ್ಯರು ಆಗಮಿಸಿ ತಮ್ಮ ಆಶೀರ್ವಾದ ವಾಣಿಯಲ್ಲಿ ಈ ನಾಟಕವನ್ನು ತಮ್ಮ ಹಾರಕೂಡ ಪ್ರಕಾಶನದಿಂದ ಹೊರತರುತ್ತೇವೆಂದು ಹೇಳಿದ ಪ್ರಕಾರ ಇದೀಗ ಕನ್ನಡಿಗರ ಕರಸ್ಥಲಕ್ಕೆ ಬರುತ್ತಿರುವದು ನನಗೆ ಹೆಚ್ಚಿನ ಸಂತಸ ತಂದಿದೆ.

ಈ ನಾಟಕಕ್ಕೆ ಶ್ರೀ ಷ.ಬ್ರ. ಚನ್ನವೀರ ಶಿವಾಚಾರ್ಯರು ಶುಭಾಶೀರ್ವಚನ ಬರೆದು ಹರಸಿದ್ದಾರೆ. ಅವರ ಶ್ರೀಚರಣಕ್ಕೆ ಹಣೆ ಹಚ್ಚುವೆ.

ಈ ನಾಟಕದಲ್ಲಿ ಭಕ್ತಿಪೂರ್ವಕವಾಗಿ ನಟಿಸಿದ ನಟ, ನಟಿಯರಿಗೂ, ಸಂಗೀತ ಶಿಕ್ಷಕರಿಗೂ, ಅಲ್ಲದೆ ಮೇಲುಸ್ತುವಾರಿಯನ್ನು ವಹಿಸಿದ ಇಟಗಿಯ ಸದ್ಭಕ್ತ ಸಂಕುಳಕ್ಕೆ ಶರಣು ಸಲ್ಲಿಸುವೆ.

ಈ ನಾಟಕಕ್ಕೆ ಮುದ್ರಣ ರೂಪವ ಕೊಟ್ಟು ಹೊರತಂದ ತ್ವರಿತ ಮುದ್ರಣಾಲಯದ ಶ್ರೀ ಕೆ. ಅಶೋಕ ಗದಗ ಹಾಗೂ ನನ್ನ ಆತ್ಮೀಯ ಗೆಳೆಯರಾದ ಶ್ರೀ ವೇ. ಮೂ. ಬಸಯ್ಯಸ್ವಾಮಿ ಕಮರಿಮಠ, ಗುರುಕುಮಾರೇಶ್ವರ ನಾಟ್ಯ ಸಂಘದ ಮಾಲಿಕರಾದ ಶ್ರೀ ಎಲ್. ಬಿ. ಶೇಖ ಮಾಸ್ತರರಿಗೂ ಮಳ್ಳಿ, ನಾಗರಳ್ಳಿಯ ಗೆಳೆಯ ವೃಂದಕ್ಕೂ ಹಾಗೂ ಕನ್ನಡ ಕುಲಕೋಟಿಯ ಕಲಾವಿದರಿಗೆ ಶರಣು ಶರಣಾರ್ಥಿ.

ಎಲ್. ಬಿ. ಕೆ. ಆಲ್ದಾಳ

ಮಳ್ಳಿ ತಾ.ಜೇವರಗಿ ಜಿ.ಕಲಬುರಗಿ



ಲೇಖಕರ ಪರಿಚಯ

ಶ್ರೀ ಲಾಲ್ ಅಹಮ್ಮದ್ ಬಂದೇನವಾಜ ಖಲೀಫ್ ಆಲ್ದಾಳ (ಎಲ್.ಬಿ.ಕೆ. ಆಲ್ದಾಳ) ಕಲ್ಯಾಣ ಕರ್ನಾಟಕದ ರಂಗ ಚಟುವಟಿಕೆಗಳ ಧೀಮಂತ ಕಲಾವಿದ. ೫-೧೧-೧೯೩೫ರಂದು ವಿಜಾಪುರ ಜಿಲ್ಲೆಯ ಸಿಂದಗಿ ತಾಲೂಕಿನ ಬನಹಟ್ಟಿ ಪಿ.ಟಿ.ಯ ಬಡ ಮುಸ್ಲಿಮ್ ಕುಟುಂಬದಲ್ಲಿ ಜನನ. ತಂದೆ ಬಂದೇ ನವಾಜ ತಾಯಿ ಹುಸೇನಬಿ. ಬೆಳೆದದ್ದು ಕಲಿತದ್ದು ಕಲಬುರ್ಗಿ ಜಿಲ್ಲೆಯ ಸುರಪುರ ತಾಲೂಕಿನ (ತಾಯಿಯ ತವರೂರು) ಅಲ್ದಾಳದಲ್ಲಿ, ಪ್ರಾಥಮಿಕ ಏಳನೇ ಇಯತ್ತೆಪಾಸಾಗುತ್ತಲೇ ಕಲಬುರ್ಗಿ ಜಿಲ್ಲೆಯ ಜೇವರಗಿ ತಾಲೂಕಿನ ಮಳ್ಳಿ ಗ್ರಾಮದಲ್ಲಿ ದುಡಿಮೆ ಆರಂಭ.

ಕಿರುವಯದಲ್ಲೇ ರಂಗಭೂಮಿ, ನಾಟಕಸಾಹಿತ್ಯದ ಕಡೆಗೆ ಒಲವು-ಕಳೆದ ೫೦ ವರ್ಷಗಳಲ್ಲಿ ೫೦ಕ್ಕೂ ಹೆಚ್ಚು ಸಂಖ್ಯೆಯ ನಾಟಕಗಳ ಕರ್ತ್ಯ,ನಟ ನಿರ್ದೇಶಕನಾಗಿ ಬೆಳೆದದ್ದು ವೀರಶೈವ ಸ್ವಾಮಿಗಳ, ಸ್ನೇಹಿತರ ಸಹವಾಸ ಸಂಪರ್ಕದಿಂದ ವೀರಶೈವ ಸಂಸ್ಕೃತಿಯತ್ತ ಒಲವು ಅಧ್ಯಯನ ಕೃತಿ ರಚನೆ. ಇವರ ಸಾಧನೆಯನ್ನು ಗುರುತಿಸಿ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ, ಗುಬ್ಬಿ ವೀರಣ್ಣ ಪ್ರಶಸ್ತಿಯನ್ನು ಒಳಗೊಂಡು ನಾಡಿನ ಹಲವಾರು ಪ್ರತಿಷ್ಠಿತ ಪ್ರಶಸ್ತಿಗಳಿಗೆ ಭಾಜನರಾಗಿದ್ದಾರೆ. ನಾಡಿನ ಶ್ರೇಷ್ಠ ಮಠಮಾನ್ಯಗಳ ಪ್ರೋತ್ಸಾಹ ಪುರಸ್ಕಾರವೂ ವಿಶೇಷ. ಅದರಲ್ಲೂ ಹಾರಕೂಡ ಸಂಸ್ಥಾನ ಹಿರೇಮಠದ ''ಶ್ರೀ ಚೆನ್ನರೇಣುಕ ಬಸವ ಪ್ರಶಸ್ತಿ'' ಗಮನಾರ್ಹ.

ಹುಟ್ಟಿನಿಂದ ಮುಸಲ್ಮಾನರಾಗಿದ್ದರೂ ವೀರಶೈವ ಸಂಸ್ಕೃತಿಯನ್ನು ಮೈಗೂಡಿಸಿ ಕೊಂಡು ಅವರು ರಚಿಸಿದ ಚರಿತ್ರೆ, ತತ್ತ್ವಗೀತೆ ಪುರಾಣ, ವಚನವಾಹಿನಿ, ಜನಪದಸಂಗೀತ ಮುಂತಾದ ೫೦ಕ್ಕೂ ಹೆಚ್ಚು ಸಂಖ್ಯೆಯ ಕೃತಿಗಳು ಅದ್ಭುತವಾಗಿವೆ.

ಹಾರಕೂಡ ಸಂಸ್ಥಾನ ಹಿರೇಮಠದ ಶ್ರೀ ಚೆನ್ನಬಸವ ಶಿವಯೋಗಿಗಳವರ ಮತ್ತು ಇತರ ಸ್ವಾಮಿಗಳವರ ಚರಿತ್ರೆಯನ್ನು ತ್ರಿಪದಿ ಛಂದಸ್ಸಿನಲ್ಲಿ 'ಜನಪದ ಜಂಗಮ' ಕೃತಿಯಲ್ಲಿ ಸುಂದರವಾಗಿ ಕಟ್ಟಿಕೊಟ್ಟಿದ್ದಾರೆ. ಅವರ ರಂಗನಾಟಕ ಕೃತಿಗಳ ಸಾಲಿಗೆ 'ಇಟಗಿಯ ಸಾಧು ಶಿವಲಿಂಗೇಶ್ವರ ಮಹಾತ್ಮೆ' ಒಂದು ಅಪರೂಪದ ಸೇರ್ಪಡೆ.

ಇಟಗಿಯ ಸಾಧು ಶಿವಲಿಂಗೇಶ್ವರ ಮಹಾತ್ಮೆ

ಪಾತ್ರಗಳು

ಶಿವಲಿಂಗೇಶ್ವರ
ಲಿಂಗಪ್ಪ
ಸಿದ್ಧಲಿಂಗಪ್ಪ
ನೀಲಕಂಠಸ್ವಾಮಿ
ಸ್ವಾಮಿ
ಶಾಂತಿ
ಶಾಂತಪ್ಪ
ಗಿರೆಮ್ಮ
ಗುಂಡಪ್ಪ
ಸಿದ್ಧರಾಮ
ಅಪ್ಪಾಸಾಬಗೌಡ
ಕುಲಕರ್ಣಿ
ನಿಂಗಮ್ಮ
ಸಿದ್ಧಪ್ಪ ಮಹಾರಾಜ
ಮೋಹಿನಿ

ಮಲ್ಲೇಶಪ್ಪ
ಸುಂದ್ರಾ ್ಯ
ಚಂದವ್ವ
ಚನ್ನಬಸಯ್ಯ
ಚಂದಮ್ಮಗೌಡತಿ
ರಾಯಗುಂಡಪ್ಪ
ಶ್ರೀಮಂತಪ್ಪ
ಸಿದ್ಧಪ್ಪಗೌಡ
ಮಲ್ಕಮ್ಮ
ಬಸವಂತಪ್ಪ
ರಾಮರಾವ
ಕಾಶೀಮಸಾಬ
ಶಾಂತಯ್ಯ
ಸಿದ್ದಮ್ಮಾಂಬೆ
ಶಿವಾಚಾರ್ಯ

ಸಿದ್ಧಲಿಂಗಪ್ಪ : ಪೂಜ್ಯರಿಗೆ ಪ್ರಣಾಮಗಳು. (ನಮಸ್ಕರಿಸು)

ನೀಲಕಂಠಸ್ವಾಮಿ : ಶ್ರೇಯೋಭಿರಸ್ತು: ಯಾರು? ನಮ್ಮ ಕೂಡಿಗಿ ಸಿದ್ಧಲಿಂಗಪ್ಪನವರೇನು?

ಸಿದ್ಧಲಿಂಗಪ್ಪ : ಹೌದು ಪೂಜ್ಯರೇ ತಮ್ಮ ಬರುವನ್ನೆ ಕಾಯುತ್ತ ಕುಳಿತಿದ್ದೆವು. ನಿನ್ನೆ ತಾವುಗಳು ಸ್ವಪ್ನದಲ್ಲಿ ದರುಶನ ನೀಡಿ ನಾಳೆಯೇ ಯರನಾಳಕ್ಕೆ ಬರುವದಾಗಿ ಆದೇಶ ನೀಡಿದ್ದೀರಿ. ಆ ಕಾರಣ ನಾನಿಲ್ಲಿಗೆ ಬಂದು ತಮ್ಮ ಹಾದಿಯನ್ನೇ ಕಾಯುತ್ತ ಕುಳಿತುಕೊಂಡಿದ್ದೆ.

ನೀಲಕಂಠಸ್ವಾಮಿ : ಇದುವೇ ಆತ್ಮಾನಾತ್ಮಗಳ ಸಂಬಂಧ ಸೇತುವೆ, ನಮಗೆ ನೀವು ಸ್ವಪ್ನದಲ್ಲಿ ಬಂದು ಯರನಾಳಕ್ಕೆ ಬರಬೇಕೆಂದು ಆಮಂತ್ರಣವಿತ್ತಿರಿ ನಾವು ನಿಮ್ಮ ಸ್ವಪ್ನದಲ್ಲಿ ಬಂದು ಬರುತ್ತೇವೆಂದು ಅಪ್ಪಣೆಯನ್ನಿತ್ತೆವು, ಆ ಪ್ರಕಾರ ನಾವು ಬಂದೆವು, ನೀವೂಬಂದಿರಿ ಈ ಗುರು ಶಿಷ್ಯರ ಸಂಬಂಧ ಕಲ್ಪ ಕಲ್ಪಾಂತದ ಕಲ್ಪವೃಕ್ಷ.

ಸಿದ್ಧಲಿಂಗಪ್ಪ : ಪೂಜ್ಯರೇ: ತಮ್ಮ ಶ್ರೀರಕ್ಷೆ ಆ ಕಲ್ಪವೃಕ್ಷ. ಈ ಯರನಾಳದ ಕೂಡಿಗಿ ಮನೆತನಕ್ಕೆ ತನ್ನ ವೃಕ್ಷಸ್ಥಳದಲ್ಲಿರಿಸಿ ಕೊಂಡು ಸಕಲ ಸಂಪತ್ತು ನೀಡಿದೆ.

ನೀಲಕಂಠಸ್ವಾಮಿ : ಅದಕ್ಕೆ ತಮ್ಮ ಬಲವಾದ ನಂಬಿಗೆ ಅಚಲ ನಿರ್ಧಾರವೇ ಕಾರಣ ಸಿದ್ಧಲಿಂಪ್ಪನವರೇ ಸತ್ಯ ಶುದ್ಧ ಕಾಯಕ ದಾಸೋಹಂಭಾವದಲ್ಲಿ ತಮ್ಮನ್ನು ತಾವು ತೊಡಗಿಸಿ ಕೊಂಡವರಿಗೆ ಯಾವ ಕಾಲಕ್ಕೂ ಬಡತನವೇ ಇಲ್ಲ. ಸದಾ ಸುಖಿ ಅವರು.

ಸಿದ್ಧಲಿಂಗಪ್ಪ : ಬನ್ನಿ ಪೂಜ್ಯರೆ ಮನೆಗೆ ದಯ ಮಾಡಿಸಿರಿ.

ನೀಲಕಂಠಸ್ವಾಮಿ : ಮೊದಲು ಯರನಾಳದ ಕ್ಷೇತ್ರಾಧಿಪತಿಯಾದ ರೇವಣಸಿದ್ಧೇಶ್ವರರ ಮಂದಿರಕ್ಕೆ ತೆರಳಿ ದೇವದರುಶನ ಮಾಡಿಕೊಳ್ಳೋಣ. ಆ ನಂತರ ಮನೆಗೆ ಹೋಗೋಣ ಇರಲಿ ನಿಮ್ಮ ಸತಿ ಗಿರಿಯಮ್ಮ ಕುಶಲವೇ?

ಸಿದ್ಧಲಿಂಗಪ್ಪ : ಹೂ, ಕುಶಲವಾಗಿದ್ದಾಳೆ (ಸೋತಮನಸಿನಿಂದ)

ನೀಲಕಂಠಸ್ವಾಮಿ : ಯಾಕೆ ಸಿದ್ಧಲಿಂಗಪ್ಪ, ಯಾಕೀ ನೊಂದ ಬಿಸಿಯುಸಿರು.

ಸಿದ್ಧಲಿಂಗಪ್ಪ : ತಾನೊಂದು ಹೂಕಾಯಿ ಬಿಡದ ಬಂಜೆ ಮರವಾದೆನಲ್ಲ ಅಂತ ಚಿಂತೆ ಮಾಡ್ತಾಳೆ.

ನೀಲಕಂಠಸ್ವಾಮಿ : ಚಿಂತಿಸುವ ಕಾಲಕಳೆದು ಸಂತಸ ಪಡುವ ಕಾಲ ಬಹುದೂರವಿಲ್ಲ. ಆ ಶುಭಯೋಗಕ್ಕಾಗಿ ಕಾಯಬೇಕಷ್ಟೆ. ನನಗಂತೂ

ಮಕ್ಕಳಾಗಲಿಲ್ಲ. ಮತ್ತೊಬ್ಬರಿಂದಾದರೂ ಈ ಕೂಡಿಗಿ ಮನೆತನದ ಜ್ಯೋತಿ ಬೆಳಗಲಿ ಅನ್ನುವ ಸ್ತ್ರೀ ಸಹಜ ಬಯಕೆ ಅದು ಸಿದ್ಧಲಿಂಗಪ್ಪ ಕಾಲ ಪಕ್ವವಾಗದ ಹೊರತು ಫಲ ಎಂದೂಸಿಗದು. ಆದರೆ, ಆ ಕಾಲವೀಗ ಪಕ್ವವಾಗಿದೆ, ನಾಡಿಗೆ ಬೆಳಕಾಗವ ಪುತ್ರಫಲವನ್ನು ಪಡೆಯುತ್ತಾಳೆ. ಗಿರಿಯಮ್ಮ.

ಸಿದ್ಧಲಿಂಗಪ್ಪ : ಧನ್ಯರಾದೆವು! ತಂದೆ ಧನ್ಯರಾದೆವು. ಎಲ್ಲಿ ಈ ಯರನಾಳದ ಕೂಡಿಗಿಯವರ ಮನೆತನವು ವಂಶ ಜ್ಯೋತಿಯಿಲ್ಲದೆ ಹೋಗುತ್ತಿದೆಯೇ ಅಂತ ಭಾವಿಸಿದ್ದೆವು, ಆದರೆ ತಮ್ಮ ಶುಭಾಶಿರ್ವಾದದಿಂದ ಬಾಡಿದ ಬಳ್ಳಿ ಚಿಗುರೊಡೆಯಿತು. ಬತ್ತಿದ ಭಾವಿ ತುಂಬಿತು ಬನ್ನಿ ಹೋಗೋಣ.

ನೀಲಕಂಠಸ್ವಾಮಿ : ನಡೆಯಿರಿ. ಹಿನ್ನೆಲೆ :

ನೀನೊಲಿದರೆ ಕೊರಡು ಕೊನರುವದಯ್ಯಾ
ನೀನೊಲಿದರೆ ಬರಡು ಹಯನವಹುದಯ್ಯಾ
ನೀನೊಲೆದರೆ ವಿಷವೆಲ್ಲ ಅಮೃತವಯ್ಯಾ
ನೀನೊಲಿದರೆ ಸಕಲ ಪಡಿ ಪದಾರ್ಥಂಗಳು ಇಪ್ಪುವು
ಕೂಡಲ ಸಂಗಮದೇವಾ.
(ಹೋಗುವರು)

ಪ್ರವೇಶ – ೨

(ದೃಶ್ಯ ರಸ್ತಾ)

ಸ್ವಾಮಿ : ಹುಬ್ಬಳ್ಳಿಯಿ

ಶಾಂತಿ : ಯವ್ವ ;ಯವ್ವ ; ಯವ್ವ ; ಈ ಮಕ್ಕಳ ಕಾಲಾಗ ಸಾಕ ಸಾಕಾಗಿ ಹೋಗೇತಿ, ಒಂದ ಒಂದ ಎರ್ ಅಂತಾದ, ಒಂದ ಚಿರ್ ಅಂತಾದ, ಒಂದು ಹೋಡಿತಾದ ಯಾರಿಗಂತ ರಂಬಸಬೇಕು ದೇವರು ಈ ಮಕ್ಕಳರ ಯಾಕರ ಕೊಡ್ತಾನೇನು ಅಂತೀನಿ.

ಶಾಂತಪ್ಪ : ಯಾಕ್ಲೆ : ಶಾಂತಿ ಎಲ್ಲಿಗೆ ಹೊಂಟೀದೆಲ್ಲ

ಶಾಂತಿ : ನಿನಗೇನ ತರ ಚಿಂತ್ಯ ಒಂದ ಕೊಡು ಚಿಂತ್ಯ ಹಸು ಆದಾಗ ಬಂದೇನ ಹೊಟ್ಟಿ ತುಂಬಾ ಬಡದೇನ ಕೊದ್ದೊಡ್ಡಿ ಕ್ವಾಣಾ ತಿರಗದಂಗ ಪಿರಿ ಪರಿ ತಿರಕೊಂತ ಹೊಂಟೇನ.

ಶಾಂತಪ್ಪ : ಇಷ್ಟಿದ್ರ ಇಷ್ಟೈತಿ ನನ್ನ ಹಣೆಬರ, ಇನ್ನ ಮನಿಹಿಡದ ಕೂತಿದ್ನೆಂದ್ರ ಮತ್ತೊಂದು ಮನಿ ಭಾಡಿಗಿ ಹಿಡಿಬೇಕಾಗ್ತಿತ್ತು.

ಶಾಂತಿ : ಯಾಕ ?

ಶಾಂತಪ್ಪ : ಯಾಕಂತ ಏನ್ ಕೇಳ್ತಿಲೆ, ಮನ್ಯಾಗ ಒಂಭತ್ತ ಮಕ್ಕಳು ಮಗ್ಗಲ್ದಾಗೊಂದು, ಮ್ಯಾಲ ಹೊಟ್ಯಾಗೊಂದು, ಹಿಂಗಾದ್ರ ನನಗ ಎಲ್ಲಿಗಿ ಹಚ್ಚ ಬೇಕಂತ ಮಾಡೀದಿ.

ಶಾಂರಿ : ಇದು ಯಾರ ತಪ್ಪು ಅಂತೀದಿ ನೀ?

ಶಾಂತಪ್ಪ : ನಿಂದು.

ಶಾಂತಿ : ನಂದ್ಯಾಕಾಗ್ತಾದ ; ನಿಂದು, ತಪ್ಪೈತಿ ನೀನೆ ಹೊರಗ ಮಲ್ಕೊಂಡಿದ್ದಿ ಅಂದ್ರ, ಇಷ್ಟೆಲ್ಲಿ ರಂಭಾಟ್ ಆಗ್ತಿತ್ತು? ರಾತ್ರಿ ಹಗಲ ಒಂದಸವನ ದುಡ್ಡ ಫಲಾನೋಡು ನೀಎಷ್ಟು ದುಡದೀದಿ ಅಷ್ಟು ಕೂಲಿ ಕೊಟ್ಟಾನ ಆ ದೇವರು.

ಶಾಂತಪ್ಪ : ನಾ, ಹೊರಗ ಹಾಸ್ಗಿ ಹಾಸಿದ್ರು ನೀನೆಲ್ಲಿ ಬಿಡ್ತಿದ್ದಿ , ಹಾಸ್ಗಿ ಒಯ್ದು ಒಳಗ ದೇವರ ಕೋಣ್ಯಾಗ ಹಾಕತಿದ್ದಿ ಬ್ಯಾಡ ಬ್ಯಾಡ ಅಂತ ನಾ ಎಷ್ಟು ಬಡ್ಕೊಂಡ್ರು.........

ಶಾಂತಿ : ಹೂ ; ಶ್ರೀರಾಮಚಂದ್ರ ; ಮುಚಿಗೊಳ್ಳ ಬಾಯಿ ಹೇಳಾಕ ನಾಚಿಗಿ ಬರೊದಿಲ್ಲ ನಿನಗ ಯಾಕರ ಗಂಡಸಾಗಿ ಹುಟ್ಟೀ ನೀ.

ಶಾಂತಪ್ಪ : ನಾ ಗಂಡಸಾದಲ್ಲೆ, ಒಂಭತ್ತ ಮಕ್ಕಳ ಹಡದ ಮತ್ತೊಂದು ತಯ್ಯಾರ ಮಾಡೀನಿ.

ಶಾಂತಿ : ಬರೇ ; ಮಕ್ಕಳ ಹಡಿಯೂದ ಅಂದ್ರ ಗಂಡಸತನಾ ಅಲ್ಲ. ಮಾಡ್ಕೊಂಡ ಹೆಂಡ್ತಿಗಿ ಮಕ್ಕಳಿಗಿ ದುಡ್ಡ ಹಾಕಿದ್ರ ಅದು ಗಂಡಸ್ತನ.

ಶಾಂತಪ್ಪ : ಏನ ದುಡಿಬೇಕಲೇ; ಏಷ್ಟ ದುಡಿಬೇಕು ಮನ್ಯಾಗ ಜೇನ ಹುಳದಂಗ ಮಕ್ಕಳದಾವಂತ ಏನೇರ ತೊಗೊಂಡು ಹೊಸ್ತಿಲ್ದಾಗ ಕಾಲಿಟ್ಟರ ಸಾಕು ಕಸಗೊಂಡು ತಿಂದ ಬಿಡ್ತಾವು ಅದರಾಗ ಒಂದಕ್ಕಸಿಗ್ತಾದ ಒಂದಕ್ಕ ಸಿಗೊದಿಲ್ಲ.

ಶಾಂತಿ : ಮಕ್ಕಳು ಅಂದ್ಮ್ಯಾಲ ಹಂಗ ಮಾಡವು ಒಂದ ತಿಕ್ಕತಿರತಾದ ಒಂದ ಮುಕ್ಕತಿರತಾದ ಒಂದ ಕಕ್ಕತಿರತಾದ.

ಶಾಂತಪ್ಪ : ಒಟ್ಟ್ ನಿನಗ ನೋಡಿದ ಕೂಡ್ಲೆ ಅಂಜಿ ಓಡಿಹೋಗಂಗ ಆಗೇತಿ ನೋಡು.

ಶಾಂತಿ : ಥೂ ರಣ ಹೇಡಿಯೇ ; ಜೀವಗಳ್ಳನಾಗಿ ಓಡಿಹೋಗಿ ಏನು ಮಾಡ ಬೇಕೆಂದಿರುವೆ ; *(ಏಂಗ್ಸ ಹತ್ತುವನು)* ಎಲ್ಲಿ ಹೋದನು ಕರ್ಮ ಚಾಂಡಾಲ, ಅವನನ್ನು ಹಿಡಿತಂದು ನನ್ನ ಮಕ್ಕಳ ಮುಂದೆ ಹಾಕುತ್ತೇನೆ. ಒಂದೊಂದು ಹರಕೊಂಡು ತಿಂದು ನೀರ ಕುಡ್ದ ಬಿಡ್ತಾವು.

ಶಾಂತಪ್ಪ : *(ಕೆಳಗಿಳಿದು)* ಹಂಗ ಮಾಡಬ್ಯಾಡ ಶಾಂತಿ. ನನಗ ಜೀವಂತ ಸತ್ತ ಹೊಡಿಬ್ಯಾಡ. ಒಂದ ಎರಡ, ಜೇನಹುಳಾ ಮುಕ್ಕಿರಿದಂಗ ಮುಕುರಿ ನನಗ ಮುದ್ದಿ ಮಾಡಿಬಿಡ್ತಾವು.

ಶಾಂತಿ : ಸಂಜೀತನ ದುಡ್ದು ಮನೀಗಿ ಬಂದಾಗ, ಮಕ್ಕಳ ಮೈಮ್ಯಾಲ ಬಿದ್ದು ಒದ್ದಾಡಿದಾಗ, ಭಾರ ಆಗಿದ್ದು ದೇಹ ಹಗರಾಗಿ ಬಿಡತ್ತ. ಮಕ್ಕಳ ನಿನಗ ಒಲೂ ಆಗಿರಬಹುದು ಆದ್ರ ಹಡ್ದ ತಾಯಿಗಿ ಒಲೂ ಆಗೂದಿಲ್ಲ.

ಶಾಂತಪ್ಪ : ನೀ ಹಡಿಯಾಕೂ ತಯ್ಯಾರದಿ, ಜೋಪಾನ ಮಾಡೊದ್ಕೂ ನಾ ತಯ್ಯಾರದೀನಿ.

ಶಾಂತಿ : ಭೂಮಿ ಮ್ಯಾಲ ಬೆಳದ ಕಮರಿ ಕಂಟಿ, ತೆಂಗ, ಮಾವು ಹಿಂಗ ಹಲವಾರ ಗಿಡಗಳು ಹಟ್ಟಿದ್ದು ಕಂಡು ನನಗ ಒಲು ಆಗ್ಯೆತಿ ಅಂತ ಭೂಮಿ ತಾಯೇನರ ಚಿಂತಿ ಮಾಡ್ತಾಳೇನು? ಎಂದು ಇಲ್ಲ. ಅವಕ್ಕ ತನ್ನಲ್ಲಿರತಕ್ಕಂಥ ಸತ್ವವೆಲ್ಲಾ ಹಂಚಿ ಆಕಾಶದೆತ್ತರಕ್ಕ ಬೆಳಸ್ತಾಳ, ಆ ಬೆಳೆದ ಬಳ್ಳಿಯೊಳಗ ಅರಳಿದ ಹೂವಾ ಕಂಡು ಮರದ ಫಲಾಕಂಡು ಹಿರಿ ಹಿರಿ ಹಿಗ್ಗತಾಳ

ಹಾಡು

ಹೆಂಡತಿ : ಮಕ್ಕಳಿದ್ದ ಮನಿಯು ಚಂದ
ಬಳ್ಳ್ಯಾಗರಳಿದ ಹೂವು ಅಂದ ॥

ಗಂಡ : ಮಕ್ಕಳಿದ್ದ ಮನಿಯು ಚಂದ
ಬಳ್ಳ್ಯಾಗರಳಿದಾ ಹೂವು ಅಂದ ॥

ಹೆಂಡತಿ : ಹರಿವ ಹೊಳೆಗೆ ಅಲೆಯು ಚಂದ
ಹೂ ಬಿಸಿಲಿಗೆ ಮಳೆಯು ಅಂದ ॥

ಗಂಡ : ಪಕ್ಕಾ ಬಿಚ್ಚಿ ಕುಣಿವಾ ನವಲಿನಂದ
ಮಾಮರದಿ ಕೂಗುವಾ ಕೋಗಿಲೆ ಚಂದ ॥

ಹೆಂಡತಿ : ಪುಟ್ಟ ಪುಟ್ಟ ಹೆಜ್ಜೆಯಿಂದಾಡುವ ಕಂದ

ಬರಬೇಕು ಬರಬೇಕು. ಅನ್ನುವ ನಮ್ಮ ವಾಂಛಿತಕ್ಕೆ ಸಂಜೀವಿನಿಯೇ ದೊರಕಿತು.

ಸಿದ್ಧಲಿಂಗಪ್ಪ : ದಯಮಾಡಿಸಿ. ಬುದ್ಧಿ *(ಕರೆದುಕೊಂಡು ಹೋಗುವರು)*

ಪ್ರವೇಶ – ೪

ದೃಶ್ಯ ರಸ್ತಾ

ಶಾಂತಿ : ನಮ್ಮ ಕೂಡಗಿ ಸಿದ್ಧಲಿಂಗಪ್ಪನ ಹೆಂಡ್ತಿ ಗಿರೆಮ್ಮ ಗಂಡ ಕೂಸಿಗಿ ಜನ್ಮ ನೀಡ್ಯಾಳ. ಭಾಳದಿವಸಕ್ಕ ಮಕ್ಕಳಾದ್ರು ಚಿಂತಿಲ್ಲ ಕೂಸು ಭಂಗಾರಾಗೇತಿ, ತೊಟ್ಲ ಕಾರಣಕ್ಕ ಗೌಡ್ರುಗಿ ಕುಲಕರ್ಣಿಗಿ ಸಾವ್ಕಾರ್ರಿಗೆಲ್ಲ ಹೇಳಾಕಂತ ಹ್ವಾದ ನಮ್ಮ ಹಿರ್ಯಾ ಅತ್ತಾಗ ಆಗಿ ಬಿಟ್ಟಾನ ಎಲ್ಲೆರ ಆಟದ ಮಾತ ಸಿಕ್ರಸಾಕು. ಎಲ್ಲಾ ಮರತ ಕುಂತಬಿಡ್ತಾನ ನಮ್ಮವ್ವ ಅವ್ನ ಕಾಲಾಗ ಸಾಕ ಸಾಕಾಗಿ ಹೋಗೇತಿ.

ಶಾಂತಪ್ಪ : ಯಾಕ ಶಾಂತಿ. ಒಬ್ಬಾಕಿನ ಮಾತಾಡ್ಕೊಂತ ನಿಂತೀಯಲ್ಲ ಹುಚ್ಚಗಿಚ್ಚ ಹಿಡಿತೇನ ಮತ್ತ?

ಶಾಂತಿ : ಹಿಡಿಯೂದೇನ್ಮಾಡಿತ್ತು ಹುಚ್ಚ ; ಪಿರಿ, ಪಿರಿ. ತಿರಗಲ್ತಿಪ್ಪಿ ತಿರಗ್ದಂಗ ತಿರಕೊಂತ ಹೋಗು ಒಂದ ಮನಿ ಚಿಂತ್ಯ? ಮಾರಿನ ಚಿಂತ್ಯ? ಅದೇನ ಅಂತಾರಲ್ಲ ಚಿಂತಿಯಿಲ್ದ ಕ್ವಾಣಾ ಸಂತ್ಯಾಗ ನಿಂತು ಮೆಲಕ ಹಾಕತಿತ್ತಂತ, ಹೊಟ್ಟಿ ಹಸ್ತಾಗಿಷ್ಟು ಮನೀಗಿ ಬರ್ತಿದಿ, ಒಲಿಮುಂದ ಕುಂತು ಗಡಿಗಿ ಸವರಿ ತಿಂದ ಡೇಗ ಬಿಟಗೊಂತ ಹೊರಗ ಬಂದಂವ ಮತ್ತ ನಾಳಿ ಇಷ್ಟೊತ್ತಿಗೆ ನಿನ ಮಕಾ ನೋಡುದು, ಯಾರರ ಕಲ್ತಾರು ನಿನಚಾಳಿ.

ಶಾಂತಪ್ಪ : ಹಾದ್ಯಾಗ ನಿಂದರ್ಸಿ ನಮ್ಮ ಮರ್ಯಾದಿ ಕಳಿಬ್ಯಾಡಾ ಮತ್ತ? ಮನೀಗಿ ಕರಕೊಂಡ್ಹೋಗಿ ಸಂದ್ಯಾಗ ಹಾಕಿ ನಾಲ್ಕೊದಿ. ಆದರ ಮಂದ್ಯಾಗ ಮಾನಾ ಕಳ್ದ ಮಾನಗೇಡಿನ್ನ ಮಾಡಬ್ಯಾಡ ನಿನ್ಕೈಮುಗೀತೀನಿ.

ಶಾಂತಿ : ನಿಮ್ಮಪ್ಪ ನಿಮ್ಮವ್ವ ಬೇಕಾಬಿಟ್ಟಿ ನಿನಗ ಹಡದು ನನಗ ಮೂಲಾಮಾಡಿಟ್ಟು ಹ್ವಾದ್ರು ತೀರ್ತು ನಿನಗ ಮಾಡ್ಕೊಂತೀನಿ ಅಂತ ನಾ ಎಲ್ಲಿ ತೆಕ್ಕಿಬಿದ್ದದ್ನೊ, ತೊಟ್ಲಕ್ಕ ತಾಳಿ ಕಟ್ಟಿ ನನಗೀಗ ತಾಕಲಾಟ ಆಡಾಕ ಹಚ್ಚ್ಯಾರ.

ಶಾಂತಪ್ಪ : ಅಂದಲ್ಲೆ ತೂಗು ತೊಟ್ಲ ತೂಗ್ತಾನ ಐತಿ ಹ್ಯಂಗೈತಿ ನಮ್ಮಪ್ಪ ನಮ್ಮವ್ವನ ಆಶಿರ್ವಾದ

ಶಾಂತಿ : ಮಾತ ಸಿಕ್ರಸಾಕು ನಿನಗ ಮೂಗ ಕೊಯ್ಕೊಂತೀದಿ ನಡಿ ನಡಿ ತೊಟ್ಲ ಕಾರಣಕ್ಕ ಎಲ್ಲಾ ಜನ್ರಿಗೆ ಹೇಳಿ ಬಂದೀದಿಲ್ಲ ನಾನಂತು ಹೆಣ್ಮಕ್ಕಳಿಗಿ ಹೇಳಿ ಬಂದೀನಿ.

ಶಾಂತಪ್ಪ : ಹುಡುಗರು ಹಸ್ತಕುಂತ ಹುಲಿ ಆಗಿರಬೇಕಂತೀನಿ. ಅವ್ಕೇನರ ಅಡಿಗಿ ಮಾಡಿಟ್ಟ ಬಂದಿದ್ಯಾ ಇಲ್ಲ.

ಶಾಂತಿ : ಎಲ್ಲಿ ಅಡಿಗ್ಯೋ ಮಾರಾಯ. ಹಂಗ ಬಂದೀನಿ.

ಶಾಂತಪ್ಪ : ಕಾರಣ ಮನಿ ಇತ್ತು ಕರಕೊಂಡು ಬರಬೇಕಾಗಿತ್ತು.

ಶಾಂತಿ : ಮೊದ್ಲ ಕರಾರ್ ಹಾಕೇ ಹೋಗ್ಯಾರ ಹುಡುಗರಿಗಿ ಕರಕೊಂಡು ಬಂದು ಏನ್ಕೇನರ ಗಲಾಟಿ ಮಾಡಸಬಾರ್ದು ಅಂತ, ಐಲಿ ಕಡೀಗಿ ಅಂತೂ ನಮ್ಮ ಮನೀಗಿ ಬಿನ್ನಾಯ ಹೇಳೊದ ಬಿಟ್ಟಬಿಟ್ಟಾರು.

ಶಾಂತಪ್ಪ : ಯಾಕ ?

ಶಾಂತಿ : ಯಾಕಂತ ಏನಂತ ಕೇಳ್ತಿ! ಕರಕೊಂಡ ಹ್ವಾದವರ ಮನಿ ತಾಟು ತಂಬಿಗಿ ಡಣ್‌ಗುಟ್ಟಿ ಹಾರ್‍ಯಾಡ್ತಾವ, ನನಗ ನನಗ ಅಂತ ಒಂದ ಸವನ ಬಡದಾಡ್ತಾವ, ಮೊನ್ನಿ ಪೋಲಿಸ ಗೌಡ್ರ ಮನಿಗಿ ಹೋಳಗಿ ಮಾಡಾಕಂತ ಹೋದಾಗ ಹೂರಣಾ ರುಬ್ಬಾಕ ಹತ್ತಿದಾಗ ನಾವೊಂದಿಷ್ಟು ನೀವೊಂದಿಷ್ಟು ಅಂತ ಹೂರಣಾನ ತಿಂದು ಬಿಟ್ರು, ಅವರ ಇದ್ದವರು ಮತ್ತ ಬ್ಯಾಳೀಗಿ ಹಾಕಿದರು. ಪುಣ್ಯಾತ್ಮಾ ಯಾರ ಮನಿಗನ ಹ್ವಾದ್ರ ನನ ಮರ್ಯಾದೀನ ಕಳದ ಬಿಡ್ತಾರ

ಶಾಂತಪ್ಪ : ನಡಿ! ನಡಿ! ನಮ್ಮ ಗಿರೆಮ್ಮನ ತಪಸ್ಸಾಧನೆಗೆ ಸಿದ್ಧಿ ದೊರಕಿತು, ಹುಬ್ಬಳ್ಳಿಯಿಂದ ಬಂದ ನೀಲಕಂಠಸ್ವಾಮಿಗಳ ಆಶೀರ್ವಾದದಿಂದ ಮಗಾ ಹುಟ್ಯಾನ! ನಮ್ಮ ಯರನಾಳದ ಕೂಡಿಗಿಯವರ ಮನೆತನ ಬೆಳಗಾಕಂತ ಶಿವ ಹುಟ್ಟಿ ಬಂದಂಗ ಕಾಣಸ್ತೈತಿ ನೋಡ ಆ ಶಿಸು, ಶಿವಕಳೆ ಹೊತ್ತ ಬಂದೈತಿ.

ಶಾಂತಿ : ಎಂದ ಹುಬ್ಬಳ್ಳಿಯಿಂದ ನೀಲಕಂಠಸ್ವಾಮಿಗಳು ನಮ್ಮಿ ಯರನಾಳ ಗ್ರಾಮಕ್ಕ ಪಾದಾ ಹಾಕಿದ್ರೋ ಅಂದಿನಿಂದ ಊರ ಲಕ್ಷಣಾನ ಬ್ಯಾರೇ ಆಗೇತಿ. ಗುಡಿ ಗುಂಡಾರ್ದಾಗ ಸಹಿತ ಶಿವನಾಮ ರೇವಣಸಿದ್ಧೇಶ್ವರ ಗುಡ್ಯಾಗ ಕುಂತು ಶರಣರ ಕತಿ ಹೇಳೊ ಮುಂದ ಒಬ್ಬರನ ಮಿಸಕ್ಯಾಡೋದ ? ಕೇಳಬ್ಯಾಡ, ಸೂಜಿ ಬಿದ್ದರ ಸಪ್ಪಳಾಗಬೇಕು

ಶಾಂತಪ್ಪ : ಈ ದೇಹಕ್ಕ ಜ್ವಾಕಿ ಮಾಡು ಅನ್ನುವ ಉದ್ದೇಶ ಇದ್ದ ಹಾಡ ಹಾಡಿದರಲ್ಲ ನೀ ಕೇಳ್ದೇನು.

ಶಾಂತಿ : ಕೇಳಿನಲ್ಲ. *(ಹಾಡು)*

ಜ್ವಾಕಿ ನೋಡ ತಂಗಿ ಕೊಡ ಜ್ವಾಕಿನೋಡ,
ಜೋಕಿ ನೊಳಗ ಮುರಕಾಮಾಡಿ ತಿರುಗೂದು ಬ್ಯಾಡ ॥ಪ॥
ನೀರತರುವ ಹಾದಿ ಅದು ಭಾಳ ದೂರ ॥
ಆರಕಂದಕ ದಾಟ ನೀ ಹೋಗ ಬೇಕ ನೇರ ॥
ಎಡಕ ಬಲಕ ಕಮರಿ ಕಂಟ ಜಾಲಿಯ ಮರ ।
ತೆಗ್ಗ ತೆವರ ತೊಡರಗಲ್ಲಾಗ ಹೊರಬೇಕ ಭಾರ ॥ ೧ ॥
ಪಂಚ ತತ್ವದ ಕೊಡಾ ಇದು ಬ್ರಹ್ಮ ಮಾಡ್ಯಾನ ।
ಒಂಭತ್ತು ರಂದ್ರದ ಕೊಡಕ ಚಿತ್ತಾರ ತೆಗದಾನ
ಒಂದರಂಗ ಒಂದಿಲ್ಲ ಇದು ಎಂಥ ಶಾಣೇತನ
ಜ್ಯೋಲಿ ಹೋಗಿ ಬಿದ್ದರದು ಬೋಕಿ ಚೂರ್ಣ ॥ ೨ ॥
ಮೂರಳಿದು ಮುರುಗೆದ್ದು ನೀ ಇಳಿಯ ಸೋಪಾನ ।
ಆರಳಿದು ಆರಗೆದ್ದು ನೀರತುಂಬ ಸುಮ್ಮನ ।
ತಂತಿಮ್ಯಾಲ ನಡದಂಗ ತೂಕಿರಲಿ ನನಚಿನ್ನ ।
ಆಲ್ದಾಳೀಶನ ಚರಣಕ ಈ ಕೊಡ ಅರ್ಪಣ ॥ ೩ ॥
(ಹೊಗುವರು)

ಪ್ರಯೊಗ – ೫

ದೃಶ್ಯ ಮನೆ

(ತೊಟ್ಟಿಲ ಶೃಂಗರಿಸಿರುತ್ತಾರೆ. ನೀಲಕಂಠಸ್ವಾಮಿಗಳು ಬಂದು ಕೂಸಿಗೆ ಪ್ರಣಾಮಾಕ್ಷರ ಕಿವಿಯಲ್ಲಿ ಊದಿ ಉಚಿತಾಸನದಲ್ಲಿ ಕುಳಿತು ಕೊಳ್ಳುವರು.)

ಶಾಂತಿ : ಬರ್ರೆವ್ವ ಬರ್ರಿ, ಬರ್ರಿ ಕೂಡ್ರಿ

ಶಾಂತಪ್ಪ : ಬರ್ರಿ ಗೌಡ್ರ, ಕುಲಕರ್ಣೇರ ಸಾವ್ಕಾರ್ರ ಬರ್ರಿ.

ಸಿದ್ಧಲಿಂಗಪ್ಪ : ಪೂಜ್ಯರೇ; ಹೆಸರು ತಾವೇ ಸೂಚಿಸ ಬೇಕು.

ಗಿರೆಮ್ಮ : ಹೌದು ಗುರುಗಳೇ; ತಾವೇ ಸೂಚಿಸಬೇಕು ಹಣೆಯ ಬರಹವನ್ನೇ ಅಳುಕಿಸುವಂಥ ಶಕ್ತಿ ಶಿವ ಶರಣರಲ್ಲಿ ಇದೇ ಅನ್ನೋದನ್ನ ತೋರಿಸಿ ಕೊಟ್ರಿ. ಈ ಯರನಾಳದ ಕೂಡಗಿಯವರ ಮನೆತನದಲ್ಲಿ ನಾನೊಂದು ಭಾಡಿಗೆ ಎತ್ತಿನಂತೆ ಕಡಿತನಕ ದುಡಿಯೋದನ್ನ ತಪ್ಪಿಸಿ ನನ್ನುಡಿ ತುಂಬಿ ಜೋಡು ಮಾಡಿದಿರಿ.

ನೀಲಕಂಠಸ್ವಾಮಿ : ತಾಯೇ । ಗಿರಿಯಮ್ಮ ಅದು ನಿನ್ನ ತಪ್ಪಸ್ಸಿನ ಫಲ ಸಾಧನದಿಂದ ಸಿದ್ಧಿಗೇರಿರುವ ನಿನ್ನ ದೈವೀ ಸಾಕ್ಷಾತ್ಕಾರದ ಅಮರ ಫಲ, ಪುಣ್ಯಾಂಗನೆ, ಪಾವನಾಂಗನೆ ತನಗಿಲ್ಲದ ಫಲಗಳನ್ನ ಒಲವಿನಿಂದ ಸಿದ್ಧಿಸಿಕೊಂಡ ಚಿತ್ಕಳಾಪೂರ್ಣೆ, ನಿನ್ನ ಭೌಗಿಕ ಭಕ್ತಿ ಯೌಗೀಕ ಶಕ್ತಿ ಯುಕ್ತ ಗೊಂಡು ಮುಕ್ತಾಂಗನೆ, ವಿರಶೈವ ಸುಮವಾಗಿ ಜಗಕೆ ಪರಿಮಳವನ್ನ ಭರಸಿದ ರೇವಣಸಿದ್ಧೇಶ್ವರನು ಭಜಿಸಿ ಪುಣ್ಯಾರಾಧನೆ ಗೈದು ಹೆತ್ತಿರುವ ಈ ಶಿಸುವಿಗೆ ಸಿದ್ಧರಾಮನೆಂದು ನಾಮಕರಣ ಮಾಡು.

ಶಾಂತಿ : ಸಿದ್ಧರಾಮ ಸಿದ್ಧರಾಮ ಕುಟುಟ ಕುರ್ *(ಮೂರು ಸಲ)*

ಹಾಡು

ಜೋ.ಜೋ. ಜೋಜೋ. ಜೋಜೋಲಾಲಿ ಜೋಜೋ
ಕೈಲಾಸದಿಂದ ಈ ಧರೆಗೆ ಬಂದಾ ಕಂದಾ
ಮೂಕುಂದ ಯನ್ನ ಮನದ ನಂದ ಜೋಜೋ
ಬಸವಣ್ಣನ ಭಕ್ತಿಯ ಜ್ಯೋತಿ ಬೆಳಗ ಬಂದ
ಈ ನಾಡನೆಲದ ಪುಣ್ಯ ಹಣ್ಣಾಗಿ ನಿಂತ
ಶರಣೆ ಗಿರಿಯಮ್ಮನ ಗರ್ಭಸಂಜಾತ ಕಂದ

ನೀಲಕಂಠಸ್ವಾಮಿ : ಸಿದ್ಧಲಿಂಗಪ್ಪ! ಕಾರಣ ಮುಗಿದ ಮೇಲೆ ಕಾರ್ಯವೇನಿದೆ? ಶಿವನಾದೇಶವ ಹೊತ್ತು ಬಂದ ನಮ್ಮ ಕಾರ್ಯ ಮುಗಿಯಿತು. ಐದು ವರುಷದ ನಂತರ ನಾವೇ ಇಲ್ಲಿಗೆ ಬಂದು ಅಕ್ಷರಭ್ಯಾಸ ಓಂಕಾರಕ್ಕೆ ನಾವು ಶ್ರೀಕಾರ ಹಾಕುತ್ತೇವೆ. ಹುಬ್ಬಳ್ಳಿಗೆ ಹೋಗಲು ನಮಗೆ ಅನುವು ಮಾಡಿಕೊಡಬೇಕು.

ಗಿರೆಮ್ಮ : ಇಂದೊಂದು ದಿವಸವಿದ್ದು ಪೂಜೆ ಪ್ರಸಾದ ತೆಗೆದುಕೊಂಡು ಹೊಗಬೇಕು ಅಂತ ಬೇಡಿಕೋಳ್ಳುತ್ತೇನೆ.

ನಿಲಕಂಠಸ್ವಾಮಿ : ತಾಯಿ! ಗಿರಿಯೆಮ್ಮ ನಿನ್ನ ಮಾತೃ ವಾತ್ಸಲ್ಯದ ವಾರಿಧಿಯಲ್ಲಿ ಮಿಂದು ಮುಡಿಯಾಗಿರುವೆವು ನಾವು ವ್ಯರ್ಥ ಸಮಯಗಳಿಯುವಂತಿಲ್ಲ. ಪೂಜೆ ಪ್ರಸಾದ ನಿರಂತರ ಇದ್ದೇ ಇದೆ. ಕೇವಲ ನಾಲ್ಕು ಚೌಕಟ್ಟಿನ ಮಧ್ಯ ಕುಳಿತು ಪೂಜೆ ಮಾಡುವದಕ್ಕಿಂತ ಜನ ಸಮುದಾಯದ ಮಧ್ಯವಿದ್ದು ನಮ್ಮ ಪೂಜೆಸಲ್ಲಿಸ ಬೇಕಾಗಿದೆ.

ಸಿದ್ಧಲಿಂಗಪ್ಪ : ಆಯ್ತು ಬುದ್ಧಿ ; ಗಾಡಿ ವ್ಯವಸ್ಥೆ ಮಾಡಿಸುತ್ತೇನೆ.

(ಎಲ್ಲರೂ ಒಳಗೆ ಹೋಗುವರು)

ಶಾಂತಪ್ಪ : ಲೇ ಶಾಂತಿ ಎಲ್ಲರಿಗೂ ಪ್ರಸಾದಕ್ಕ ಕೂಡಸ್ತೀನಿ ನೀತಾಟು ಹಚ್ಚು ಏನಂತೀನಿ.

ಶಾಂತಿ : ಹುಂ ನಾತಾಟ ಹಚ್ಚತೀನಿ ನೀ ಏನ್ ಹಚ್ಚತೀದಿ

ಶಾಂತಪ್ಪ : ನಾನು ಪ್ರಸಾದ ಬಡಸ್ತೀನಿ.

ಶಾಂತಿ : ಎಲ್ಲಿ ಹುಡುಗರು ಬಂದ ಬಿಡ್ತಾವೇನಂತೀನಿ.

ಶಾಂತಪ್ಪ : ಬಂದ ಭಾಳ ಹೊತ್ತಾಗೇತಿ ಒಂದ ಕೊಟಗ್ಯಾಗ ಹಾಕಿ ಚಿಲಕಹಾಕಿ ಬಂದೀನೇಳ.

ಶಾಂತಿ : ಏನ್ ಖಬರಗೇಡಿ ಮನಷ್ಯಾಅದೀ ಅಂತೀನಿ. ಕೀಲಿ ಹಾಕ್ಲಿಕ್ಕ ನಿನ ಮನ್ಸಸರ ಹ್ಯಾಂಗ ಒಪ್ಪಿತು.

ಶಾಂತಪ್ಪ : ಒಂದ ಬುಟ್ಟಿ ಹೂರಣ ಗಡಬ, ಒಂದ ಬುಟ್ಟಿ ಅನ್ನ ಇಟ್ಟ ಬಂದೀನ್ಯೋ ಮಾರಾಯಳ, ತಿಂದು ಆರಾಮ ಮಲಗಿರಬೇಕೇಳ.

ಶಾಂತಿ : ನನಗಂಡ ಬಲು ಜಾಣ

(ಹೋಗುವರು)

೬ ಪ್ರವೇಶ

ಆಶ್ರಮ

ಗುಂಡಪ್ಪ ಮಾ : *(ಏಳೆಂಟು ಹುಡುಗರು ಕುಳಿತು ಪ್ರಾರ್ಥನೆ ಮಾಡುತ್ತಾರೆ.)*

ಸಿದ್ಧರಾಮ : ನಿನ್ನೆ ಬಸವಣ್ಣನವರ ವಚನ ಹೇಳಿಕೊಟ್ಟದ್ದು ಬಾಯಿಪಾಠ ಮಾಡಿಕೊಂಡು ಬಂದೀಯಾ?

ಸಿದ್ಧರಾಮ : ಮಾಡಿಕೊಂಡು ಬಂದಿದ್ದೇನೆ ಗುರುಗಳೇ.

ಗುಂಡಪ್ಪ : ಅನ್ನು! ನೋಡೋಣ.

ಸಿದ್ಧರಾಮ : ಸಗಣಿಯಾ ಬೆನಕಂಗೆ। ಸಂಪಿಗೆಯರಳಲ್ಲಿ ಪೂಜಿಸಿದೊಡೆ।
ಅದರ ಗಂಜಳ ಬಿಡದಣ್ಣಾ॥
ಕೆಸರ ಪುಥ್ಥಳಿಯ ಮಾಡಿ। ಜಲದಲ್ಲಿ ತೊಳೆದೊಡೆ।
ನಿಚ್ಚ ನಿಚ್ಚಕ್ಕೆ ಕೆಸರಹುದಲ್ಲದೆ। ಅದರಚ್ಚುಗಾ ಬಿಡದಣ್ಣಾ।
ಲೋಕದ ಮಾನವಂಗೆ। ಕರೆದು ದೀಕ್ಷೆಯು ಕೊಟ್ಟೊಡೆ।
ಆತನೇಕೆ ಭಕ್ತನಹನು। ಕೂಡಲ ಸಂಗಮದೇವಾ॥

ಗುಂಡಪ್ಪಾ : ಶಹಾಬಾಷ್ ಚೆನ್ನಾಗಿ ಹಾಡಿದೆ ನಿನ್ನ ಕಂಠಸಿರಿಗೆ ಕೋಗಿಲೆ ನಾಚಬೇಕು.

ಸಿದ್ಧರಾಮ : ಮತ್ತೊಂದು ವಚನ ಹೇಳಿಕೊಡಿ ಗುರುಗಳೇ.

ಗುಂಡಪ್ಪ : ಇಲ್ಲಿಯವರೆಗೆ ನನಗೆ ಪಾಠ ಹೇಳಿಕೊಡಿ ಗುರುಗಳೇ ಅಂತ ಯಾರೂ ಬಂದಿದ್ದಿಲ್ಲ. ಬಾ ಹೇಳಿಕೊಡುತ್ತೇನೆ.
ಹೊತ್ತಾರೆ ಎದ್ದು ಅಗ್ಗವಣಿ ಪತ್ರೆಯಾ ತಂದು
ಹೊತ್ತು ಹೋಗದ ಮುನ್ನ ಪೂಜಿಸು ಲಿಂಗವ
ಹೊತ್ತು ಹೋದ ಬಳಿಕ ನಿನ್ನನ್ನಾರು ಕೇಳರು
ಹೊತ್ತು ಹೋಗುದ ಮುನ್ನ ಮೃತ್ಯು ಮುಟ್ಟದ ಮುನ್ನ
ತೂತ್ತು ಗೆಲಸವ ಮಾಡು ನಮ್ಮ ಕೂಡಲಸಂಗಮದೇವಾ.

ಸಿದ್ಧರಾಮ : ಹುಟ್ಟು ಸಾವಿನ ಮಧ್ಯ ಇರುವ ಬದುಕಿನಲ್ಲಿಯೇ ಬದುಕು ಕಟ್ಟಬೇಕು ಅಲ್ಲವೇ ಗುರುಗಳೇ! ಈ ವಚನದ ಅರ್ಥ.

ಗುಂಡಪ್ಪ : ಹೌದು! ಹೌದು! ಸಿದ್ಧರಾಮ ಹುಟ್ಟು ಸಾವಿನ ಮಧ್ಯ ಇರುವ ಬದುಕಿನ ಬೆಳೆಯ ರಾಶಿಯನ್ನು ಮಾಡಬೇಕು. ಮಾಡಿದ್ದನ್ನ ಸರ್ವರಿಗೂ ಹಂಚಬೇಕು. ಅದುವೇ ಜೀವನ.

ಸಿದ್ದರಾಮ : ತನ್ನಂತೆ ಪರರ ಬಗೆದೊಡೆ ಕೈಲಾಸ ಅಂತ ಹೇಳತಾರಲ್ಲ ಇದಕ್ಕೆ ಅಲವೇ?

ಗುಂಡಪ್ಪ : ಹರಗೋಲು ಎಲ್ಲರನ್ನು ಕರದುಕೊಂಡು ತುಂಬಿದ ಹೊಳೆಯಿಂದ ಆಚೆ ದಡಕ್ಕೆ ಹೇಗೆ ತಲುಪಿಸುವದೋ ಹಾಗೆಯೇ ಮಾನವನ ಬದುಕಾಗಬೇಕು. ಅಂಧ, ಅನಾಥ, ಅಂಗವಿಕಲರನ್ನ, ದೀನ ದಲಿತರನ್ನ ಸರಿಸಮಾನರೆಂದು ಭಾವಿಸುವದೇ ಪರಮ

ಧೇಯವಾಗಬೇಕು. ಇವರು ಶ್ರೀಮಂತರು, ಇವರು ಬಡವರು, ಇವರು ದಲಿತರು ಎನ್ನುವ ಕೀಳರಿಮೆ ಇರಬಾರದು. ಎಲ್ಲರನ್ನೂ ಒಳಕೊಂಡು ಹೋಗುವದೇ ಶಿವನ ಪೂಜೆ. ಅದೇ ಲಿಂಗ ಬದುಕು. ಅದೇ ಜಂಗಮದ ಕೊಡುಗೆ.

ಸಿದ್ಧರಾಮ : ಜಾತಿ ಹೀನರ ಮನೆಗೆ ಜ್ಯೋತಿ ತಾ ಹೀನವೇ? ಎಂದು ಸರ್ವಜ್ಞನು ಹೇಳಿದಹಾಗೆ ಜ್ಯೋತಿಗೆ ಜಾತಿಯೇ ಇಲ್ಲಾ. ಅಂದಾಗ ಮಾನವ ಯಾಕೆ ಈ ಜಾತಿಯಗೋಡೆ ಕಟ್ಟಿಕೊಂಡ ಗುರುಗಳೇ.

ಗುಂಡಪ್ಪ : ಕಾಸಿ ಕಮ್ಮಾರನಾದ. ಬೀಸಿ ಮಡಿವಾಳನಾದ. ಹಾಸನಿಕ್ಕಿ ಅಕ್ಕಸಾಲಿಗನಾದ. ವೇದವನೋದಿ ಹಾರವನಾದ ಅಂತ ವಿಶ್ವಗುರು ಬಸವಣ್ಣನವರು ಹೇಳಿದ್ದಾರೆ. ಅವರವರ ಕಾಯಕದ ಮೇಲೆ ಈ ಜಾತಿ ನಿರ್ಮಾಣಗೊಂಡಿರುವವು. ಸಿದ್ಧರಾಮ! ಆದರೆ ಭಾಷೆಯ ಮೇಲೆ ಜಾತಿಗಳನ್ನ ನಿರ್ಮಿಸಿಕೊಂಡು ನಾ ಹೆಚ್ಚು ನೀ ಹೆಚ್ಚು ಎಂದು ಬಡಿದಾಡಿ ಮಾನವನು ತನ್ನ ಸಂಹಾರವನ್ನು ತಾನೇ ಮಾಡಿಕೊಳ್ಳತೊಡಗಿದ್ದಾನೆ.

ಸಿದ್ಧರಾಮ : ನಡೆದಾಡುವ ನೆಲ ಒಂದೇ. ಬೀಸುವ ಗಾಳಿ ಒಂದೇ. ಕುಡಿಯುವ ಜಲ ಒದೇ. ಹರಿದಾಡುವ ರಕ್ತ ಒದೇ ಇಂತಿಷ್ಟು ತಿಳಿದು ತಿಳಿದು ಮತ್ತೆ ಜಾತಿಯಬಣ್ಣ ಹಚ್ಚಿಕೊಂಡು ಮೇರಿಯುತ್ತಾನೆ. ಇಂಥವರಿಗೆ ಏನನ್ನಬೇಕೋ.

ಗುಂಡಪ್ಪ : ಈ ಜಾತಿಯ ಸಂಕರವನ್ನ ಅಳಿಸಿ ಹಾಕುವದಕ್ಕಾಗಿಯೇ ಹನ್ನೆರಡನೇಯ ಶತಮಾನದಲ್ಲಿ ಬಸವಣ್ಣನವರು ಮಧುವರಸ ಹರಳಯ್ಯನವರ ಮಕ್ಕಳ ಮದುವೆ ಮಾಡಿದಾಗ ಕಲ್ಯಾಣದಲ್ಲಿ ಕ್ರಾಂತಿಯೇ ಆಯಿತು. ಸರಿ! ನಾಳೆ ಮತ್ತೊಂದು ವಚನ ಹೇಳಿಕೊಡುತ್ತೇನೆ. ಇಂದು ಹೇಳಿದು ಕಂಠಪಾಠ ಮಾಡಿಕೊಂಡು ನಾಳೆ ಬರಬೇಕು.

ಪ್ರವೇಶ – ೭

ದೃಶ್ಯ ರಸ್ತಾ

ಅಪ್ಪಾಸಾಬಗೌಡ : ಈ ಯರನಾಳ ಅಪ್ಪಾಸಾಬ ಪೋಲಿಸಗೌಡ, ಪಾರಿಜಾತ ಆಟದೊಳಗ ಸೋಗ ಹಾಕ್ಯಾನಂದ್ರ ಸುತ್ತ ಹತ್ತ ಹಳ್ಳಿ ಜನರು ಗಾಡಿ ಕಟಗೊಂಡು ಬರತಾರ, ಅಷ್ಟಯಾಕ ಸಾಯಕಲ್ ಮೋಟಾರ ತರ್ತಾರ. ನಾ ಹಾಡುವ ಗತ್ತಿಗೆ ಹೇಳುವ ಮಾತಿನ ಶೈಲಿಗೆ ಕುಣಿಯುವ ಕುಣತಕ್ಕೆ ನಿನ ಸರಿ ಯಾರಿಲ್ಲಾಂತ ದೊಡ್ಡ ದೊಡ್ಡವರ ಹಾಡಿ ಹರಿಸ್ಯಾರ. ನಮ್ಮ ಭಾಗೇವಾಡಿ ಮಾಮಲೇದಾರ ಸಾಹೇಬರಂತೂ ಹೊಗಳಿದ್ದ ಹೊಗಳಿದ್ದು. ಅದರಾಗ ನಮ್ಮ ಮಾಧವರಾವ ಕುಲಕರ್ಣಿ ರಾಧಾನ ವೇಷ ತೊಟ್ಟ ಬಂದ್ರಂತೂ ತೀರ್ತು, ಚಪ್ಪಾಳೆ ಮ್ಯಾಲ ಚಪ್ಪಾಳೆ ಸಿಳ್ಳಿನ ಮ್ಯಾಲ ಸಿಳ್ಳು ಅವನ ವನಪ ವೈಯ್ಯಾರಕ್ಕ ಮೆಚ್ಚಿ ಹೆಂಗಸಂತ ಬಂದು ಎತ್ತಿಗೊಂಡು ಹೋಗಿ ಮುತ್ತು ಕೊಟ್ಟವರು ಭಾಳ ಜನ, ಒಟ್ಟಾರೆ ಯರನಾಳ್ದಾಗ ಪಾರಿಜಾತ ಆಟ ಐತಿ ಅಂದ್ರೆ ತೀರ್ತು ಅಂದು ಜಾತ್ರಿ ಸಾಲಂಗಡಿಗಳು ಬಿದ್ದಿರ್ತಾವು ಹೋಟಲ್ ಬೀಳ್ತಾವು.

ಕುಲಕರ್ಣಿ : ನಮ್ಮಸ್ಕಾರ್ರಿ ಅಪ್ಪಾಸಾಬಗೌಡ. ನಮ ಯರನಾಳ ರೇವಣ್ಣಸಿದ್ಧೇಶ್ವರ ಜಾತ್ರೆ ಸಮೀಪ ಬಂತು ಮತ್ತ ಆಟಾ ಎಂದು ಚಾಲೂ ಮಾಡ್ತೀರಿ, ಈ ಸಲ ಬಾಲ ಕೃಷ್ಣನ ಸೋಗ ಅಂತೂ ಕೊಡಿಗಿ ಸಿದ್ಧಾರಾಮಗ ಕೊಟ್ಟೀರಿ, ಮಾತ ಗಟ್ಟಿ ಮಾಡ್ಯಾನ ಏನ ಇಲ್ಲ ನೋಡ್ರಿ, ಯಾಕಂದ್ರ ಅವರವ್ವ ತಾಯಿ ಗಿರೆಮ್ಮ ಮೊದ್ಲ ಬಾಯಿ ಹರಕಿ, ಕಬಕಬಾ ಅಂತ ಒದ್ರಕೊಂತ ಬರತಾಳ. ಐನ ಹೊತ್ತಿನ್ಯಾಗ ಬಂದು ಎಳ್ಕೊಂಡು ಹ್ವಾದ್ ಮ್ಯಾಲ ಏನ್ಮಾಡ್ತಿರಿ? ಇದು ವಿಚಾರ ಮಾಡತಕ್ಕಂಥ ವಿಷಯ.

ಅಪ್ಪಾಸಾಬಗೌಡ : ಎಳ್ಕೊಂಡು ಹ್ವಾದ್ರ ಹೊಳ್ಳಿ ಬಂದು ಪಾತ್ರ ಮಾಡ್ತಾನ, ಮೊದ್ಲ ಮಾತ ಕೊಡಂಗಿಲ್ಲ ಕೊಟ್ಟ ಮ್ಯಾಲ ತಪ್ಪಸಂಗಿಲ್ಲ. ಯಾವ ಸಮಯಕ್ಕ ಹೇಳಿರತಾನ ಅದ ಸಮಯಕ್ಕ ಬಂದ ತೀರ್ತಾನ, ತಿಳಿತಾ.

ಕುಲಕರ್ಣಿ : ಕೃಷ್ಣನ ಸದರ ಮಾತ ಕಲಿಬೇಕಾದ್ರ ನೀವು ಮೂರ ತಿಂಗಳ ಲಾಗಾ ಹೊಡದ್ರು ಸಾಧ್ಯ ಆಗ್ಲಾರ್ದು, ವಯ್ಯಾ ಕೈಯಾಗ

ಕೊಟ್ಟಕೂಡ್ಲೆ ಒಮ್ಮೆ ಕಣ್ಣಾಡಿಸಿ ಹಂಗ ಅರಳು ಹುರಿದಂಗ ಬಾಯಿ ಪಾಠ ಹೇಳಿ ಬಿಟ್ಟಾ, ಎಂಥ ನಿಶಿತಮತಿ ಅಂತನ್ರಿ ಅಂವಾ ಅಬಬಬ...

ಅಪ್ಪಾಸಾಬಗೌಡ : ಅಲ್ಲೋ :ಕುಲಕರ್ಣಿ ತನಗ ವಿದ್ಯಾ ಕಲಿಸಿದಂಥಾ ಗುರುಗಳಾದ ಗುಂಡಪ್ಪ ಮಾಸ್ತರಗೆ ನಿಂದ್ರಿಸಿದಂವ ಇನ್ನ ನಮ್ಮ ನಿಮ್ಮಂಥವ್ರರ ಪಾಡೇನು ?

ಕುಲಕರ್ಣಿ : ಹೌದಬಿಡ್ರಿ ಅಂವಾ ಹಂಗ ಅದಾನು ಈಗ್ಲೆ ನಿಜಗುಣ ಶಿವಯೋಗಿಗಳ ಕೈವಲ್ಯ ದೊಳಗಿನ ಹಾಡುಗಳು ಮುಖದ್ಗೀತೆ.

ಅಪ್ಪಾಸಾಬಗೌಡ : ಮೊದ್ಲ ವರವಿನ ಪಿಂಡಾಣ. ದಾರಿ ನಡಿಯೂದ್ರಾಗೂ ಹಂಗನೊ ಕುಲಕರ್ಣಿ ಕಣ್ಮುಚ್ಚಿ ಕಣ್ಣ ತೆರೆಯುವದ್ರೊಳ್ಗ ಭಾಗೇವಾಡೀಗಿ ಹೋಗಿ ಬಸವಣ್ಣಗ ಕಾಯಿ ಒಡ್ಕೊಂಡು ಬಂದು ಬಿಟ್ನಂತ ನೋಡು ಮತ್ತ ಭಾವಿಯೊಳಗ ಮುಳಗಿ ಬಿಟ್ರ ಎರಡ ಮೂರತಾಸ ಮ್ಯಾಲೇಳ್ತಿದ್ದಿಲ್ಲಂತ.

ಕುಲಕರ್ಣಿ : ನೆನಸೋದ್ರಾಗ ಬಂದ ಬಿಟ್ಟ ಸಿದ್ಧರಾಮ ಬಾರೊ ಸಿದ್ದರಾಮ.

ಸಿದ್ಧರಾಮ : *(ಹಾಡುತ್ತ)* ನಾನು ಆರಂಭ ಮಾಡುವೆನಯ್ಯಾ ಗುರು ಪೂಜೆಗೆಂದು ।

ನಾನು ವ್ಯವಹಾರ ಮಾಡುವೆನಯ್ಯಾ ಲಿಂಗಾರ್ಚನೆಗೆಂದು
ನಾನು ಪರಸೇವೆ ಮಾಡುವೆನಯ್ಯಾ ಜಂಗಮ ದಾಸೋಹಕ್ಕೆಂದು
ನೀ ಕೊಡುವೆ ಎಂಬುದ ನಾನೇನು ಬಲ್ಲೆನು
ನೀ ಕೊಟ್ಟ ದ್ರವ್ಯವ ನಿಮಗಲ್ಲದೆ ಮತ್ತೊಂದಕ್ಕೆ ಮಾಡೆನು
ನಿಮ್ಮ ಸೊಮ್ಮಿಗೆ ಸಲ್ಲಿಸುವೆನು ನಿಮ್ಮಾಣೆ
ಕೂಡಲ ಸಂಗಮದೇವಾ.

ತನು ವಾಸನೆ ತೊಲಗಲು ಆರಂಭವೆಲ್ಲಾ ಗುರು ಪೂಜೆಯಾಗಬೇಕು. ಮನ ವಾಸನೆ ಮಾಸಬೇಕಾದರೆ ವ್ಯವಹಾರವೆಲ್ಲಾ ಲಿಂಗ ಪೂಜೆಯಾಗ ಬೇಕು, ಆಗ ವಾಸನೆಗಳೆಲ್ಲ ಕ್ಷಯಿಸಿ ನಿರ್ಮಲ ಪ್ರವೃತ್ತಿ ಅಕ್ಷಯಿಸಿ ನಿಲ್ಲುತ್ತದೆ. ಅಸಿಯಾಗಲಿ ಕೃಷಿಯಾಗಲಿ ಯಾಚಕ ವಾಣಿಜ್ಯ ವ್ಯವಹಾರಗಳೆಲ್ಲಾ ಮಸಿಯಾಗಲಿ, ಮಾಡುವಲ್ಲಿ ಹುಸಿಯಿಲ್ಲದಿರಬೇಕು, ಅದುವೇ ಅಸಮಾಕ್ಷನ ಬರುವು ಪಶುಪತಿಯ ಇರವು.

ಅಪ್ಪಾಸಾಬಗೌಡ : ಯಾಕಪಾ ; ಸಿದ್ಧಾರಾಮ ಎಲ್ಲಾ ಮಾತುಗಳು ಕಲ್ತಿದ್ದಿಯಾ.

ಸಿದ್ಧಾರಾಮ : ಕಲಿಬೇಕ್ರಿ ಗೌಡ್ರ ಕಲಿಬೇಕು. ಜೊತೆಗೆ ಕಲಿತೀನಿ ಅನ್ನೋ ಕಲಿತನನು ಇರಬೇಕು, ಇಲ್ಲದಿದ್ದರ ಅದ್ಕ ಮಾತು ಅನ್ನಂಗಿಲ್ಲ, ಆ ಮಾತಿನ ಅರ್ಥ ಹಾವ ಭಾವಗಳು ನಮ್ಮ ಮೈ ಮನಸು ಉಂಡಾಗ ಮಾತ್ರ ರಂಗಭೂಮಿ ಮ್ಯಾಲನ್ನಿಂತು ಮಾತಾಡಿದ್ರ ತೋರಣ ಕಟ್ಟಿದಂಗ ಆಗತ್ತ, ಸರಿಯಾಗಿ ಅರ್ಥ ಮಾಡಿಕೊಳ್ಳದ ಆ ಮಾತುಗಳು ಕಲ್ತಾಗ ಅವು ಯಾರಿಗೂ ತೃಪ್ತಿ ತರುದಿಲ್ರಿ ಕುಂತ ನೋಡುವರ ನೆತ್ತೀಗೂ ನಾಟೂದಿಲ್ಲಾ ನಿಂತ ಹೇಳವರ ಮನಕ್ಕು ಹೊಳಿಯೂದಿಲ್ಲ. ಯಾಕಂದ್ರ ಇದು ದೃಶ್ಯ. ಕಾವ್ಯ ಗದ್ಯ ಪದ್ಯ, ಕಾವ್ಯಗಳಲ್ಲಿ ದೃಶ್ಯಕಾವ್ಯ ಶ್ರೇಷ್ಠವಾದದ್ದು. ಅಂತೆಯೇ ಕವಿ ಕಾಳಿದಾಸನು **ಕಾವ್ಯೇಷು ನಾಟಕಂ ರಮ್ಯಂ......** ಎಂದು ಬಣ್ಣಿಸಿದ್ದಾನೆ, ಹೀಗೆ ಅಂತ ನಮ್ಮ ಗುರುಗಳು ಹೇಳ್ತಿದ್ರು.

ಕುಲಕರ್ಣಿ : ನಿಮ್ಮ ತಾಯಿ ಗಿರೆಮ್ಮನವರು ಒಪ್ಪಿಗಿ ಕೊಟ್ಟಾಳ ಹ್ಯಾಂಗೋ ಸಿದ್ಧಾರಾಮ ಯಾಕಂದ್ರ ನಿಮ್ಮ ತಾಯಿ ಮೊದಲ ಖೊಟ್ಟಿ ಹಿಡಿದ ಹಠ ಬಿಡೂದಿಲ್ಲ. ನಾಳೆ ಯಾರಿಗಿ ಕೇಳಿ ನನ್ಮಗನಿಗಿ ಆಟದಾಗ ಕೂಡಿ ಸ್ಗೊಂಡೀರಿ ಅಂತ ಕೇಳಿದಾಗ ನಮಗ ಮಾತ ನಿಂದ್ರತಾವ ಯಾಕ್ರಿ ಅಪ್ಪಾಸಾಬಗೌಡ್ರ.

ಸಿದ್ಧಾರಾಮ : ನಾನಂತೂ ಆ ಪಾತ್ರ ಮಾಡ್ತೀನಿ ಅಂತ ಮಾತಕೊಟ್ಟೀನಿ.

ಅಪ್ಪಾಸಾವಗೌಡ : ಆಯ್ತಾಯ್ತು! ಸಿದ್ಧಾರಾಮ ನೀನಂತೂ ಆಡಿದ ಮಾತಿಗಿ ತಪ್ಪೋದಿಲ್ಲಾಂತ ನಮಗೂ ಗೊತ್ತು.

ಕುಲಕರ್ಣಿ : ಇವತ್ತ ಬೈಠಾಕಿ ಪ್ರಾರಂಭ ಮಾಡೂನ ಯಾಕ್ರಿ ಗೌಡ್ರ ನಿಮ್ಮ ಜೇಳಜ್ಯಾಗ.

ಅಪ್ಪಾಸಾಬ : ನಮ್ಮ ಜೇಳಜಿ ಬಿಟ್ಟು ಮತ್ತೆಲ್ಲಿ ಮಾಡ್ತಿದೆಪಾ ಕುಲಕರ್ಣಿ. ರಾತ್ರೀಗಿ ಚಹಾ ನಾಷ್ಟಾ ಯಾರ ಮಾಡಿಹಾಕವರು, ಈ ಆಟಾ ನಾಟಕದ ಕಾಲಾಗ ನಮ್ಮನಿತನ ಹಾಳಾದ್ರು ನಮಗ ಚಿಂತಿಲ್ಲ ಕಾಲ ಕಾಲಾಂತರದವರೆಗೂ ಪೋಲಿಸಗೌಡ್ರ ಮನ್ಯಾಗ ಆಟಾ ನಾಟಕಗಳು ನಡಿತಿದ್ದವು ಅನ್ನು ಇತಿಹಾಸರ ಉಳಿತಾದಿಲ್ಲ? ನಡಿ ರಾತ್ರಿ ಬೈಠಾಕಿ ಸಲುವಾಗಿ ಎರಡ ಚೀಲ ಮಂಡಾಳ ತರಸ್ತೀನಿ ಭಾಗೇವಾಡಿಯಿಂದ ಎರಡು ಮಣ ಸಕ್ರಿ ತರಸ್ತೀನಿ ಮತ್ತೇನ ಬೇಕು ಹೇಳಲ್ಲ.

ಕುಲಕರ್ಣಿ : ಬೈಠಾಕಿ ನೋಡ್ಲಿಕ್ಕಂತ ಬಂದ ಮಂದೀಗಿ ಬೀಡಿ ಕಡ್ಡಿ ಅಂತೂ ಬೇಕ ಬೇಕಲ್ರಿ ಗೌಡ್ರ.

ಅಪ್ಪಾಸಾಬಗೌಡ : ಎರಡ ಬಂಡಲ ಬೀಡಿ ತರಸ್ತೀನಿ ಜೊತಗೆ ಕಡ್ಡಿ ಬುರುಜು ತರಸ್ತೀನಿ.........ಈ ಗೆಲ್ಲಿಗಿ ಹೊಂಟ್ಟಿದ್ಯೊ ಸಿದ್ಧಾರಾಮ.

ಸಿದ್ದರಾಮ : ನಮ್ಮ ತಮ್ಮಗೋಳ ಹೊಲ್ದ ಕಡೀಗಿ ಹೋಗ್ಯಾರ್ರಿ ಹೋಗಿ ಕರಕೊಂಡು ಬರತೀನಿ.

ಅಪ್ಪಾಸಾಬಗೌಡ : ಇವತ್ತ ರಾತ್ರಿ ತಪ್ಪಸಬಾರ್ದು ಆಂ? ಬೈಠಾಕಿ ನೋಡ್ಲಿಕ್ಕ ಬೇಲೂರಿನ ಜನ ನಿನ್ನ ವಾಯಿನ್ಯಾ ಕೇಳಿ ಬರತಾರ. ಮರಿಬ್ಯಾಡಾ *(ಹೋಗುವರು)*

ಸಿದ್ಧರಾಮ : ಈ ಜಗದಾಗ ಹುಟ್ಟಿ ಬಂದ್ಮ್ಯಾಲ ಆ ಸೂತ್ರದಾರನ ಅಪ್ಪಣೆ ಪ್ರಕಾರ ನಾ ಪಾತ್ರ ಮಾಡಬೇಕಲ್ಲ ಆ ಕೊಟ್ಟ ಪಾತ್ರದೊಳಗ ನನ್ನನಾ ಮರತು ಅರುವಿನ ಇರುವು ತಿಳ್ಕೊಬೇಕಾಗೇತಿ *(ನಗು)* ಆ ಸೂತ್ರಧಾರನ ದಿಗ್ದರ್ಶನ ನಿರ್ದೇಶನದಂಗ ನಾನು ಪಾತ್ರ ಮಾಡಿದಾಗ ಮಾತ್ರ ಆ ನಿರ್ವಹಿಸಿದಂಥ ಪಾತ್ರಕ್ಕೂ ಬೆಲೆ ನಟಿಸಿದ ನನ್ನ ವ್ಯಕ್ತಿತ್ವಕ್ಕೂ ಬೆಲೆ. *(ನಗು)* ಕಂದ.

ಚಂದ್ರ ಕಾಂತದ ಶಿಲೆಯಲ್ಲಿ ಬಿಂದು ಅಡಗಿದಂತೆ,
ಗೋವುಗಳಲ್ಲಿ ಗೋರಂಜನ ರಂಜಿಸಿದಂತೆ
ಶಿಲೆ ಕಾಷ್ಠಾಂಗಳಲ್ಲಿ ಅನಲ ನಡಗಿಪ್ಪಂತೆ
ಸತ್ಯರ ಹೃದಯದಲ್ಲಿ ಮೌಕ್ತಿಕದ ಪದಕದಂತೆ
ಭಾವವಿಲ್ಲದೆ ಅಡಗಿದೆ ಅಮರೇಶ್ವರ ಲಿಂಗದಲಿ
(ಹೋಗುವನು)

ಪ್ರವೇಶ – ೭

ದೃಶ್ಯ ಮನೆ

ಗಿರೆಮ್ಮಾ : ಏನ್ರಿ ; ಏನ ಮಾಡ್ತಾ ಇದ್ದೀರಿ ಮನ್ಯಾಗ

ಸಿದ್ಧಲಿಂಗಪ್ಪ : ಬಂದೆ ಗಿರಿಜಾ! ಬಂದೆ!

ಗಿರೆಮ್ಮಾ : ಅಲ್ರಿ! ನಮ್ಮಗ ಸಿದ್ರಾಮಪ್ಪ ಬೆಳೆದು ದೊಡ್ಡವನಾಗಿದ್ದಾನೆ. ರಾಚಪ್ಪ ದಾನಪ್ಪ ಅಂತ ಸಣ್ಣವರು ಅದಾರು ನಮ್ಮ ಸಮೀಪದ ಬಂಧುಗಳ ಮನೆಯಲ್ಲಿ ಬೀಳ್ಯಾಗ ರಾಚಪ್ಪನ ಮಗಳ ಸಂಗಮ್ಮ ಅನ್ನು ಹುಡಿಗಿ ಐತಿ, ಕಣ್ಣು ಮೂಗೀಲೆ ಚಲೋನು ಅದಾಳು ಹುಬ್ಬಳ್ಳೀಗಿ ಹೋಗಿ ನಮ್ಮ ಗುರುಗಳಾದ ನೀಲಕಂಠ ಸ್ವಾಮಿಗಳ

ಅಪ್ಪಣಿ ತೊಗೊಂಡು ಮುಂದಿನ ವೈಶಾಖದಾಗ ಮದವಿ ಮಾಡಿ ಬಿಡೂನು, ಯಾಕಂದ್ರ ಕಾಲಮಾನ ಪರಸ್ಥಿತಿ ಭಾಳ ಕೆಟ್ಟ ಬಂದಾವ.

ಸಿದ್ಧಲಿಂಗಪ್ಪ : ಯಾರ ಬ್ಯಾಡಂತಾರೆ ಗಿರಿಜಾ ಆದರ ಯಾವದಕ್ಕೂ ಮೊದ್ಲ ಮಾಡಿಕೊಳ್ಳವಗ ಕೇಳೂದು ಒಳ್ಳೇದು ಅಂತ ನನ್ನ ಅಭಿಪ್ರಾಯ, ಯಾಕಂದ್ರ ಜೋರಾವರಿ ಮದ್ವಿಮಾಡಿ ಜಾರಿ ಬೀಳೂದ್ಕಿಂತ ಜಾಣರಾಗಿರೋದು ಲೇಸು ಹೌದಿಲ್ಲ ?

ಗಿರೆಮ್ಮಾ : ಏನ್ರಿ ಹಂಗಂದ್ರ ? ಬುದ್ಧಿರ ಐತಿಲ್ಲ ನಿಮಗ ? ಯಾವ ತಂದಿ ತಾಯಿಗಳು ತಮ್ಮ ಮಕ್ಕಳಿಗಿ ಕೇಳಿ ಮದ್ವಿ ಮಾಡ್ಯಾರ ? ನಾವು ಕನ್ಯಾ ತಗದಿದ್ದು ಅವರು ಮದವಿ ಮಾಡ್ಕೋಬೇಕು.

ಸಿದ್ಧಲಿಂಗಪ್ಪ : ಒಲ್ಲದ ಮದವಿ ಮಾಡಿ ಹುದಲಾಗ ಸಿಗಿಬೀಳೂದ್ಕಿಂತ ಸುಮ್ಮಿರದ ಲೇಸು ; ಅಂವಾ ಎಂದ ನಾ ಮದವಿ ಮಾಡ್ಕೊಂತೀನಿ ಅಂತ ಬಂದರ ಸಾಕು ಮದವಿ ತಯ್ಯಾರ ಅಂತ ತಿಳ್ಕಬಿಡು.

ಗಿರೆಮ್ಮಾ : ಅಂವಾ ಎಂದ ಮದವಿ ಮಾಡ್ಕೊಂತೀನಿ ಅಂತ ನಿಮ್ಮ ಹತ್ತರ ಬರಬೇಕು ನೀವೆಂದ ಮದವಿ ಮಾಡಬೇಕು, ಹಗ್ಗ ಹರ್‍ಯಾಂಗಿಲ್ಲಾ ಕೋಲು ಮುರಿಯೂದಿಲ್ಲ. ಆದೇನಿಲ್ಲ ಅಂವಾ ಒಲ್ಲೆ ಅಂದ್ರೂ ಜೋರಾವರೀಲೆ ಅಕ್ಷತೆ ಹಾಕುವಾಕೀನಾ.

ಸಿದ್ಧಲಿಂಗಪ್ಪ : ಯಾರ ಬ್ಯಾಡಂತಾರೇ ಗಿರಿಜಾ ಡಾಕ್ಟರ ಹೇಳಿದ್ದು ಹಾಲು ಸಕ್ರಿ ರೋಗಿ ಬಯಸಿದ್ದು ಹಾಲ ಸಕ್ರಿ, ಕರದ ಕೇಳಲ್ಲ ಯಾರ ಬ್ಯಾಡಂತಾರ ದೇವರ ಮನ್ಯಾಗ ಅಖಂಡೇಶ್ವರ ವಚನ ಗ್ರಂಥ ಓದ್ಕೋಂತ ಕುಂತಾನ ಒಳಗ ಹೋಗಿ ಕರಕೊಂಡು ಬಾ......

ಗಿರೆಮ್ಮಾ : ಯಪ್ಪ ; ಸಿದ್ಧರಾಮಾ ಏನ ಮಾಡ್ತಿಯಪ ಒಳಗ. ಬಾ ಇಲ್ಲಿ ಸ್ವಲ್ಪ ಕೆಲಸೈತಿ.

ಸಿದ್ಧರಾಮ : ಯಾಕವ್ವ ಯಾಕ ಕರದಿ ನನ್ನ.....

ಗಿರೆಮ್ಮಾ : ನಮಗ ಸಮೀಪದ ಬಂಧುಗಳಾದ ರಾಚಪ್ಪಣ್ಣಾ ಬೀಳ್ಗ್ಯಾಗ ಅದಾನ. ಅವ್ಗ ಒಬ್ಬಾಕೀನೆ ಮಗಳು ಅದಾಳ ಹುಡಿಗಿ ಕಣ್ಣು ಮೂಗಿಲೇ ಚಲೋ ಐತಿ. ಗುಣದಾಗಂತೂ ಹೇಮರಡ್ಡಿ ಮಲ್ಲಮ್ಮ ನಿಮ್ಮಿಬ್ಬರ ಜೋಡಿ ಅಂದ್ರ ತಕ್ಕಡ್ಯಾಗಿಟ್ಟು ತೂಗಿದಂಗ ನೀ ಹೂಂ ಅಂದ್ರ ನಾಳಿಗೆ ನಿಮ್ಮಪ್ಪಗ ಬೀಳಿಗೀಗಿ ಕಳಸ್ತೀನಿ.....

ಸಿದ್ಧರಾಮ : ಯವ್ವಾ! ಈ ಮದ್ವಿ ಅನ್ನೋ ಬೇಲಿ ಹಚ್ಚಬ್ಯಾಡವ ಹಚ್ಚ ಬ್ಯಾಡ ನನಗ ಹಾಯಾಗಿರಲಿಕ್ಕಿ ಬಿಟ್ಟು ಬಿಡು. ಆಕಾಶದಾಗ

ಪಕ್ಕಾ ಬಿಚ್ಚಿ ಹಕ್ಕಿ ಹಾರಾಡುವಂಗ ನಾ ಹಾರಾಡ್ತೀನಿ ಶಿವರತಿಯೊಳಗ ಕೂಡ್ತೀನಿ ನನ್ನ ನಾ ಕಂಡ್ಕೊಂತೀನಿ.

ಗಿರೆಮ್ಮಾ : ಅಂದ್ರೇನ ಸಿದ್ಧರಾಮ ನಿನ್ಮಾತು ? ಮನೀಗಿ ಹಿರೇಮಗಾ ನೀನಾಗಿ ಈ ರೀತಿ ಮಾತಾಡೂದು ಒಳ್ಳೇದಲ್ಲ.

ಸಿದ್ಧರಾಮ : ಪ್ರಪಂಚದ ತುರಿಕಜ್ಜಿ ನಿನಗ ಹತ್ತೈತಿ. ಅದನ್ನ ಜಗಕ್ಕ ಯಾಕ ಹಚ್ಚಾಕ ಹೋಗ್ತಿ ? ಕೊರಗು ಕಾರ್ಪಣ್ಯಗಳು ಮನಸ್ಸೀಗಿ ಅಂಟಿದ ಅಂಟು ಜಾಡ್ಯಗಳು. ನೆರೆ ಹೊರೆಯವರಿಗಿ ಯಾಕ ಹಂಚತೀದಿ.

ಗಿರೆಮ್ಮಾ : ಅಂದ್ರ ನೀನೇನು ನೆರೆ ಹೊರೆಯವ್ನ ?

ಸಿದ್ಧರಾಮ : ಅಲ್ಲದೇ ಮತ್ತಿನ್ನೇನಮ್ಮ ; ನನ್ನ ನೋವು ನಲಿವುಗಳಲ್ಲಿ ನೀನು ಪಾಲುದಾರಳಲ್ಲ ನಿನ್ನ ಪಾಪ ಪುಣ್ಯಗಳಲ್ಲಿ ನಾನು ಪಾಲುದಾರನಲ್ಲ, ಅಮ್ಮಾ! ಬಿಡಿಸು ಜೀವನವು ಜಗದ ತೊಡಕುಗಳಿಂದ, ನಿನಗ ಬಿದ್ದ ತೊಡಕ ನನಗೆ ಯಾಕ ಹಾಕತೀದಿ ಅವರ ಪಾಲಿಗಿ ಅವರಿಗಿ ಬಿಟ್ಟಬಿಡು. ಹಿಡಿಗ್ವ್ಯಾಡಾಗಿಟ್ಟು ಯಾಕ ಜೀವಂತ ಶಿಕ್ಷೆ ಕೊಡವ ವಿಚಾರ ಮಾಡ್ತಿ .

ಗಿರೆಮ್ಮಾ : ಕೇಳಿದೇನ ಹಿರಿಯಾ ನಿನ್ಮಗನ ಮಾತು ? ಮಕ್ಕಳಾಗ್ಲಿಲ್ಲಾಂತ ಹನ್ನೆರಡ ದೇವರಿಗಿ ಹರಕಿ ಹೊತ್ತ್ಯಾ, ಮೂವತ್ತು ದೇವರಿಗಿ ಮುಡಿಪು ಕಟ್ಟಿಟ್ಯಾ ?

ಸಿದ್ಧರಾಮ : ಇವೆಲ್ಲಾ ನಿನ್ನ ದೈಹಿಕ ಸಂಬಂಧದ ಮಾತುಗಳಿವು, ಲೌಕಿಕವಾದದ್ದು ಅಲೌಕೀಕದ ವಿಸ್ತಾರದಲ್ಲಿ ನೀಂತು ನೋಡಿದಾಗ ಯಾರು ತಂದೆ, ಯಾರು ತಾಯಿ, ಯಾರು ಮಕ್ಕಳು, ಯಾರಿಗೆ ಯಾರಿಲ್ಲಮ್ಮಾ! ಯಾರಿಗೆ ಯಾರಿಲ್ಲ. ಮಡದಿ ಮಕ್ಕಳು ಪಡೆದ ದ್ರವ್ಯವು ಎನ್ನೊಡವೆಯೆಂದು ನೆಚ್ಚ ಬೇಡಿರೊ ಎಲೋ ಮಾನವರಿರಾ ಅವು ನಿಮ್ಮ ಒಡವೆ ಯಾದೊಡೆ ನೀವು ಮಡಿದು ಹೋಗುವಾಗ ಅವು ನಿಮ್ಮೊಡನೆ ಬಪ್ಪುವೇ ? ಹೇಳಿರೋ, ಇದನರಿತು ತಡೆಯದಲೇ ಮೃಢನ ಸೇವೇಯೊಳು ತೊಡಗಿದರೆ ಕಡೆ ಮೊಡಲಿಲ್ಲದ ಪದವಿ ದೊರಕುವದು ನೋಡಾ ನಮ್ಮ ಅಖಂಡೇಸ್ವರ ಲಿಂಗದಲ್ಲಿ ಎಂದು ಜೇವರಗಿಯ ಷಣ್ಮುಖ ಶಿವಯೋಗಿಗಳು ಹೇಳಿದ್ದಾರೆ.

ಸಿದ್ಧಲಿಂಗಪ್ಪ : ಕಸುಗಾಯೀಗಿ ಒತ್ತಿ ಹಣ್ಣು ಮಾಡಿದರ ಅದೆಂದೂ ಸಿಹಿ ಆಗೂದಿಲ್ಲ. ಬಿರಿದ ಮೊಗ್ಗೀಗಿ ಬಿಚ್ಚಿ ಅರಳಿಸಿದರ ಪರಿಮಳ

ಎಂದೂ ಬಿಡೂದಿಲ್ಲ, ಅವನಲ್ಲಿ ಮದವಿ ಮಾಡ್ಕೊಂತೀನಿ ಅನ್ನುವ ಉತ್ಕಟೇಚ್ಛೆ ಬಂದಾಗ ಮಾಡಿಕೊಳ್ಳಲಿ ಅದು ಅವನಿಗಿ ಬಿಟ್ಟಿದ್ದು.

ಸಿದ್ಧರಾಮ : ನೋಡಪ್ಪಾ ; ನಾನು ಮನೆಯೊಳಗೆ ಕಾಲಿಟ್ಟರೆ ಸಾಕು ಮದುವೆ ಎಂದ ಮಾಡ್ಕೊಂತಿ ಅಂತ ಕಿರಿಕಿರಿ ಹಚ್ಚತಾಳೆ, ನಿಮಗ ಮದುವೆ ಮಾಡೋ ಹುಚ್ಚಿದ್ದರ ತಮ್ಮಂದಿರಾದ ರಾಚಪ್ಪ ದಾನಪ್ಪಂದು ಮಾಡ್ರಿ ಯಾರ ಬ್ಯಾಡಂತಾರ, ಅದೂ ಅಲ್ದ ಮೂರು ಮಂದಿ ತಂಗಿದೇರ ಅದಾರ ಅವರ್ದು ಮಾಡ್ರಿ. ನೀರಾಗ ಈಸ ಬೀಳ್ಲಾರ್ದವನಿಗಿ ಕುಂಬಳಕಾಯಿ ಕಟ್ಟಿ ಈಸ ಕಲಸೋ ವಿಚಾರ ಮಾಡಬ್ಯಾಡ್ರಿ

ಗಿರೆಮ್ಮಾ : ಅಂದ್ರ ಮದವಿ ಮಾಡ್ಕೊಳಾರ್ದ ಹಂಗ ಸನ್ಯಾಸಿ ಆಗಿ ತಿರಗ ಬೇಕಂತ್ಯಾ ಹ್ಯಾಂಗ ?

ಸಿದ್ಧರಾಮ : ಸನ್ಯಾಸಿ ಆಗ್ತೀನೊ ? ಏನ್ ಸಂಸಾರೀನೆ ಆಗ್ತೀನೊ.

ಗಿರೆಮ್ಮಾ : ನೋಡ್ತಮ್ಮಾ! ಹಣಿ ಕೊಯ್ದು ಮಿಣಿ ಮಾಡಿದ್ರೂ ನಾನೇನ್ ಬಿಡು ಪೈಕಿ ಅಲ್ಲ ನಾ ನಿನ ಮದವಿ ಮಾಡುವಾಕೀನ.

ಸಿದ್ಧರಾಮ : ಯವ್ವಾ ; ನೀನ್ನ ವಿಚಾರ ಏನೈತಲ್ಲ ಅದು ತಿರತಿರಗಿ ಈ ಭವಕ್ಕ ಬರೋ ವಿಚಾರದ್ದು. ನನಗ ಈ ಭವಕ್ಕ ತಿರು ತಿರುಗಿ ಬರೂದು ಬ್ಯಾಡಾಗೈತಿ. ಇದ ಜನ್ಮನ ಕೊನಿ ಮಾಡ್ಕೊಳ್ಳ ಬೇಕಂತ ಮಾಡೀನೆವಾ

ಗಿರೆಮ್ಮಾ : ಹಿಂಗಂದವರ ಮದವಿ ಮಾಡ್ಕೊಂಡು ಮನಿ ತುಂಬಾ ಮಕ್ಕಳನ್ನ ಹಡದು ಸಂಸಾರಿಗಳಾದ್ರು ಸಂಸರದೊಳಗ ಇದ್ದಷ್ಟು ಸನ್ಯಾಸಿ ಜೀವನ್ದಾಗ ಏನೈತಿ ? ಈ ಪ್ರಪಂಚದ ಸಿಹಿ ಕಹಿಗಳನ್ನ ಅರಿತು ಕಷ್ಟ ಸುಖಗಳನ್ನ ಗೆದ್ದು ಈ ಭವದಿಂದ ಪಾರಾಗಿ ಹೋಗೂದ ಮನುಷ್ಯನ ಕರ್ತವ್ಯ ಐತ್ಯೊ. ಸಿದ್ಧರಾಮಪ್ಪ.

ಸಿದ್ಧರಾಮ : ಅದೇ ರಾಗ ಅದೇ ಭೋಗ *(ನಕ್ಕು)* ನಾನೇನು ನಿನಗೆ ಹೆಚ್ಚಿಗೆ ಹೇಳಲಾರೆ ನಿನ್ಹ್ಯಾಂಗ ಮಾಡ್ತೀಯೋ ನಾನಂತೂ ನನ್ನ ಮನಸಿನ ವಿಚಾರ ನಿನ್ನ ಮುಂದಿಟ್ಟೇನಿ. ಹೇಸಿಕೆಯ ಕಿಸುಕುಳದ ಹಸಿ ಮಾಂಸ ತುಂಬಿದ ತೊಗಲಿನ ಚೀಲಕ್ಕ ಹೊತಗೊಂಡು ತಿರುಗೂದು ನನ್ನಿಂದ ಸಾಧ್ಯ ಆಗೂದಿಲ್ಲಾಂತ ಎಷ್ಟಸಲ ಹೇಳಬೇಕವಾ.

ಗಿರೆಮ್ಮಾ : ಅದು ಹೇಡಿಗಳ ಲಕ್ಷಣ ಅಂತಾರ, ಜಗದ ಜ್ಯೋತಿಯಾಗಿ ಬಾಳಿದ ಬಸವಣ್ಣನವರು ಒಂದಲ್ಲ ಎರಡ ಮದವಿ

ಮಾಡ್ಕೊಂಡು ಈ ಸಂಸಾರ ಗೆದ್ದು ಅಣ್ಣಾ ಬಸವಣ್ಣಾ ಅನ್ನಿಸಿಗೊಂಡ್ರು ಎಳಂದೂರಿನ ಅರಸ ಮಂಗಳಾದೇವಿಗೆ ಮದುವೆಯಾಗಿ ಆರು ಶಾಸ್ತ್ರಗಳನ್ನ ಬರೆದು ನಿಜಗುಣ ಶಿವಯೋಗಿಗಳಾಗಿ ಶಂಬುಲಿಂಗನ ಬೆಟ್ಟಾ ಹತ್ತಿದರು, ಶಿಸುನಾಳದ ಶರೀಫ ಸಾಹೇಬರು ಹಜ್ಜುಮಾಗ ಮಾಡ್ಕೊಂಡು ನಗನಗ್ತಾನೆ ತತ್ವಗೀತೆಗಳನ್ನ ಬರದು ಬ್ರಹ್ಮದೊಳಗಾದ್ರು, ಸಂಸಾರದಿಂದನ ಸದ್ಗತಿ ಅಂತ ಸಾರಿದರು, ನಾ ಮಾತ್ರ ನಿನ ಮದವಿ ಬೀಳಗಿ ರಾಚಪ್ಪನ ಮಗಳ ಸಂಗಮ್ಮನ ಜತಿ ಮಾಡುವಾಕೀನ.

ಸಿದ್ಧರಾಮ : ಕಾಲ, ನದಿ, ವರ್ಷ ಋತು ಮಾಸ ದಿನ ಚಣಘಳಿಗೆ ಸಾಲು ಸಾಲಾಗಿ ನನ್ನ ಬಾಳ ಭವಿಷ್ಯತ್ತಿನ ಪುಟಗಳೆಣಿಸುತ್ತಿರುವಾಗ ನಾನರ ಯಾಕ ಒಲ್ಲೆಂತನ್ನಲಿ ನಿನ ಮನಸಿಗಿ ಹ್ಯಾಂಗ ಬರತಾದ ಹಂಗ ಮಾಡು *(ಒಳಗೆ ಹೋಗುವನು)*

ಗಿರೆಮ್ಮಾ : ಹಿರಿಯಾ ;ನನ್ಮಗ ಸಿದ್ಧರಾಮಪ್ಪಂತು ಒಪ್ಪಿಗಿ ಕೊಟ್ಟ ಮುಂದ ಹ್ಯಾಂಗ ಮಾಡ್ತಿ ನೋಡು.

ಸಿದ್ಧಲಿಂಗಪ್ಪ : ಒತ್ತಿ ಹಣ್ಣಮಾಡಾಕ ಹೋಗಬ್ಯಾಡ ಗಿರಿಜಾ. ತಂದಿ ತಾಯಿ ಮಾತು ಮೀರಬಾರ್ದು ಅನ್ನು ದೃಷ್ಟಿಯಿಂದ ಅಂವಾ ಒಪ್ಪಿಗಿ ನೀಡಿರಬೇಕು ಅಂತ ನನಗನಸ್ತೈತಿ.

ಗಿರೆಮ್ಮಾ : ನಾನೇನಂವಗ ಕೆಡಕ ಮಾಡಾಕ ಹೋಗುದಿಲ್ಲ. ಅಂವ ಹಂಗಂತಾನಂತ ತಿಳದ ನಾವು ಮದವಿ ಮಾಡದ ಬೀಟ್ರ ನಾಳೆ ಜನಾ ಏನಂದೀತು. ನಡಿ ನಡಿ ಬೆಳ್ಗೀಗಿ ಹೋಗಿ ಬರೂನು *(ಒಳಗೆ ಹೋಗುವಳು)*

ಸಿದ್ಧಲಿಂಗಪ್ಪ

ಪ್ರವೇಶ – ೯

ದೃಶ್ಯ ರಸ್ತಾ

ಶಾಂತಪ್ಪ : ಏನ್ ಪಾರಿಜಾತ ಆಟಾ ಆಯ್ತಿ ಕುಂದ್ರಲಿಕ್ಕಿ ಜನಗಳಿಗಿ ಜಾಗಾ ಸಿಗಲಿಲ್ಲ. ಅಬಬಬ.. ಅದರಾಗದರಾಗ ನಮ್ಮ ಯರನಾಳ ಅಪ್ಪಾಸಾಬಗೌಡ್ರ ಹಾಡ್ಕಿ ಏನ್ ಕೂಚ ಎತ್ತತಿದ್ರಿ, ನಮ್ಮ ಕೂಡಿಗಿ ಸಿದ್ಧಾರಾಮನಂತೂ ಕೃಷ್ಣಾಗಿ ಬಂದಾಗ ಚಪ್ಪಾಳಿ ಮ್ಯಾಲ

ಚಪ್ಪಾಳಿ ಅರಳ ಹುರಿದಂಗ ಮಾತಾಡೂದು ಕಂಡು ಸುತ್ತಲೂರಿನ ಜನರು ಆಯೇರಿ ಮಾಡೂದ ಮಾಡೂದು ಏನ ಮಾತುಗಳು ಅವು ನೆನಸಿಕೊಂಡ್ರ ಮೈ ಜುಮ್ ಅಂತೈತಿ. ನಂಬು ನೀ ದೈವವನು, ನಂಬು ಸ್ವಯಂಭೂನನ್ನು, ನಂಬು ಸಾಂಬನ ಮನದಿ ತುಂಬಿ ಭಕ್ತಿಯನ್ನು ಬಿಂಬವೋ? ಕಂಬವೋ? ನಂಬಿಕೆ ಮಾತ್ರದಿಂದಿಂಬುಗೊಳುವುದು ಈ ಜೀವ ಮರಳಿ ಮಾನವಾ, ಹಂಗ ಸಿಡ್ಲ ಹೊಡ್ದಂಗ ಆಗ್ತಿತ್ತು, ಹಂಗ ನವಿಲ ಕುಣತ ಏನ ವನಪ ಏನ ವೈಯ್ಯಾರ.

ಶಾಂತಿ : ಹುಚ್ಚಗಿಚ್ಚ ಹಿಡಿತೇನ ನಮ್ಮವ್ವಾ! ನಮ್ಮ ಹಿರಿಯಾ ಹ್ಯಾಂಗ್ಯಾಂಗ ಮಾತಾಡಾಕ ಹತ್ತ್ಯಾನಲ್ಲಾ ಅಂತೀನಿ.

ಶಾಂತಪ್ಪ : ರುಕ್ಮಿಣಿ ಆಗಿ ನಮ್ಮ ಚನಬಸಪ್ಪ ರಾಧಾ ಆಗಿ ಕುಲಕರ್ಣಿ ಮಾದವರಾಯರು. ನಿಲಿಗಿ ಹಿಡಿದು ಕುಣಿಯೂದು ಕಂಡು ಎಷ್ಟೋ ಜನ್ರು ಬೆನ್ನ ಹತ್ತಿ ಬಿಟ್ಟಿದ್ರು ಇವ್ರು ಹೆಣ್ಣಗಳು ಅದಾವಂತ.

ಶಾಂತಿ : ಏ : ಹಿರಿಯಾ?

ಶಾಂತಪ್ಪ : ಕತ್ ಕಲಲಲ....

ಶಾಂತಿ : *(ಚೀರಿ)* ನನಗಂಡಗ ದೆವ್ವ ಬಡದೈತಿ. ಅಂದಲ್ಲೊ ಹಂಗ ಕುಣಿಯಾಕ ಹತ್ತ್ಯಾನ ಯಾರಲ್ಲಿ ಕರಕೊಂಡು ಹೊಗಂದಿ ಅಂತೀನಿ. ಏ ಹಿರಿಯಾ......

ಶಾಂತಪ್ಪ : ನಿನ್ನ ಹೆಡ ಮುರಿಗಿಯಂ ಬಿಗಿದು ದರದರನೆ ಎಳೆದು ಕೊಂಡು ಹೋಗಿ ಸಮುದ್ರದಲಿ ಬಿಸಾಕ ಬಿಡುವೆ.

ಶಾಂತಿ : *(ಅಳುತ್ತ)* ಅಯ್ಯಯ್ಯ ಯವ್ವಾ, ಇವತ್ತಿಗಿ ಸರದುಕುಂದ್ರು ಅಂತ ಅನ್ನಲಾರ್ದ ನನ್ನಗಂಡ ನನ್ನ ಹೆಡಮುರಗಿ ಕಟ್ಟಿ ಸಮುದ್ರದಾಗ ಒಗಿತೀನಿ ಅಂತಾನ *(ಅಳುವಳು)*

ಶಾಂತ : ಎಲೆ; ನಾರಿ ನಿನ್ನ ಮುಡಿಯಂ ಪಿಡಿದು ದರದರನೆ ಎಳೆದು ಕರೆತರುವೆ ನನ್ನ ಓಲಗಕೆ.

ಶಾಂತಿ : *(ಅಳುತ್ತ)* ನಾ ಏನ್ ತೆಪ್ಪ ಮಾಡೀನಂತ ದರದರ ಎಳಿತೀದೊ ಮಾರಾಯ.....*(ಅಳುವಳು)*

ಶಾಂತಪ್ಪ : ಇದಾವ ಗಾರ್ದಭರಾಗ, ಈ ರಾಗದಲ್ಲಿ ಎಷ್ಟು ರಾಗಗಳು ಮಿಶ್ರವಾಗಿವೆ ಆಹಾ!

ಶಾಂತಿ : ಹಿಂಗ್ಯಾಕ ಮಾಡಾಕ ಹತ್ತೀದ್ಯಾ ಮಾರಾಯ

ಶಾಂತಪ್ಪ : ದೂರ ಸರಿದು ನಿಲ್ಲು ಪಾಪಾತ್ಮಳೆ ಪತಿಯ ವಚನವನ್ನು ಪರಿಪಾಲಿಸದ ನೀನೆಂಥ ಸತಿಯೇ

ಶಾಂತಿ : ನಾನ್ಯಾವಾಗ ನಿನ್ನ ವಚನ ಪಾಲಿಸಿಲ್ಲ ಮಾರಾಯ

ಶಾಂತಪ್ಪ : ನಿನ್ನ ಮಧ್ಯರಾತ್ರಿಯಲಿ ಬಂದಾಗ.... ನೆನಪಿಸಿಕೊ

ಶಾಂತಿ : ಸಬ್ ನಿದ್ದಿ ಹತ್ತಿದಾಗ ಬಂದು ಚಿಮಣಿ ಹಚ್ಚಂದ್ರ ಯಾರ ಹಚ್ಚತಾರ

ಶಾಂತಪ್ಪ : ಅಂದಾಗ ! ಪತಿಯ ವಾಕ್ಯ ಪರಿಪಾಲಿಸದಂತಾಯಿತೇ ಥೂ ನೀಚಳೆ, ಥೂ ಅಧಮಾಧ ಮಳೆ.

ಶಾಂತಿ : ಹಿಂಗ ನೀ ಕಂಡಂಗ ಬೈಯ್ಯಾಕ ಹೋಗ್ಬ್ಯಾಡ ಮತ್ತ ? ಸಬ್‌ರಾತ್ರ್ಯಾಗ ಬಂದ ಎಬಿಸಿದರ ಯಾರ ಏಳ್ತಾರ.

ಶಾಂತಪ್ಪ : ಹೆಂಡತಿ ಆದ ಮ್ಯಾಲ ಏಳಬೇಕು ಪತಿಯ ಸೇವೆ ಮಾಡಬೇಕು.

ಶಾಂತಿ : ಹಿಂಗ ಸೇವಾ ಮಾಡೆ, ಮನಿ ತುಂಬಾ ಮಕ್ಕಳಗ್ಯಾವ, ಕುಂದ್ರಲಿಕ್ಕಿ ಜಾಗಾ ಸಿಗುವಲ್ದು, ಅಂಥಾದ್ರಾಗ ಬಂದು ಕೌದಿ ಹಿಡದ ಜಗ್ಗೂದು, ಕಾಲಿನಿಂದ ತಿವಿಯೂದ, ನೀರಡಿಕೆ ಆಗ್ಯಾದ ನೀರ ತುಂಬಿಕೊಡು ಅಂತ ಕೇಳಿ ನಿದ್ದಿ ಹಾಳ್ಮಾಡೂದು.

ಶಾಂತಪ್ಪ : ಹಸಿವಿಯಿಂದ ಬಂದ ಪತಿ ಪರಮೇಶ್ವರನಿಗೆ ಹೊಟ್ಟಿತುಂಬ ಉಣ್ಣಿಸಿದಿದ್ದರೆ. ಅವಳೆಂತು ಸತಿಯಾಗುವಳು.

ಶಾಂತಿ : ಉಣಬ್ಯಾಡಂತ ಯಾರ ಕೈ ಹಿಡದ ಕುಂತಾರ. ಸದಾ ತೆರದ ಬಾಗಿಲಾ ತೆರದಂಗ ಇರತಾದ, ಬಂದೇನ ಕಡ್ಡಿಕೊರ್ದ ದೀಪ ಹಚ್ಚಿ ಪುಟ್ಯಾಗ ರೊಟ್ಟಿ ಇದ್ರ ತಿಂದ ಮಲ್ಕೊ ಬೇಕು, ಇಲ್ಲದಿದ್ದರ ಯಾರ ಹಿಂದ ಹೋಗಿದ್ದಿ ಅವರ ರೊಟ್ಟಿ ಪುಟ್ಟಿ ಖಾಲಿ ಮಾಡಿಬರಬೇಕಪ

ಶಾಂತಪ್ಪ : ಮಂದಿ ರೊಟ್ಟಿ ಬುಟ್ಟಿಗಿ ಬಾಯಿ ಹಾಕಿದ್ರ ಇದು ಕಳ್ಳ ನಾಯಿ ಅಂತ ತಿಳದ ಕೊಳವೀಲೆ ಹೊಡದು ಟೊಂಕಾ ಮುರಿತಾರ. ಇಲ್ಲಾ ಬಡಗಿ ತೊಗೊಂಡ ಗದಮಿ ಕೈಬಿಡ್ತಾರ.

ಶಾಂತಿ : ಹಿಂಗಂತ ತಿಳದು ಹೊತ್ತಿನ ಸರಿಯಾಗಿ ಬಂದು ಉಂಡ್ರ ತೃಪ್ತಿ ಆಗ್ತೈತಿ ಕಣ್ತುಂಬಾ ನಿದ್ದಿ ಬರ್ತೈತಿ

ಶಾಂತಪ್ಪ : ನಡಿ ನಡಿ ಮಾರಾಯಳ! ನಮ್ಮ ಯರನಾಳದ ಕೂಡಿಗಿ ಗಿರೆಮ್ಮನ ಮಗ ಸಿದ್ಧರಾಮಪ್ಪನು ಮದವಿ ಐತಿಲ್ಲ ಅಡಗಿ ಮಾಡಾಕ ಹೋಗೂನ ನಡಿ.

ಶಾಂತಿ : ಬೀಳಗಿ ರಾಚಪ್ಪನ ಮಗಳಂತ, ಹೌದಿಲ್ಲ

ಶಾಂತಪ್ಪ : ಹೌದ ಬಿಡು! ನಮ್ಮವ್ವ ಆ ತಾಯಿ ಹೇಮರಡ್ಡಿ ಮಲ್ಲಮ್ಮ ಆ ಸಂಗಮ್ಮ ನೀ ಅದಿ ನೋಡು ದುರ್ಗಮ್ಮ

ಶಾಂತಿ : ಅಕಿ ನಮ್ಮ ಮನಿ ದೇವರೇಳ

ಶಾಂತ : ಅಂದಲ್ಲೆ ದುರ್ಗಿ ಅವತಾರ ತಾಳತೀದಿ, ಆಗಾಗ ಬಾಬಾ ಹೋಗನ ಬಾ *(ಹೋಗುವರು)*

ಹೆಂಡತಿ : ನೀ ಹಿಂಗ ನೋಡ ಬ್ಯಾಡ ನನ್ನ

ಪ್ರವೇಶ – ೧೦

ದೃಶ್ಯ ಹೊಲ ಬೆಳದ ಪೈರು

ಸಿದ್ಧರಾಮ : ನಮ್ಮೌವ್ವ ! ಭೂಮಿ ತಾಯಿ ಎಷ್ಟು ಚಂದ ಕಾಣಸ್ತಾಳ ಹಸಿರು ಸೀರೆ ಉಟ್ಟು ಅದಕೊಪ್ಪುವಂಥ ಕುಪ್ಪಸತೊಟ್ಟು ಈಗ ತಾನೆ ಅರಳಿದ ಹೂವುಗಳನ್ನ ತನ್ನ ಮುಡಿಗೆ ಶ್ರೀಂಗರಿಸಿ ಮೂಡಣದಿಂದ ಹೊರಟ ಸೂರ್ಯನನ್ನೆ ಕುಂಕುಮವನ್ನಾಗಿರಿಸಿ, ಚಂದ್ರನನ್ನೇ ಮೂಗುತಿಯನ್ನಾಗಿರಿಸಿ, ಬಳ್ಳಿಗಳೆಲ್ಲಾ ಬಳೆ ಕಾಲೂಂಗುರ ವಡ್ಯಾಣ ವಾಗಿರಿಸಿಕೊಂಡು, ಅಷ್ಟ ಮದಗಳಿಗೆ ತರಿಯಾಕ ಬಲಗೈಯ್ಯಾಗ ಕುಡಗೋಲು, ಷಡ್ರಿಪುಗಳಿಗೆ ಬಿಗಿಯಾಕ ಎಡಗೈಯಾಗ ಹಗ್ಗ ಹಸಿದ ಮಕ್ಕಳಿಗೆ ಪ್ರಸಾದ ಮಾಡಿಸಲು ತಲೆಯ ಮೇಲೆ ಬುತ್ತಿ ಹೊತ್ತುಕೊಂಡು ಹೆಜ್ಜೆಯಿಡುವ ದೃಶ್ಯಕಂಡು ನನ ಮನಸು ಮೌನಾಗೇತಿ. ಏಕಾಂತ ಸಮಯದೊಳಗ ಲೋಕಾಂತದ ವಿಷಯ ತಿಳಿಸಿ ತಿಳಿಯಾಗಿಸಿ ಉಳಿಸಿ ಉಳೂಮೆಯಾಗಿಸಿ ಬಾಳಿ ಎಂದು ಬೋಧಿಸಲು ಹೊರಟ ಶ್ರೀದೇವಿಗೆ ಸಾವಿರ ಸಲ ಶರಣು ಸಲ್ಲಸ್ತೀನಿ *(ನಮಸ್ಕರಿಸುವನು)*

ಸಂಗಮ್ಮ : ರೀ! ನಾನು ನಿಮ್ಮ ಹೆಂಡತಿ

ಸಿದ್ಧರಾಮ : ಕಾರ್ಯೇಷು ಮಂತ್ರಿ, ಶಯನೇಷು ರಂಭೆ, ಭೋಜೇಷು ಮಾತಾ, ಕರುಣೇಷು ದಾಸಿ,ರೂಪೇಷು ಲಕ್ಷ್ಮೀ ಕ್ಷಮೆಯ ಧರಿತ್ರಿ ಹೀಗೆ ಹಲವಾರು ರೂಪ ಧರಿಸಿ ಈ ಪ್ರಪಂಚದ ಬಳ್ಳೀಗಿ ಮೂಲ ಕಾರಣಳು ಆಗಿರುವ ಸಂಗು ಎಷ್ಟೊತ್ತಾಯಿತು ನೀನು ಬಂದು.

ಸಂಗಮ್ಮ : ಇದ ಈಗ ಬಂದೀನ್ರಿ ಅತ್ತೆಯವರು ಹೊಲಕ್ಕ ಹೋಗಿ ನಿನ್ನ ಪತಿಗೆ ಬುತ್ತಿಕೊಟ್ಟು ಬರುವಾಗ ದನಕರುಗಳಿಗೆ ಮೇವು ತೆಗೆದುಕೊಂಡು ಬಾ ಅಂತ ಹೇಳಿದ್ದಾರೆ.

ಸಿದ್ಧರಾಮ : ತಾಯಿಯ ಮಮತೆಗೆ ಮೇರೆಯಿಲ್ಲ ಸಂಗು, ನೋಡು ದಿನ ನಿತ್ಯದ ಬಳಕೆಯಲ್ಲಿ ಬಾಳುವ ಮಾರ್ಗವನ್ನ ಹ್ಯಾಂಗ

ಕಲ್ಪಿಸಿಕೊಡ್ತಾಳ ನೋಡು. ಮುಂದೆ ನೀನು ತಾಯಿ ಯಾದಾಗ ನಿನ್ನ ಮಕ್ಕಳಿಗೆ ರೂಪಿಸುವ ಪರಿಪಾಠ ಹ್ಯಾಂಗ ಹೇಳಿಕೊಡ್ತಾಳ ನೋಡ ನಿನಗ *(ನಗು)* ಇದು ಎಂಥ ಪರಿಪಾಠವಿದು ತಿಳಿಯದವರಿಗೆ ಏನ ಕಾಡ್ತಾಳ ಕೂಡಿಗಿ ಗಿರೆಮ್ಮ, ಈಕೆ ಎಂಥ ರಾಕ್ಷಸಿ ಗಂಡಾ ಹೆಂಡ್ತೀಗಿ ವಿಶ್ರಾಂತಿ ಇಲ್ದಂಗ ದುಡಿಯಾಕ ಹಚ್ಚತಾಳ ಅಂತ ಅನಸ್ತೈತಿ ಹೌದಿಲ್ಲ ?.

ಸಂಗಮ್ಮ : ಬರ್ರಿ ಊಟಾ ಮಾಡಿ ವಿಶ್ರಾಂತಿ ಮಾಡ್ರಿ ನಾನಷ್ಟು ಹೊಲ್ದಾಗ ಕಳೆ ತೆಗೆದು ಮೇವು ಮಾಡ್ತೀನಿ

ಸಿದ್ಧರಾಮ : ಸಂಗು, ವಿಶ್ರಾಂತಿ ಮಾಡಬೇಕಾ ನಾನು

ಸಂಗಮ್ಮ : ಹುಂ! ಮನೆಯಲ್ಲಿಯೂ ಎಡೆಬಿಡದ ಕೆಲಸ. ಇಲ್ಲಿ ಹೊಲದಲ್ಲಿಯೂ ಕೆಲಸ ಸ್ವಲ್ಪ ವಿಶ್ರಾಂತಿ ಬೇಡವೇ.

ಸಿದ್ಧರಾಮ : ವಿಶ್ರಾಂತಿ ಅದೊಂದೊಂದು ಅಂದ ಚಂದದ ಉಡುಗೆ ಆದರೆ ಅದನ್ನೇ ಸದಾಕಾಲ ತೊಟ್ಟರೆ, ಅದು ಅಂದವು ಅಲ್ಲ, ಚಂದವು ಅಲ್ಲಾ ಕೆಟ್ಟು ಹೋಗುತ್ತದೆ.

ಸಂಗಮ್ಮ : ಅದೃಷ್ಟವೆನ್ನುವದು ಯಾವಾಗಲೂ ಕಾರ್ಯಚಟುವಟಿಕೆಯನ್ನೇ ಹಿಂಬಾಲಿಸುವದಂತೆ

ಸಿದ್ಧರಾಮ : ನಿಜ! ಉರಿಯುತ್ತಿರುವ ದೀಪ ತನ್ನ ಪ್ರಕಾಶಕ್ಕ ಕುಂದು ತರದಂತೆ, ಇತರೇ ಸಾವಿರಾರು ದೀಪಗಳನ್ನು ಹೊತ್ತಿಸಬಲ್ಲುದು ಎನ್ನುವದಕ್ಕೆ ನೀನೆ ಸಾಕ್ಷಿ ಸಂಗು. ನೀನೆ ಸಾಕ್ಷಿ ನಾನೆಂಥ ಅದೃಷ್ಟಶಾಲಿ. ನಾನೆಂಥ ಅದೃಷ್ಟ ಶಾಲಿ.

ಸಂಗಮ್ಮ : ಆದು ನಾನು ಅನ್ನುವಂಥ ಮಾತು. ನನ್ನ ದೇವರ ನಿಜವಾಗಿಯೂ ನಾನು ಭಾಗ್ಯವಂತೆ ಅದೃಷ್ಟವಂತೆ ನಿಮ್ಮಂಥ ಪತಿದೇವರನ್ನ ಪಡೆದದ್ದು ಕಣ್ಣಿಗೆ ಕಾಣದ ಆ ಸ್ವರ್ಗವನ್ನೇ ನಾನಿಲ್ಲಿ ಪಡೆದುಕೊಂಡಿದ್ದೇನೆ. ನೋಡದ ದೇವರನ್ನೇ ನಾನಿಲ್ಲಿ ಕಂಡು ಕೊಂಡಿದ್ದೇನೆ.

ಸಿದ್ಧರಾಮ : ಸಂಗು, ನೀನಾಡುವ ಮಾತುಗಳು ಬಹಳ ಎತ್ತರವಾದವು. ನಿಲುಕದ ನೀಲ ನಭದಾಚೆಗಿನವು ಅನಂತತೆಯಲ್ಲಿ ಏಕಾಂತ ಬಯಸುವವರ ಮಾತುಗಳಿವು.

ಸಂಗಮ್ಮ : ಬೇವು ಬೆಲ್ಲಗಳನುಂಡೆಯುನ್ನುಂಡ ಪತಿ ದೇವರ ಮಾರ್ಗದರ್ಶನದಲ್ಲಿ ಸಾಧಕಿಯಾದವಳು ನಾನು. ನಾನು ಇನ್ನು ತಮ್ಮಿಂದ ಬಹಳಷ್ಟು ಕಲಿಯಬೇಕಾಗಿದೆ.

ಸಿದ್ಧರಾಮ : ಸಂಗು! ಏಸುದಿನ ಲೋಕವುಂಡರು ಗುನಿಯೇ ಮುಕ್ಕು ಆಗಲಿಲ್ಲ ಎನ್ನುವ ಶರಣ ವಾಣಿಯಂತೆ ನಾವೀರ್ವರು ಸದಾ ಬರುತ್ತಲೇ ಇದ್ದೇವೆ. ಅಲ್ಲವೇ ? ಇದಕ್ಕೆ ಕೊನೆಯಿಲ್ಲ ಮೊದಲಿಲ್ಲ.

ಸಂಗಮ್ಮ : ಋತುಚಕ್ರ ತಿರುಗಿದಂತೆ ಕಾಲನೆದೆಯು ಕರಗುವದು ಮೃತರ ಮಣ್ಣಿಂದ ಮತ್ತೆ ಚಿಗುರುವದು ಹೊಸ ಹುಲ್ಲು ಕ್ಷಿತಿ ಗರ್ಭ ಧರಿಸುವಳು ಮತ್ತುದಿಸುವದು ಈ ಜಗವು ಸತತ ಕೃಷಿ ಅಂತ ಋಷಿ ವಾಣಿ ಹೇಳುತಿದೆ ಅಂತ ಅಂದು ನೀವೆ ಹೇಳಿದ್ದಿಲ್ಲವೇ.

ಸಿದ್ಧರಾಮ : ನೀನೆಂಥ ನಿಶಿತ ಮತಿಯೇ ! ನಿನ್ನ ಪ್ರತಿಯೊಂದು ನುಡಿಗಳು ಮೌಕ್ತಿಕ ಮುತ್ತುಗಳು.

ಹಾಡು

ಹೆಂಡತಿ : ಕಾಣದಾ ಸ್ವರ್ಗಕ್ಕೆ ಕಣ್ಣಿಟ್ಟು ಮಾಡುವದೇನು ?
ಕೈಲಾಸವೇ ಇಲ್ಲಿಹುದು ತಿಳಿಯದಿದರ ಗುಟ್ಟೇನು ?

ಗಂಡ : ಕಾಣದ ಸ್ವರ್ಗಕ್ಕೆ ನಂಬಿಹುದು ಜಗವೊಂದು
ಕೈಲಾಸವೇ ಇಲ್ಲಿಹುದು ಈ ಜಗವು ತಿಳಿಯದು
ಸುಳಿಯಲ್ಲಿ ಸಿಲ್ಕಿಹುದು

ಹೆಂಡತಿ : ಇಲ್ಲಿ ಕಾಣುವ ದೇವರು । ಅಲ್ಲಿ ಕಾಣುವನೇನು ?
ಅಲ್ಲಿ ಕಂಡ ದೇವರು । ಬಂದು ತಿಳಿಸುವನೇನು ?

ಗಂಡ : ಒಂದಕ್ಕೊಂದು ಬಂಧವಿಲ್ಲ । ಈ ಬಾಳಿನ ಗುಟ್ಟೇನು ?
ಇದನೆ ನಂಬಿ ಜಗವೊಂದು । ಮಾಯಾಮೃಗವಾಗಿದೇನು ?
ಪರಿಹಾರೋಪಾಯವೇನು ?

ಪ್ರವೇಶ – ೧೧

ದೃಶ್ಯ ರಸ್ತಾ

ಗಿರೆಮ್ಮ : ಯವ್ವ ಯವ್ವ ಯವ್ವಾ! ಸಾಕಾಗಿ ಹೋಗೇತಿ ನನ್ಜೀವಾ ನನ್ಮಗಾ ಸಿದ್ಧರಾಮನ ಕಾಲಾಗ ಎಲ್ಲಿ ಹೋಗಿ ಕುಂತ್ನಂದ್ರ ತೀರ್ಥು ಅಲ್ಲೇ ಶಿವಾಯನಮಃ. ಬರ್ಲಿ ಇವತ್ತು ಮನೀಗಿ ಹೊರಗ ಹಾಕಿ ಬಿಡ್ತೀನಿ. ಬಾಗೇವಾಡೀಗಿ ಹೋಗಿ ತೆಂಗಿನಕಾಯಿ ಒಡ್ಕೊಂಡು ಬಾರಂತ ಕಳಿಸಿದ. ಮೂರು ದಿವಸದ ಮ್ಯಾಲ ಬಂದ ಗುಡ್ಡಾಪುರಕ ಹೋಗಿ ದಾನಮ್ಮ ದೇವಿಗಿ ಕಾಯಿ

ಕೊಟ್ಟ ಕಳಿಸಿದ್ರ ಹದಿನೈದ ದಿವಸದ ಮ್ಯಾಲ ಬಂದ, ಹಿಂಗಾದ್ರ ಮುಂದ ಹೆಂಡರ ಮಕ್ಕಳಿಗಿ ಕಟಗೊಂಡ ಹ್ಯಾಂಗ ಬಾಳೇವು ಮಾಡ್ತಾನ ಅಂತೀನಿ. ನನ್ನ ಸೊಸಿ ತವರ ಮನಿಯವರು ಕುಬಸಾಮಾಡಿ ಕರಕೊಂಡು ಹೋಗ್ತೀವಿ ಅಂತ ಬಂದಾರ. ಎಲ್ಲಿಗಿ ಹೋಗಿರಬೇಕಂತೇನಿ. ಮೂರ ದಿವ್ಸಾಯ್ತು ಮನೀಗೆ ಬಂದಿಲ್ಲ.

ಸಿದ್ಧಲಿಂಗಪ್ಪ : ಯಾಕ ಇಲ್ಲೆ ನಿಂತಿಯಲ್ಲಿ ಎಲ್ಲಿಗಿ ಹೊಂಟೀದಿ

ಗಿರೆಮ್ಮ : ಸುಡಗಾಡಕ್ಕ ಹೋಗುದೊಂದುಳದ್ಯೆತಿ ನೋಡಾಮಾರಾಯ, ಸಿದ್ಧರಾಮ ಎಲ್ಲಿಗಿ ಹೋಗ್ಯಾನ ಅನ್ನುವ ಸುಳು ಏನರ ಹತ್ತ್ಯಾದೇನು.

ಸಿದ್ಧಲಿಂಗಪ್ಪ : ಮತ್ತೆಲ್ಲಿಗಿ ಹೋಗ್ತಾನಂವ, ಲಚ್ಚ್ಯಾಣ ಸಿದ್ಧಪ್ಪ ಮಹಾರಾಜರ ಹತ್ತಿರ ಹೋಗಿರಬೇಕ

ಗಿರೆಮ್ಮ : ಬೇಶಾತ ಹೋಗಿನ್ನ ! ಆ ಮಿರಗಿ ಕಾಶಿಬಾಯಿ ಮಗಾ ಎಲ್ಲಪ್ಪ ಲಚ್ಯಾಣಕ್ಕ ಹೋಗಿ ಸಂಸಾರ ಮಾಡೂದು ಬಿಟ್ಟ, ಕೋನೀಗಿ ಊರು ಬಿಟ್ಟಾ, ಇವ್ನೂ ಎಲ್ಲಿ ಊರ ಬಿಡ್ತಾನೇನು ಅಂತೀನಿ.

ಸಿದ್ಧಲಿಂಗಪ್ಪ : ಯಾರ ಹಣೆಬರ ಯಾರ ನೋಡಿ ಬಂದಾರ, ಸುಮ್ನ ನೀಯಾಕ ಚಿಂತಿ ಮಾಡಿ ಸಾಯ್ತೀದಿ. ಆಗೂವ್ಹಂಗ ಆಗ್ತಾದ, ಹೋಗುವಂಗ ಹೋಗ್ತಾದ ಅದನ್ನ ತಡದ ನಿಲ್ಲಸಾಕ ನಾವ್ಯಾರು.

ಗಿರೆಮ್ಮ : ಕಿರಾಣಿ ಅಂಗಡಿ, ಒಕ್ಕಲತನ ರಾಚಪ್ಪ, ದಾನಪ್ಪ ಸಣ್ಣ ಹಡುಗರು ಮನ್ಯಾಗ ಬೆಳೆದಕುಂತ ಮೂವರ ಹೆಣ್ಮಕ್ಕಳು ಅದಾರ ಅನ್ನೂದು ಯಾಕ ತಿಳಿವಲ್ದು ಅಂತೀನಿ. ಮನೀಗಿ ಹಿರಿ ಮಗಾ ಆಗಿ ಸಂಸಾರದ ಚಿಂತಿ ಇಲ್ದಂಗ ತಿರಗಿದ್ರ ಮುಂದ ಗತಿ ಹ್ಯಾಂಗಂತ.

ಸಿದ್ಧಲಿಂಗಪ್ಪ : ಬಲಾತ್ಕಾರದಿಂದ ಮಾಡುವ ಕಾರ್ಯಕ್ಕ ಉತ್ತಮವಾದ ಫಲಾ ಸಿಗೋದಿಲ್ಲ. ಈ ಮಾತು ನೆನಪಿಡು, ಆದರೂ ನನ್ಮಗಾ ಸಿದ್ಧರಾಮ ಉಂಡಾಡಿಗನಲ್ಲ. ಒಬ್ಬರಿಗಿ ಕೇಡ ಬಯಸುವವನಲ್ಲ, ಸುತ್ತ ಹತ್ತ ಹಳ್ಳೀಗಿ ಬೆಲ್ಲದಚ್ಚ ಆಗ್ಯಾನ.

ಗಿರೆಮ್ಮ : ಬೆಲ್ಲದಚ್ಚಾಗ್ತಾನೊ ಏನ್ ಒಲ್ಯಾಗಿನ ಕಿಚ್ಚಗ್ತಾನೊ ಒಂದು ತಿಳಿಲಾರ್ದಂಗ ಆಗೇತಿ ನನಗ.

ಸಿದ್ಧಲಿಂಗಪ್ಪ : ನೀ! ಹಿಂಗ ಆತುರ ಬಯಸೋದು ಒಳ್ಳೇದಲ್ಲ. ಕಳವಳ ನೀಗಿ ಬಿಡು ತಳಮಳ ದೂರ ಮಾಡು

ಗಿರೆಮ್ಮ : ಹಿಂದೊಮ್ಮಿ ಹಿಂಗ ಹೇಳಾರ್ದ ಸೊಲ್ಲಾಪುರಕ್ಕೆ ಹೋಗಿ ಜೂನಿಮಿಲ್ಲಿನ್ಯಾಗ ದುಡದ ಗಳಿಸಿಗೊಂಡ ಬಂದ ದುಡ್ಡಿನ್ಯಾಗ ಕಿರಾಣಿ ಅಂಗಡಿ ಮಾಡಿದಾ, ಹೊಲಾ ಹಿಡದ ಒಕ್ಕಲತನ ಮಾಡಿದ, ಈಗಿದ್ರ ಎಲ್ಲಾ ಕೊಳ್ಳೀಗಿ ಹಾಕಿ ದೇಶಾವರಿ ಹ್ವಾದ. ಹಿಂಗಾದ್ರ ಇದ್ಕ ಬದಕಂತಾರೇನು.

ಸಿದ್ದಲಿಂಗಪ್ಪ : ಅಂವಾ ಮಾಡಿಕೊಟ್ಟಿದ್ದನ್ನ ಉಳಿಸಿಗೊಂಡು ಮುಂದ ಮಾಡ್ಕೊಂತ ಹೋಗುದ ಈ ಜಗದ ಜಾಣತನ, ನಡಿ ನಡಿ ಮನೀಗಿ ಹೋಗುನ ನಡಿ.

ಗಿರೆಮ್ಮ : ಎಂದ ಶ್ರೀ ಕೃಷ್ಣ ಪಾರಿಜಾತ ಆಟ ಕಲ್ತ ಆಡಿದನೊ, ಅವತ್ನಿಂದ ಅವನ ತಲೀನ ಸುದ್ದುಳೀಲಿಲ್ಲ. ಕುಂತ್ರ ಕುಂತಲ್ಲೆ, ನಿಂತ್ರ ನಿಂತಲ್ಲೆ, ಎಲ್ಲಿ ತಲಿ ಕೆಟ್ಟ ತಿರಗ್ತಾನೇನು ಅಂತೀನಿ.

ಸಿದ್ಧಲಿಂಗಪ್ಪ : ಮಹಾತ್ಮಾಗಾಂಧಿಯವರ ಪರಿವರ್ತನೆಗೆ ಸತ್ಯ ಹರಿಶ್ಚಂದ್ರನ ನಾಟಕ ಹ್ಯಾಂಗ ಕಾರಣವಾಯ್ತೊ? ಹಂಗ ಇಂವ್ನಿಗೂ ಶ್ರೀ ಕೃಷ್ಣ ಪಾರಿಜಾತ ಯಾಕ ಕಾರಣ ಆಗಿರಬಾರದು. ಪರಿವರ್ತನ ಆಗ್ಲಿಕ್ಕೇನ ವರ್ಷ ಎರಡ ವರಷ ಹಿಡಿತಾದ. ಮನಸಿನ ಮ್ಯಾಲ ನಾಟಿತಂದ್ರ ತೀರ್ತು. ಅದು ಯಾರ ಹೇಳಿದ್ರು ಹಿಂದ್ಕ ಸರಿಯೂದಿಲ್ಲ. ಮಧ್ಯರಾತ್ರಿ ಎದ್ದು ಹೋದ ಸಿದ್ಧಾರ್ಥ ಗೌತಮ ಬುದ್ಧನಾದ,

ಗಿರೆಮ್ಮ : ಇವ್ನು ಹಂಗ ಹೋಗ್ತಾನ ಅಂತೀರ್ಯಾ?

ಸಿದ್ಧಲಿಂಗಪ್ಪ : ಅವ್ನಿಗೀಗ ಈ ಪ್ರಪಂಚದ ಕೊಂಡಿಯಿಂದ ಎಂದ ಕಡೀಗಾಗೇನು ಅನ್ನು ಚಿಂತಿಯೊಂದ ಬಿಟ್ರ ಬೇರೇನೂ ಇಲ್ಲ. ಮುಂದ ತಾಯಿ ಗಿರೆಮ್ಮನ ಕಿರಿಕಿರಿಗೆ ಮಗಾ ಸಿದ್ಧರಾಮ ಮನಿ ಬಿಟ್ಟ ಹ್ವಾದಾ ಎನ್ನುವ ಅಪವಾದ ಹೊರೂದೇನ್ ತಪ್ಪುವದಿಲ್ಲ. ಈ ಮಾತು ನೆನಪಿನ್ಯಾಗಿಡು

ಗಿರೆಮ್ಮ : ಅಂದ್ರ ನಾ ಮೂಕ್ಯಾಗಿ ಕುಂದ್ರಂದ್ರ್ಯಾ ಹ್ಯಾಂಗ, ಅದರ ಹೇಳ್ಬಿಡ್ರಿ, ತಂದಿ ಮಕ್ಕಳಗಿ ಅಷ್ಟನಾ ಬ್ಯಾಸರಾಗಿದ್ರ ಕೆರೀನೋ ಭಾವಿನೋ ಹಾರಿ ಸತ್ತ ಹೋಗಿ ಬಿಡ್ತೀನಿ

ಸಿದ್ಧಲಿಂಗಪ್ಪ : ಇದ್ಯಾವ ಪುರುಷಾರ್ಥಲೇ ಗಿರಿ

ಗಿರೆಮ್ಮ : ನನ ಕಣ್ಮುಂದ ಕೆಟ್ಟ ಹೋಗೋದು ನಾ ಹ್ಯಾಂಗ ನೋಡ್ಲೀರಿ ಮೊದ್ಲ ನಾವು ಬಡತನದ ತಾಪತ್ರಯದೊಳಗ ಬಿದ್ದೆದ್ದವರು. ಈಗ ಆ ದೇವರು ಸುಖ ಸಂಪತ್ತು ಕೊಟ್ಟಾನ ಅದನ್ನ ನಾವು ನೋಡ್ಕೊಂಡು ಹೋಗ್ಲಿಲ್ಲಾಂದ್ರ ಹ್ಯಾಂಗಂತ.

ಸಿದ್ಧಲಿಂಗಪ್ಪ : ನಡಿ ನಡಿ ನಾನಷ್ಟು ಬಿಜಾಪುರಕ್ಕ ಹೋಗಿ ಬರತೀನಿ ಇವತ್ತ ಸಂಜೀಗಿ ಕುಬಸದ ಕಾರಣ ಮಾಡಬೇಕಲ್ಲ ಸೋಸಿ ಸಂಗಮ್ಮಗ *(ಈರ್ವರು ಹೋಗುವರು)*

ಪ್ರವೇಶ – ೧೨

ದೃಶ್ಯ ಲಚ್ಯಾಣ ಮಠ

ಸಿದ್ಧಪ್ಪ ಮಹಾರಾಜರು : ಬಾಳಿನ ಹೊಳೆ ನಿಲ್ಲದೆ ಹರಿಯುತ್ತ ಸಾಗುತಿದೆ; ದಿನದ ಮೇಲೆ ದಿನಗಳುರುಳಿ ಲಯವಾಗುತಿದೆ ಆದರೆ, ಬದುಕಿನ ಸಾರ್ಥಕ ಯಾವಾಗ ? ರಣಹದ್ದು ಆಕಾಶದಲ್ಲಿ ಹಾರಾಡುತ್ತಿದ್ದರು ಭೂಮಿಯ ಮೇಲೆ ಸತ್ತು ಬಿದ್ದ ಪ್ರಾಣಿಯ ಮಾಂಸದ ಮೇಲೆ ಎನ್ನುವಂತೆ ಇಂದಿನ ಶ್ರೇಷ್ಠ ತಮರೆಲ್ಲರೂ ಕಾಮಿನಿ ಕಾಂಚನಗಳ ಮೇಲೆಯೇ ತಮ್ಮ ಬದುಕಿನ ಅವಲಂಬನ ಇರಿಸಿಕೊಂಡಿದ್ದಾರೆ. ಅಂದ ಮೇಲೆ ತ್ಯಾಗಿ ಆಗುವದು ಯಾವಾಗ? ಯೋಗದೊಳ್ ಕೂಡುವದು ಯಾವಾಗ ? ಭೋಗ ಜೀವನದಲ್ಲಿದ್ದವರಿಗೆ ಯೋಗ ಜೀವನಕ್ಕೆ ಬರುವದು ಯಾವಾಗ ? ಅಂಥ ಸುಯೋಗ ಬರುವದು ಕೆಲವರಿಗೆ ಮಾತ್ರ ಅಂಥ ಶುಭಯೋಗ ಪಡೆದವ ನನ್ನ ಶಿಷ್ಯ ಮಿರಗಿ ಎಲ್ಲಪ್ಪ ಸಾಮಾನ್ಯರಲಿ ಸಾಮಾನ್ಯನಾಗಿ ಬೆಳಗಿ ಅಸಾಮಾನ್ಯ ಶಕ್ತಿ ಪಡೆದ ವ್ಯಕ್ತಿತ್ವ ಆತನದು. ಆತನ ಸಾಲಿನಲ್ಲಿಯೇ ಇನ್ನೊಂದು ಭೃಂಗ ಬಂದಿದೆ. ಆಧ್ಯಾತ್ಮದ ಮಲರ ಕಂಪಿನ ಪರಿಮಳವನ್ನಾಘ್ರಾಣಿಸಲು ; ಹಠ ಯೋಗದಲ್ಲಿ ಈತನೇನು ಆತನಿಗೆ ಕಡಿಮೆಯೇನಿಲ್ಲ. ಎಲ್ಲದಕ್ಕೂ ಸಿದ್ಧವಿರುವ ಯರನಾಳದ ಸಿದ್ಧ, ಲಚ್ಯಾಣದ ಸಿದ್ದಪ್ಪನಲ್ಲಿ ಬಂದಿರುವನು. ಪರಿಪೂರ್ಣವಾದ ವ್ಯಕ್ತಿಗೆ ಕರಣ ಪ್ರಸಾದ ನೀಡಲೇನೂ ಅಭ್ಯಂತರವಿಲ್ಲ ಸಿದ್ಧರಾಮಾ ಏನು ಮಾಡುತ್ತೀಯಾ ?.

ಸಿದ್ಧರಾಮ : ಪ್ರಸಾದ ಮನೆಯ ಕಸ ಹೊಡೆಯುತ್ತಿದ್ದೆ ಗುರಗಳೆ.

ಸಿದ್ಧಪ್ಪ ಮಹಾರಾಜ : ಹುಂ! ಹಂಗ ಮ್ಯಾಲ ಮ್ಯಾಲ ಕಸಾ ಹೊಡಿತಿರಬೇಕು. ಭಾಂಡೆ ತಿಕ್ಕತಿರಬೇಕು ಇಲ್ಲದಿದ್ದರ ತುಕ್ಕ ಹಿಡದ ಬಿಡ್ತಾವು ಸಿದ್ಧಾ

ಸಿದ್ಧರಾಮ : ಯಪ್ಪಾ!

ಸಿದ್ಧಪ್ಪ ಮಹಾರಾಜ : ಅಡಿಗಿ ಮಾಡೋ ಭಾಂಡೆ ಅಥವಾ ಪಾತ್ರೆಗಳು ತಿಕ್ಕಿದಂಗ ಈ ದೇಹವೆಂಬ ಭಾಂಡೇನು ತಿಕ್ಕಬೇಕು, ಉಜ್ಜಬೇಕು ತೊಳಿಬೇಕು ಇಲ್ಲದಿದ್ದರ ತುಕ್ಕ ಹಿಡಿತಾದ.

ಸಿದ್ಧರಾಮ : ಎಷ್ಟು ಉಜ್ಜಿದರೂ ಹಿಡದ ತುಕ್ಕ ಬಿಡವಲ್ದು ಗುರುದೇವಾ

ಸಿದ್ಧಪ್ಪ ಮಹಾರಾಜ : ಇಲ್ಲಿವರೆಗೂ ತನ್ನದೇ ಆದ ಸಂಸ್ಕಾರದೊಳಗ ಇದ್ದದ್ದಕ್ಕ ಆ ತುಕ್ಕ ಬಿಡುವಲ್ದು ಇರ್ಲಿ ಒಮ್ಮಿಂದೊಮ್ಮೆಲೇ ಬಿಡೂದು ಕಷ್ಟ ಸಾಧ್ಯ. ದಿನಸಾವಿನ ಮ್ಯಾಲ ತಾನ ಹೋಗ್ತಾದ ಆದರ ತುಕ್ಕ ಹೋಗುವಲ್ದು ಅಂತ ಅದರ ಕಡಿಗೆ ಲಕ್ಷಕೊಡಬ್ಯಾಡ, ನಿನ್ನೊಳಗ ನೀನಿರು ನೆನಪಿರಲಾರ್ದಂಗ ಆಗ ಆ ತುಕ್ಕ ತನ್ನ ತಾನೇ ಹೋಗಿರತಾದ ಹುಡಿಕೇನಂದ್ರೂ ಸಿಗೂದಿಲ್ಲ.

ಸಿದ್ಧರಾಮ : ತಂದೆ! ಲಚ್ಯಾಣದ ಕಮರಿಮಠದೊಡೆಯಾ ಕುಲ ಹದಿನೆಂಟು ಜಾತೀಗಿ ಕುಲುಮೀನೆ ಶಿಕ್ಷಾ ಗುರು ಅಂತ ನಿನ್ನ ಪಾದಕ್ಕ ಬಂದ ಬಿದ್ದೀನಿ. ಈ ಭವದಿಂದ ನನಗ ಪಾರಮಾಡು ಕುಲುಮೆಯಲಿ ಕಾಯ್ದ ಕಬ್ಬಿಣಕ್ಕ ಕೆಂಬಚ್ಚಿನ ಮೇಲಿಟ್ಟು ಸುತ್ತಿಗೆಯಿಂದ ಪೆಟ್ಟು ಬೀಳಲಿ ವಸ್ತುವಾಗುವತನಕ.

ಸಿದ್ಧಪ್ಪ ಮಹಾರಾಜ : ಇಲ್ಲೀವರೆಗೂ ಮಾತಾಡಿದ್ದು ಅದೇ ಆಗಿದೆ. ಸಿದ್ಧರಾಮ ಗುರು ಕರುಣೆಗೆ ಕಾಲಮಿತಿ ತಿಥಿ, ಏನೇನೂ ಬೇಕಾಗಿಲ್ಲ. ಈ ಜೀವನದಲ್ಲಿ ಸೋತು ಹೋಗುತ್ತೇನೆಂಬ ಭಯವನ್ನು ಗೆಲ್ಲುವದೇ ನಿಜವಾದ ಜಯ. ನಡೆ ನೀನಿಂದು ಆ ಭಯವನ್ನು ಗೆದ್ದಿರುವೆ; ಗೆದ್ದವರೆಗೆ ಈ ಲಚ್ಯಾಣದ ಸಿದ್ಧನಹಸ್ತ ಸದಾ ಸಿದ್ಧವಿರುತ್ತದೆ ಉದ್ಧರಿಸಲು ನಿನಗಿಂದೆ ದೀಕ್ಷೆಯನ್ನು ಕೊಡುತ್ತೇನೆ.

ಸಿದ್ಧರಾಮ : ಧನ್ಯನಾದೆ ಗುರುದೇವಾ ಧನ್ಯನಾದೆ

ಸಿದ್ಧಪ್ಪ ಮಹಾರಾಜ : ಆದರೂ ಒಂದ್ಮಾತು ಈ ಜಗತ್ತು ಒಂದು ಏಣಿಯಿದ್ದಂತೆ. ಏಣಿ ಹಿಡಿದು ಕೆಲವರು ಮೇಲೆರುತ್ತಾರೆ. ಕೆಲವರು ಕೆಳಗಿಳಿಯುತ್ತಾರೆ. ನನಗೆ ಗೊತ್ತು ಏರಿದ ಏಣಿಯಿಂದ ನೀನು ಕೆಳಗಿಳಿಯುವದಿಲ್ಲಾಂತ.

ಸಿದ್ಧರಾಮ : ತಂದೆ; ಯೋಗ ಜೀವನದಿಂದ ಮತ್ತೆ ಭೋಗ ಜೀವನಕ್ಕೆ ಬಂದ ವಿಶ್ವಾಮಿತ್ರನು ಪುನಃ ಏಣಿಯನ್ನೇರಿ ಬ್ರಹ್ಮ ಋಷಿ ಎನಿಸಿಕೊಂಡನಂತೆ.

ಸಿದ್ಧಪ್ಪ ಮಹಾರಾಜ : ಸಿದ್ಧರಾಮ! ದಾರಿ ತಪ್ಪಿದರೆ ಹಿಂತಿರುಗಿ ಸರಿ ದಾರಿಯನ್ನು ಕಂಡಕೊಳ್ಳಬಹುದು ಆದರೆ ಬಾಯಿ ತಪ್ಪಿದರೆ ಆಡಿದ ಮಾತುಗಳು ಹಿಂತಿರುಗಿ ಬರುವದಿಲ್ಲ. ಅಂತೆಯೇ ಮಾತು ಮೌನದ ಮಾರ್ಗಹಿಡಿಯಬೇಕು.

ಸಿದ್ಧರಾಮ : ಆಗಲಿ ತಂದೆ : ತನ್ನನ್ನು ತಾನು ಗೆಲ್ಲುವದು ಅತ್ಯಂತ ಹಿರಿದಾದ ವಿಜಯ ಇದೇ ತಾನೇ?

ಸಿದ್ಧಪ್ಪ ಮಹಾರಾಜ : ನಿಜ! ಸಿದ್ಧರಾಮ ತನ್ನನ್ನು ತಾನು ಗೆದ್ದಾಗಲೇ ಆತನೇ ವಿಜಯಿ ಆತನೇ ಸೃಜನ ಹೃದಯಿ(ಸ್ವ) ಪರಿಪಕ್ವವಾದ ಹಣ್ಣನ್ನು ತಿಂದು ತೃಪ್ತಿ ಪಡಬೇಕು. ಇಲ್ಲದಿದ್ದರೆ ಆ ಹಣ್ಣು ಬಳ್ಳಿಯ ತುಂಬಿನಿಂದ ಕಳಚಿ ಬಿಸಿಲಿನ ಬೇಗೆಯಿಂದ ಕಳೆತು ಕೊಳೆತು ಹುಳು ಬಿದ್ದು ಹೋಗುತ್ತದೆ. ಈ ವಿಶ್ವಪರಿಪೂರ್ಣವಾದ ಹಣ್ಣನ್ನು ನಾನು ತಿಂದು ತೃಪ್ತಿ ಪಡುತ್ತೇನೆ ಬಾ ಒಳಗೆ ಹೋಗೋಣ (ಒಳಗೆ ಹೋಗಿ ಬರುವರು)

ಸಿದ್ಧರಾಮ : ತಂದೆ! ಲಚ್ಚ್ಯಾಣದ ಸಿದ್ಧ ಶಿವಯೋಗಿ, ನಿನ್ನ ವರದ ಹಸ್ತ ಎನ್ನ ಮಸ್ತಕದ ಮೇಲಿರಿಸಿ ನಿನ್ನ ಶ್ರೀ ಚರಣಕ್ಕೆ ನಮನ ಸಲ್ಲಿಸುವೆ.

ಸಿದ್ಧಪ್ಪ ಮಹಾರಾಜ : ಶರೀಫ ಶಿವಯೋಗಿಗಳಿಗೆ ಶಿಸುನಾಳವಿದ್ದಂತೆ ನಿನಗೂ ಯರನಾಳವೊಂದಿದೆ. ಅಲ್ಲಿಗೆ ಹೋಗಿ ನಿನ್ನ ಹೆಂಡತಿ ಮಗುವಿನೊಂದಿಗೆ ಈ ಬಾಳ ಸಾಗರವ ನೀಜಿ ಮತ್ತೆ ನನ್ನೆಡೆಗೆ ಬಾ.

ಸಿದ್ಧರಾಮ : ಮತ್ತೆ ನಾನು ಮನೆ ಸೇರಬೇಕೆ ಗುರುಗಳೇ?

ಸಿದ್ಧಪ್ಪ ಮಹಾರಾಜ : ಗೂಡಿನಿಂದ ಹಾರಿದ ಹಕ್ಕಿಯು ಸಂಜೆಯಾಗುತ್ತಲೇ ಮತ್ತೆ ಗೂಡಿನಡೆಗೆ ಬರುವದಿಲ್ಲವೇ? ಅದರಂತೆ ನೀನು ಮತ್ತೆ ಮನೆಗೆ ಹೋಗಬೇಕು. ಇದು ಅನಿವಾರ್ಯ. ಇಲ್ಲದಿದ್ದರೇ ನಿನ್ನನ್ನೇ ನಂಬಿದ ವ್ಯಕ್ತಿಗಳಿಗೆ ದ್ರೋಹ ಮಾಡಿದಂತಾಗುವದಿಲ್ಲವೆ ? ಅದರಿಂದ ಮುಕ್ತನಾಗಿ ನನ್ನೆಡೆಗೆ ಬಾ.

ಸಿದ್ಧರಾಮ : ಮಿರಗಿಯ ಎಲ್ಲಪ್ಪ ಮಹಾರಾಜರು ನಿಮ್ಮಡೆಗೆ ಬಂದವರು ಮತ್ತೆ ಹೊರಳಿ ಹೋಗಲಿಲ್ಲವಂತೆ ತಂದೆ

ಸಿದ್ಧಪ್ಪ ಮಹಾರಾಜ : ಆತ ಈ ಮೊದಲೇ ಸಂಸಾರದ ಶರಧಿಯಿಂದೀಜಿ ಮುಕ್ತನಾಗಿದ್ದ. ಅಲ್ಲಿ ಅವನ ದೆನ್ನುವದೇನು ಇರಲಿಲ್ಲ

ಅದು ಇದ್ದರೆ ತನಗೆ ಜನ್ಮಕೊಟ್ಟ ತಂದೆ-ತಾಯಿಗಳಿದ್ದಿರಬಹುದು. ಅದು ಲೋಕಾರೂಡಿಯಂತೆ ಜನ್ಮಕ್ಕೆ ಕಾರಣರಾದವರು. ನಿನಗೆ ಹೆಂಡತಿ ಇದ್ದಾಳೆ. ಮಗು ಬರಲಿದೆ, ಹೊಸ ಆಶೆಯಗಳ ಬೆನ್ನೇರಿಬಂದ ನಿನ್ನ ತಂದೆ ತಾಯಿಗಳಿದ್ದಾರೆ. ಅವರೆಲ್ಲರ ಸಂಕೋಲೆಯನ್ನ ಕಡಿದು ಕೊಂಡಾಗ ಮಾತ್ರ ನನ್ನಲ್ಲಿ ನಿನಗೆ ಸ್ಥಾನ ತೆರಳು.

ಸಿದ್ಧರಾಮ : ತೆರಳುವೆನು ತಂದೆ ತಾವಿತ್ತ ಅಪ್ಪಣೆಯ ಮೇರೆಗೆ ಆದರೂ ಒಂದು ಮಾತು, ಬಸವಳಿದು ಬೆಂದು ಬೇಸತ್ತು ಬಂದಾಗ ತಮ್ಮ ವರದ ಹಸ್ತ ನಿಮ್ಮೆಡೆಗೆ ಬರಮಾಡಿಕೊಳ್ಳಲಿ *(ನಮಸ್ಕರಿಸಿ)*

ಹಿನ್ನೆಲೆ : ಸರ್ವಲೋಕೋಪಕಾರಾಯ । ಯಃದೇವಪರಮೇಶ್ವರಾ॥ ಚರಿತ್ರೆ ತಿಥಿ ರೂಪೇಣಾಂ । ನಮಸ್ತೆ ಜಂಗಮಾರ್ಯನೆ *(ಹೋಗುವವನು)*

ಪ್ರವೇಶ – ೧೩

ದೃಶ್ಯ ರಸ್ತಾ

(ಶಾಂಪ್ಪನು ಸಾಧು ವೇಷದಲ್ಲಿ; ಎಡಗೈಯಲಿ ತಂಬಿಗಿ, ಬಲಗೈಯಲ್ಲಿ ಬೆತ್ತ)

ಶಾಂತಿ : ಮೂರ ತಿಂಗಳಾಯ್ತು ಮನಿಬಿಟ್ಟು ಹೋಗಿ ಯಾಕ ಬರಲ್ಯಾಕಿಲ್ಲಾ ಅಂತೀನಿ ನಮ್ಮ ಹಿರಿಯಾ. ಒಂದ ಎರಡ ಹನ್ನೆರಡ ಮಕ್ಕಳಿಗಿ ತೊಗೊಂಡು ನಾ ಹ್ಯಾಂಗ ಈ ಜೀವನ ಸಾಗಿಸಬೇಕು. ಬರ್ಲಿ ಇಂದಿಲ್ಲಾ ನಾಳೆ ಮನೆಗೆ ಬಂದೇ ಬರತಾನ, ಬಂದಾಗ ಗುಗ್ಗಳಾ ಎಬ್ಬಿಸಿ ಕೈ ಬಿಡ್ತೀನಿ.

ಶಾಂತಪ್ಪ : *(ಸಾಧು ವೇಷದಲ್ಲಿ)* ಪತಿಯು ಮನೆ ಬಿಟ್ಟು ಹೋಗಿರುವನು ಎಂದು ನೀ ಚಿಂತಿ ಮಾಡ್ತಿಯಾ ಭಕ್ತಳೆ.

ಶಾಂತಿ : ಹೌದು ಎಜ್ಜಾ ! ಯಾವ ಕಡೀಗಿ ಹೋಗ್ಯಾನ ಯಾವ ಮೂಲ್ಯಾಗಿರತಾನ ಅಂವ

ಶಾಂತಪ್ಪ : ಅವನೀಗ ಮರಳಿಬಾರದ ಊರಿಗೆ ಹೋಗುವವನಿದ್ದಾನೆ ಭಕ್ತಳೆ

ಶಾಂತಿ : ನನಗ ತಿಳಿಲಿಲ್ಲ ಎಜ್ಜಾ

ಶಾಂತಪ್ಪ : ಅವನೀಗ ಸನ್ಯಾಸಿ ವೇಷ ತೊಟ್ಟು ಈ ಸಂಸಾರದಿಂದ ನಿರ್ಗಮಿಸಲಿದ್ದಾನೆ.

ಶಾಂತಿ : ಇವ್ನ ಹೆಣಾ ಚಂದಾ ಮಾಡ್ಲಿ; ತನಗೇನ ನಾನ ಕೊರಳಿಗಿ ಹಾಕಿರಬೇಕಂತೀನಿ. ಸನ್ಯಾಸಿ ಆಗಾಕ ಅಂವಾ ಎಲ್ಲಿರತಾನ ಹೇಳ ಎಜ್ಜಾ ನಿನ್ಗಕಜ್ಜಾ ಕೊಡ್ತೀನಿ.

ಶಾಂತಪ್ಪ : ನೀ ಕೊಟ್ಟ ಕಜ್ಜಾ ಉಂಡೇ ಕಜ್ಜಿ ಹಚ್ಚಗೊಂಡು ತಿರುಗುವ ಈ ಅಜ್ಜಾ ನಿನ್ನ ಕಜ್ಜ ಎಂದೆಂದಿಗೂ ಮುಟ್ಟುವದಿಲ್ಲ ಭಕ್ತಳೆ.

ಶಾಂತಿ : ಮತ್ತೇನು ಮುಟ್ಟತೀಯ ಎಜ್ಜಾ

ಶಾಂತಪ್ಪ : ನಾವು ಮುಟ್ಟೂದು ಇಲ್ಲ, ತಟ್ಟೂದು ಇಲ್ಲ ದೂರದಿಂದನ ದಿಟ್ಟಿಸಿ ನೋಡಿ ಭವಿಷ್ಯವನ್ನೇ ಹೇಳಬಲ್ಲೆ. ನೀನಿಗ ಹನ್ನೆರಡು ಮಕ್ಕಳ ತಾಯಿಯಾಗಿರುವಿ.

ಶಾಂತಿ : ಮುಂದ ಮಕ್ಕಳು ಆಗೂದು ಬ್ಯಾಡಂತ ಮನಿಯಿಂದ ಹೊರಗ ಹಾಕೀನಿ ಎಜ್ಜಾ ನನ್ಗಂಡಗ

ಶಾಂತಪ್ಪ : ಅದ್ಕಂತೆಯೇ ಊರೂರು ತಿರುಗಿ ಬೇಸತ್ತು ಈಗ ಸನ್ಯಾಸಿ ಆಗ್ಲಿಕ್ಕಿ ಹೊರಟ್ಟಿದ್ದಾನೆ. ಒಮ್ಮೆ ಸನ್ಯಾಸಿ ಆದ ಮ್ಯಾಲ ಮರಳಿ ಸಂಸಾರಿ ಆಗಲು ಬರುವದಿಲ್ಲ. ಭಕ್ತಳೆ ಏನೇ ಇದ್ದರು ನೀನು ತಪ್ಪಾಗದೆ ಅಂತ ಅವನಿಗೆ ಕ್ಷಮೆ ಕೇಳು.

ಶಾಂತಿ : ಕ್ಷಮೆಕೇಳಿದರ ಸಾಕs ಎಜ್ಜಾ; ಮತ್ತ ಮನಿಹಿಡ್ಕೊಂಡ ಕುಂದ್ರತಾನ ಮಜ್ಜಿಗಿ ಮಾಡಾಕ

ಶಾಂತಪ್ಪ : ಭಕ್ತಳೆ; ಅದಕೆ ನಿನ್ಯಾಕ ಚಿಂತಿಮಾಡ್ತಿ ಮಜ್ಜಿಗಿ ಮಾಡ್ಲಿಬಿಡು ಭಕ್ತಳೆ ; ಮಜ್ಜಿಗಿ ಮಾಡೋ ಕಡಗೋಲ ಎಲ್ಲಿತಾನ ಗಡಿಗ್ಯಾಗ ಆಡ್ತಾದ ಆಡಿ, ಆಡಿ ಒಂದಿವ್ಸ ಕೈ ಸೋತು ಕುಂತ ಬಿಡ್ತಾದ ತೀರ್ಥು.

ಶಾಂತಿ : ಎಜ್ಜಾ ! ಅಂವಾ ಬಂದು ದಿಟ್ಟಿಸಿ ನೋಡಿದ್ನಂದ್ರ ತೀರ್ಥು, ಏನಿದ್ದಿರ ಬೇಕು ಅಂವ್ನ ದೃಷ್ಟ್ಯಾಗ ಅಂತೀನಿ

ಶಾಂತಪ್ಪ : ಆ, ದೃಷ್ಟ್ಯಾಗೊಂದು ಸೃಷ್ಟಿ ಐತಿ ಮಗಳೆ ಆ ದೃಷ್ಟಿಗೆ ಮರುಳಾದವರೆಲ್ಲಾ ಮಣ್ಣು ಮುಕ್ಕುತ್ತಾರೆ.

ಶಾಂತಿ : ಈಗ ನನ್ನ ಹಣೆ ಬರನಾ ಅಲ್ಲಿಗಿ ಬಂದೈತಿ ಎಜ್ಜಾ ಏನ್ಮಾಡ್ಲಿ ಅಂತೀನಿ. ಹಂದಿ ಮರಿಹಂಗ ಹನ್ನೆರಡ ಮಕ್ಕಳ ಅದಾವು ಅವ್ಕ ಹ್ಯಾಂಗ ಬದಕಸ ಬೇಕು ಅನ್ನು ಖಬರ ಇರದ ಗಂಡಗ ತಗೊಂಡೇನ್ಮಾಡಬೇಕು, ಹೋಗ್ತೀನಿ ಎಲ್ಲಿದ್ರು ಹೋಗಿ ಹಿಡ್ಕೊಂಡು ಬಂದು ದುಡಿಯಾಕ ಹಚ್ಚತೀನಿ.

ಶಾಂತಪ್ಪ : ನೀನೆಷ್ಟು ಹುಡಿಕಿದರೂ ಅವನೆಲ್ಲಿಯೂ ಸಿಗುವದಿಲ್ಲ ಮಗಳೇ ಅವನೀಗ ಹಿಮಾಚಲದಲ್ಲಿ ಒಂಟಿಗಾಲಿನ ಮೇಲ್ನಿಂತು ಜಪ ಮಾಡ ತೊಡಗಿದ್ದಾನೆ.

ಶಾಂತಿ : ನಿನಗ್ಹ್ಯಾಂಗ ಗೊತ್ತಾತ ಎಜ್ಜಾ.

ಶಾಂತಪ್ಪ : ನಮ್ಮ ಯೋಗ ದೃಷ್ಟಿಗದು ದೃಗ್ಗೋಚರವಾಗುತ್ತದೆ ಮಗಳೆ

ಶಾಂತಿ : ನೋಡ ಯಜ್ಜಾ; ಜರಾ ನೋಡಿ ಹೇಳು, ನಿನ್ನ ತಪಸ್ಸಿನ ಬಲದಿಂದ ಅಂವಾ ಎಲ್ಲಿದ್ರು ಬರುವ್ಹಾಂಗ ಮಾಡು.

ಶಾಂತಪ್ಪ : ಅದು ಒಮ್ಮಿಂದೊಮ್ಮಿಗೆ ಪ್ರಾಪ್ತಿಯಾಗುವದಿಲ್ಲ ಮಗಳೆ, ಅದಕ್ಕೆ ಪರಿಹಾರ ಉಂಟು ನೀನು ಗಲ್ಲಕ್ಕೆ ಮುದ್ದು ಕೊಟ್ಟಾಗ ತನ್ನಿಂದತಾನೆ ಕಾಣುತ್ತದೆ. ನನ್ನ ಗಲ್ಲಕ್ಕೆ ಮುದ್ದು ಕೊಡುತ್ತೀಯಾ ?

ಶಾಂತಿ : ಇಲ್ಲಿವರೆಗೂ ನಾನ್ಯರಿಗೂ ಮುದ್ದುಕೊಟ್ಟಿಲ್ಲ ಎಜ್ಜಾ

ಶಾಂತಪ್ಪ : ಆದರಿಂದು ನೀ ಕೊಡುವ ಪ್ರಸಂಗ ಬಂದಿದೆ. ಈ ಶುಭ ಪ್ರಸಂಗ ಕಳೆದುಕೊಳ್ಳಬೇಡ ಮಗಳೇ.

ಶಾಂತಿ : *(ಸ್ವ)* ಏನ್ಮಾಡ್ಲಿ ಅಂತೀನಿ! ಇದು ನಮದ ಆಸಾಮಿ ಇದ್ದಂಗ ಕಾಣಸ್ತಾದ; *(ಬಡಗಿ ತಿರಿಗಿಸುವಳು)*

ಶಾಂತಪ್ಪ : ಮಗಳೆ ೧ ಈ ಬೆತ್ತವೇಕೆ ಪಿಡಿದಿರುವೆ

ಶಾಂತಿ : *(ತಂಬಿಗಿ ತೋರಿಸಿ)* ನಾನು ಇದ್ಕಂತ ಹೊಂಟೇನಿ ಅಲ್ಲಿ ಹಂದಿಗೋಳ ಕಾಟ ಭಾಳ; ಅದ್ಕ ಹಿಡ್ಕೊಂಡು ಹೊಂಟೇನೆ ಎಜ್ಜಾ.

ಶಾಂತಪ್ಪ : ಕೈಯೊಳಗಿನ ತಂಬಿಗಿ ಬೆತ್ತವನು ಬಿಸಾಕಿ ಬಂದು ನನ್ನ ಗಲ್ಲಕ್ಕೆ ನೀನು ಮುತ್ತುಕೊಡು ನಿನ್ನಪತಿ ತನ್ನಿಂದ ತಾನ ಹಾರಕೊಂತ ಬರತಾನ *(ಸಮೀಪ ಹೋಗುವನು)*

ಶಾಂತಿ : ಅಷ್ಟ್ಯಾಕವಸರ ಮಾಡ್ತ್ಯಾಯಜ್ಜಾ

ಶಾಂತಪ್ಪ : ಇನ್ನು ಸ್ವಲ್ಪ ತಡದೆಯಾದರೆ ರಾಹುಕಾಲ ಕೂಡುತ್ತ.

ಶಾಂತಿ : ಈಗ್ಯಾವ ಕಾಲೈತೆ ಯಜ್ಜಾ

ಶಾಂತಪ್ಪ : ಅಮೃತಯೋಗ ಐತಿ ಮಗಳೆ ತಡ ಮಾಡದೆ ಬಂದೆನ್ನ ಗಲ್ಲಕ್ಕೆ ನಿನ್ನ ತೊಂಡೆ ಹಣ್ಣಿನಂತಹ ತುಟಿಗಳಿಂದ ಮುತ್ತುಕೊಡು.

ಶಾಂತಿ : ಸಮೀಪಕ್ಕ ಬಾರ ಯಜ್ಜಾ *(ಹೊಡೆಯಹತ್ತಾವಳು)* ಪಿಕನಾಶಿ, ಪಿಂಜಾರ ನಿನ್ನ ಗದ್ದಗಲ್ಲ ಸರಸೇನ, ನಾಚಿಗಿ ಬರೂದಿಲ್ಲಾ ನಿನಿಗ! ಮಗಳೇ ಭಕ್ತಳೆ ಅಂಥ ಕರದು ಗಲ್ಲಕ್ಕ ಮುದ್ದು

ಕೊಡು ಅಂತ ಕೇಳ್ತ್ಯಾ, ಬಾರ ಗಂಡಸ, ಮುದ್ದು ಕೊಡ್ತೀನಿ ಬಾರ *(ಹೊಡೆಯ ಹತ್ತುವಳು)*

ಶಾಂತಪ್ಪ : ನಾನಲೇ ಶಾಂತಿ, ನಾನೇ ನಿನ್ನ ಪತಿ ಶಾಂತಳಾಗೆ ಚಂದ್ರಮತಿ.

ಶಾಂತಿ : ಯಲಾ ನಿನ್ನ ಬಾಯಾಗ ಮೂರ ಹಾದಿ ಮಣ್ಣ ಹಾಕ್ಲಿ, ಸನ್ಯಾಸಿ ವೇಷಾ ತೊಟ್ಟಗೊಂದು ಬಂದಿಯಲ್ಲ, ಬೇಸಿ ಬಂದಿ ಬಾ, ಮಗಳ ಇವತ್ತ ನಿನ್ನ ನಿನ್ನನ್ನ ಮನಿ ಹೊಸ್ತಿಲ್ದಾಗ ಕಾಲ ಹಾಕಲಾರ್ದಂಗ ಮಾಡ್ತೀನಿ ಗೌಡ ಕುಲಕರ್ಣಿರಗಿ ಹೇಳಿ *(ಹೋಗುವಳು ನಿಲ್ಲಿಸುವನ)*

ಶಾಂತಪ್ಪ : ಶಾಂತಿ, ಶಾಂತಿ, ಹೋಗ ಬ್ಯಾಡಲೇ, ಶಾಂತಿ ನೀ ನನ್ನ ಪಾಲಿಗಿ ವಾಂತಿ. ಗೌಡ ಕುಲಕರ್ಣಿರಿಗೆ ಹೇಳಿ ಎಬ್ಬಸ್ತಾಳಿನ್ನ ಕ್ರಾಂತಿ, ನಮ್ಮ ಯರನಾಳದ ಕೂಡಿಗಿ ಸಿದ್ಧರಾಮ ಲಚ್ಚ್ಯಾಣ ಮಹಾರಾಜರಿಂದ ದೀಕ್ಷಾ ಪಡ್ಕೊಂಡ ಬಂದ ಮ್ಯಾಲ ಸಾಧು ಆಗಬೇಕಂತ ಹಂಚಕಿ ಒಡ್ಡಾಕ ಹತ್ಯಾನ ಅವ್ನ ಹೆಂಡ್ತಿ ಸಂಗಮ್ಮಗ ಕಾಮಿಣಿ ಆಗಿ ಎರಡನೇ ಬಾಣೇತನಕ್ಕಿಂತ ತನ್ನ ತವರಮನಿ ಬೀಳಿಗೀಗಿ ಹ್ವಾದಕ್ಕಿ ತಿರಗ ಬಲಿಲ್ಲ. ಸತ್ತಳು, ಚೊಚ್ಚಲ ಮಗಳೊಂದು ಉಳದೈತಿ, ಅಜ್ಜಿ ಗಿರೆಯಮ್ಮನ ಜೋಪಾನ ಮಾಡಾಕ ಹತ್ಯಾಳ. ಅವನಿಗಿದ್ರ ಇನ್ನೊಂದು ಮದವಿ ಮಾಡಬೇಕಂತ ಮದವಿ ತಯ್ಯಾರಿ ನಡಸ್ಯಾಳ. ಅವ್ನಂತೂ ಸಾಧೂ ಅಗೂದಂತೂ ಖಾತ್ರೀನೇ ಐತಿ. ಅವ್ನ ಸಂಗಾಟ ನಾನೂ ಹೊಗಿಬಿಡ್ತೀನಿ.

ಶಾಂತಿ : ಅದೇನ ಅಂತಾರಲ್ಲ ಸಾವಿರ ಇಲಿ ತಿಂದು ಬೆಕ್ಕು ಕಾಶೀಗಿ ಹೋಗಿತ್ತಂತ, ಎಲ್ಲಿಟ್ಟೇದಿ ಖ್ಯಾಲ ಹೆಂಡತಿ ಅಂದ್ರ ನಗೂದು ತಂದ ಹಾಕಂದ್ರ ಅಳೂದು

ಹಾಡು

ಹೆಂಡತಿ : ಹೆಂಡತಿ ಅಂದ್ರ ನನಗತೀದಿ ।
ತಂದಹಾಕಂದ್ರ ಅಳತೀದಿ
ನಾಚಿಕೆಂಬುದಿಲ್ಲ ತಲೀಗಿ ಸುತ್ತೀದಿ ॥ ಪ ॥

ಗಂಡ : ಮಾಡಿಕೊಂಡ ಗಂಡಗ ನೀಯಾಕ ಕಾಡ್ತಿ
ತಂದುಹಾಕಂತ ರಂಭಾಟ ನಡಸ್ತಿ
ದುಡಿಯೋದು ಆಗೂದಿಲ್ಲ ನೀ ಏನ್ ಮಾಡ್ತಿ

ವರ್ಷಕ್ಕ ಎರೆಡೆರಡು ಮಕ್ಕಳ ಹಡಿತಿ ॥ ಪ ॥

ಹೆಂಡತಿ : ಬಡತನವಿದ್ದರು ಮಕ್ಕಳಿರಬೇಕಂತ
ಸಾಲಿದ್ದರು ಸ್ವಾರಿಯೊಳಗ ಹಾಲಿರಬೇಕಂತ
ಕತ್ತೆಹಂಗ ತಿರಗ್ತೀದಿ ನಿನಗೇನು ಗೊತ್ತ
ಬೇಡಲಾರ್ದ ಬಂದೈತಿ ಈ ಶಿವ ಸಂಪತ್ತ ॥ ೧ ॥

ಗಂಡ : ಸಾಧು ಆಗಿ ಹೋಗ್ತೀನಿ ಸಂಚಾರಿಯಾಗಿ
ನೀಯಾಕ ಕಾಡತೀದಿ ಇದಿ ಮಾಯಿಯಾಗಿ
ತಪ್ಪಾಯ್ತು ಅಂತ ಕಾಲೀಗಿ ಬಾಗಿ
ಕಪ್ಪಿಹಂಗ ಕುಪ್ಪಳಸಿ ನಿನಪ್ಪು ಮೋಹನಾಂಗಿ ॥ ೨ ॥

(ಹೋಗುವರು)

ಪ್ರವೇಶ – ೧೪

ದೃಶ್ಯ ಮನೆ

(ಸಿದ್ಧಲಿಂಗಪ್ಪ ಯೋಚನೆಯಲ್ಲಿ)

ಗಿರೆಮ್ಮ : ಹಿರಿಯಾ! ಏನ ಗೇನ್ನಾಕ ಹತ್ತಿಯಲ್ಲ ಮಾರಾಯಾ.

ಸಿದ್ಧಲಿಂಗಪ್ಪ : ನನ್ನ ಮಗಾ ! ಸಿದ್ಧರಾಮಪ್ಪನ ಬಾಳು ಹ್ಯಾಂಗಾಯ್ತಲ್ಲಾಂತ ಚಿಂತಿ ಆವರಿಸಿ ಬಿಟ್ಟೈತಿ

ಗಿರೆಮ್ಮ : ಹಿಂಗ ಚಿಂತಿ ಮಾಡಿದರ ಸಂತಿ ಮುಗಿತೇನು ಹಿರಿಯಾ; ಈ ಜಗದ ಸಂತಿ ದೊಡ್ಡದೈತಿ ಇದ್ಕ ಅಂತ್ಯಯಿಲ್ಲ.

ಸಿದ್ಧಲಿಂಗಪ್ಪ : ಈಗೇನು ಮಾಡಲಿ

ಗಿರೆಮ್ಮ : ಈಗೇನು ಮಾಡಲಿ ಅಂತ ಕೈಕಟಗೊಂಡು ಚಿಂತಿಮಾಡಿದರ ಬರತಾದೇನ ಹಿರಿಯ. ಇದಕೊಂದು ಹೊಸ ದಾರಿ ಹುಡಕ ಬೇಕು.

ಸಿದ್ಧರಾಮ : ಹುಡಿಕ್ಯಾಡಿ ತಡಕ್ಯಾಡಿ ನನ ಸಲುವಾಗಿ ಬಡದಾಡಿ ಯಾಕ ನಿಮ್ಮ ಜೀವ ಸಣ್ಣ ಮಾಡ್ಕೊಂತೀರಿ ಯವ್ವಾ; ನಿನ್ನ ಮುಂದಾಲೋಚನೆ ಏನೈತಿ ನನಗೆಲ್ಲಾ ಗೊತ್ತಾತೈವ ಗೊತ್ತೈತಿ ನನ್ಮಗಾ ತೊಟ್ಟಂಗಿ ಕಳ್ಕೊಂಡ ಬಂದಾನ, ಮತ್ತೊಂದು ಅಂಗಿ ಹೊಲಿಸಬೇಕಂತ ವಿಚಾರ ನಡಸೀದಿ ಹೌದಿಲ್ಲ.

ಗಿರೆಮ್ಮ : ಹಂಗ ಬರಿಮ್ಯೆಲಿದ್ರ ಹ್ಯಾಂಗಪಾ, ಅಂಗಿ ಹರಿದ ಹೋಯ್ತು ಅಂತ ಬರೆ ಚಿಂತಿಯೊಳಗ ಕುಂತ್ರ ಹ್ಯಾಂಗ ? ಮತ್ತೊಂದು ಅಂಗಿ ಹೊಲಸ್ಗೊಂಡು ಜಗದ ಸುಗ್ಗಿ ಮಾಡಬೇಕಪ

ಸಿದ್ಧರಾಮ : ಯವ್ವಾ! ನೀನಂದಂಗ ಈ ಜಗದ ಸುಗ್ಗಿ ಮಾಡಬೇಕಂದ್ರ ಬರೆ ನೆಗ್ಗಿನ ಮುಳ್ಳ ತುಂಬ್ಯಾವು. ಬಗ್ಗಿ ನಟ್ಟ ನೆಗ್ಗಿನ ಮುಳ್ಳ ತೆಗೆಯುವದ್ರೊಳಗ ಮತ್ತೊಂದು ನಟ್ಟಿರಿತಾದ. ಹಂಗಂತ ತಿಳಿದ ಈ ಮುಳ್ಳದ್ದಿ ಹಾದಿ ತೊರಿಬೇಕಂತ ಮಾಡೀನಿ.

ಗಿರೆಮ್ಮ : ಯಾವ ಹಾದ್ಯಾಗ ನೆಗ್ಗಿನ ಮುಳ್ಳಿಲ್ಲ ತಮ್ಮ, ಪ್ರತಿಯೊಂದ ಹಾದ್ಯಾಗೂ ಮುಳ್ಳ ತುಂಬ್ಯಾವು ಆದರ ಜಾಣತನದಿಂದ.ನಟ್ಟ ಮುಳ್ಳ ತೆಗ್ದೆ ಮುಂದಕ್ಹೋಗ್ಬೇಕು.

ಸಿದ್ಧರಾಮ : ಬಟ್ಟ ಬಯಲ, ಕಟ್ಟ ಕಡೆಯ ನೆಟ್ಟನ ತುದಿ ಮ್ಯಾಲಿರ ಬೇಕಂತ ಮಾಡೀನಿ ಅಲ್ಲಿ ಯಾವ ನೆಗ್ಗಿನ ಮುಳ್ಳಿಲ್ಲ, ಜಾಲಿ ಮುಳ್ಳಿಲ್ಲ. ಅನ್ನ, ವಸನ, ವ್ಯೆಸನಗಳಿಲ್ಲದ ಹಸನಾದ ರಂಗಮಂಟಪದೊಳಗ ಓಡಾಡಬೇಕಂತೀನಿ.

ಗಿರೆಮ್ಮ : ಎಂಥ ಹುಚ್ಚ ಅದೀಯಂತೀನಿ, ಆ ರಂಗಮಂಟಪಕ್ಕ ಹೋದವರು ಮತ್ತು ತಿರುಗಿ ಬಂದು ಚದುರಂಗ ಮಂದಿರದೊಳಗೊಲಾಡಿದ್ದು ಗೊತ್ತೈತಿಲ್ಲ ನಿನಗ ?

ಸಿದ್ಧರಾಮ : ಗೊತ್ತು ಗುರಿ ಇಲ್ಲದ ತಿರತಿರಗಿ ಈ ಭೂಮೀಗಿ ಬಂದು ಏನ ಸಾಧಿಸಿದಂಗಾಯ್ತವಾ ಯವ್ವಾ! ಏನ ಸಾಧಿಸಿದಂಗಾಯ್ತು. ಅದೇ ಹೆಂಡತಿ, ಅದೇ ಮಕ್ಕಳು, ಅದೇ ಭೂಮಿ ಭಾಮೆ ಭಾಗ್ಯದ ಸರಮಾಲೆಗಳ ಆಶೆ ಹೊತ್ತು ತಿರುಗುವ ಕತ್ತೆಗೆ ತನ್ನಡುಬ್ಬದ ಮೇಲಿರುವ ಸಕ್ಕರಿ ಸವಿ ತಿಳಿಲಿಲ್ಲಾಂದ್ರ ಹ್ಯಾಂಗವಾ; ಹ್ಯಾಂಗ

ಗಿರೆವ್ವ : ಅರಿವುನೊಳಗಿದ್ದ ಇರುವಿ ಗಿಡದ ತುತ್ತತುದಿಯಲ್ಲಿರುವ ಹಣ್ಣಿನ ಸ್ವಾದವನ್ನ ಹೀರಿ, ಆ ಹಣ್ಣು ಕೆಡಿಸದ ತನ್ನಿರುವಿನತ್ತ ಬಂದು ಬ್ರಹ್ಮಾನಂದದೊಳಗೋಲಾಡ ತೈತಿ ಹಂಗ ನೀನು! ಇರುವಿ ಆಗಿ ಸಕ್ರಿ ಸವಿ ಸವಿಬೇಕಪಾ.

ಸಿದ್ಧರಾಮ : ಯವ್ವಾ! ನನಗ ಬ್ಯಾಡಾಗೇತಿ ಮತ್ತೊಂದು ಅಂಗಿ ಹೊಲಿಸಿದ ಮ್ಯಾಲ ಅದು ಹೊಲಸಾಗೂದ, ಈ ತೊಳಿಯೋದು, ಬಳಿಯೋದು, ಮಾಡೂದು ನನ್ನಡಿಯಿಂದ ಆಗೂದಿಲ್ಲವಾ, ಮೊದಲಾದರೂ ನಿನಗ ಎಷ್ಟೋ ಪರಿಯಿಂದ ಬೇಡ್ಕೊಂಡೆ

ಬ್ಯಾಡಂತ ನೀ ನಿನ್ನ ಹಠಾನೆ ಸಾಧಿಸಿ ಅಂಗಿ ಹೊಲಿಸಿದಿ ಅದು ನಡಬರಕ ಹರ್ದ ಹೋಯ್ತು.

ಸಿದ್ಧಲಿಂಗಪ್ಪ : ತಾಯಿ ಮಗ ಸುತ್ತಿ ಬಳಸಿ ಮಾತಾಡೂದ ಬ್ಯಾಡ, ಏನಿದ್ದರೂ ನಿರಾಳ ಮನಸ್ನಿಂದ ಬಿಚ್ಚಿಡ್ರಿ, ಹಿಂಗ ಒಡಪ್ಪ್ಯಾಗಿಟ್ಟು ಮಾತಾಡಿದ್ರ ಯಾರಿಗಿ ಅರ್ಥ ಆಗಬೇಕು ? ನೋಡು ಸಿದ್ಧರಾಮಪ್ಪ ನಿಮ್ಮವ್ವ ನಿನಗ ಮತ್ತೊಂದು ಮದವಿ ಮಾಡಬೇಕಂತ ತಯ್ಯಾರಾಗ್ಯಾಳ ಹೆಣ್ಣೆನೋ ಹೋಗಿ ನೋಡಿ ಬಂದಾಳ. ಅವರೂ ನಿನಗ ಕೊಡ್ತೀವಿ ಅಂತ ಒಪ್ಪಿಗಿ ಕೊಟ್ಟಾರ, ಇದ ವೈಶಾಖದಾಗ ಮದವಿಮಾಡಿ ಬಿಡೂನು ಇದ್ಕ ನೀ ಏನಂತಿ.

ಗಿರೆಮ್ಮ : ಹೋಗಿ ನೋಡಿ ಬಂದೀನಿ, ಹುಡಿಗೀನು ಕಣ್ಣು ಮೂಗೀಲೆ ಚಲೋ ಅದಾಳ ಇದ್ದ ಶ್ರೀಮಂತರು ಕೂಡಿ ಬಂದ ಒಗತಾನಕ್ಕ ಒಲ್ಲೆನ ಬ್ಯಾಡ ಏನಪಾ ಪೊಲೀಸ ಗೌಡನ (ಕಂಕಣಬಲಕ್ಕ) ತಮ್ಮನ ಹೆಂಡತಿ ಮದವಿ ಆದ ಮೂರು ವರ್ಷದಾಗ ಸತ್ತಳು. ಮತ್ತೊಂದು ಮದವಿ ಮಾಡಿಕೊಂಡು ಮನಿ ತುಂಬಾ ಮಕ್ಕಳನ್ನ ಹಡದ, ಈಗ ನಿಂದೇನ ವಯಸ್ಸ ಹೋಗ್ಯಾದ. ಒಂದ ಗಲ್ಲದಾಗ ಹಾಲು ಒಂದ ಗಲ್ಲದಾಗ ನೀರು.

ಸಿದ್ಧರಾಮ : ಅಮ್ಮಾ! ಅದೇನೆ ಇದ್ದರು, ಒಮ್ಮೆ ಈ ಪ್ರಪಂಚದ ಆಳ ಅನುಭವಿಸಿದ ಮೇಲೆ ಮತ್ತೇಕೆ ಅಳಿಯಲು ಹೋಗಬೇಕು ? ನಾನು ಮಾತ್ರ ವಿಷಯಾತುರಗಳನ್ನ ಹತ್ತಿಕ್ಕಿ ಲೋಕ ಜೀವನದ ಸುಖಶಾಂತಿ ಸಾಧನೆಯಲ್ಲಿ ನನ್ನನಾನರ್ಪಿಸಿಕೊಳ್ಳ ಬೇಕೆಂದಿದ್ದೇನೆ. ದಯಾಮಾಡಿ ನನ್ನಪಾಡಿಗೆ ನನಗಿರಲು ಬಿಡು. ಇಬ್ಬರು ತಮ್ಮಂದಿರುವರು ಅವರ ಮದುವೆಯನ್ನು ಮಾಡೋಣ. ತಂಗಿಯರ ಮದುವೆ ಮಾಡೋಣ, ಅವರೆಲ್ಲರನ್ನು ಬಿಟ್ಟು ನನಗ ನೀನ್ಯಾಕ ಕೈ ತೊಳ್ಕೊಂಡು ಯಾಕ ಬೆನ್ನ ಹತ್ತೀದಿ ಬೇತಾಳನ್ಹಂಗ.

ಗಿರೆಮ್ಮ : ನೋಡ್ರಿ, ನೋಡ್ರಿ ಹ್ಯಾಂಗ ಮಾತಾಡ್ತಾನ ನಿಮ್ಮ ಮಗಾ; ನನಗ ಬೆನ್ನ ಹತ್ತಿದ ಬೇತಾಳ ಅಂತಾನ ಅನ್ನೋ ಅನ್ನು ಯಾಕ ನಾಲಿಗಿ ಉದ್ದ ಆಗ್ಯಾದ ನೋಡು *(ಅಳುತ್ತ)* ಹಸಗೂಸಿಗಿ ಬಿಟ್ಟು ಸತ್ತು ಹ್ವಾದಳು ನಿನ್ನ ಹೆಂಡತಿ. ಮುಂದ ಆ ಶಿಸುವಿಗಿ ಯಾರ ಸಲುಹಬೇಕು. ನನಗ ವಯಸ್ಸಾಗ್ಯಾದ. ಮದವಿ ಮಾಡ್ಕೊಂಡ್ರ ಬಂದಾಕಿ ನಿನ್ನ ಯೋಗಕ್ಷಮ ನೋಡ್ಕೊಂತಾಳ. ಆ ಎಳಿಕಂದಮ್ಮಗ ಸಲೂತಾಳ ನನಗೂ

ಒಂದ ಭಾರ ಕಡ್ಮಿ ಆಗ್ತೈತಿ. ನೋಡೋ ನೋಡೋ ನಿನ್ಮಗಳು ಎಷ್ಟ ಚಲುವಿ ಅದಾಳ.

ಸಿದ್ಧರಾಮ : ಯವ್ವಾ! ನೀ ಹ್ಯಾಂಗ ಒಂದೊಂದು ಭಾರದಿಂದ ವಿಮುಕ್ತಳಾಗ ಮಾಡಿದ್ಯೋ ಹಂಗ ನಾನೂ ವಿಮುಕ್ತನಾಗಬೇಕಂತ ಬಯಸ್ತೀನಿ. ಹೊರಲಾರದ ಹೊರೆ ಹೊರಿಸಿ ಆ ಭಾರ ತಾಳಲಾರ್ದ ನಡು ಹಾದಿಯಲ್ಲಿಳಿಸಿ ಮತ್ತೊಬ್ಬರ ಸಹಾಯದಿಂದ ಹೊತ್ಗೊಂಡು ಹೋಗತಕ್ಕಂಥ ಸನ್ನಿವೇಶಯಾಕ ಸೃಷ್ಟಿ ಮಾಡ್ತೇವಾ ಯಾಕ ಸೃಷ್ಟಿ ಮಾಡ್ತಿ.

ಸಿದ್ಧಲಿಂಗಪ್ಪ : ಸಿದ್ಧರಾಮ! ಯಾರೇನ್ ಬಯಿಸಿದರೂ ಅದು ನಿನ್ನ ಹಿತಕ್ಕಾಗೇ ಹೊರ್ತು ಅನ್ಯರಿಗಲ್ಲ.

ಸಿದ್ಧರಾಮ : ನಾನಂತೂ ಯಾವ ವಿಷಯಾನೂ ಮುಚ್ಚಿಗೊಂಡು ಕುಂತಿಲ್ಲ. ಎಲ್ಲಾ ನಿಮ್ಮುಂಗ ಬಿಚ್ಚಿಟ್ಟೀನಿ ನಾನಷ್ಟು ಬಾಗೇವಾಡಿಗಿ ಹೋಗಿ ಬರತೀನಿ.

ಗಿರೆಮ್ಮ : ಹ್ವಾದ್ರ ಹ್ವಾದಕಡೆ, ಬಂದ್ರ ಬಂದಕಡೆ ಆದ್ರೆ ಹ್ಯಾಂಗೋ, ಸಿದ್ಧರಾಮ ಆ ಸಾರಿ ಅಂಗಿಡಿ ಮೂಲತರತೀನಿ ಅಂತ ಹ್ವಾದವ ಆರವರುಷದ ಮ್ಯಾಲ ತಿರಗಿ ಬಂದಿ ಈಗೇನ್ ಮಾಡ್ತಿ ನೋಡು ಇದೊಂದು ಮದವಿ ಮಾಡಿ ನಿನಗ ಮುಂಡಾ ಮುಚ್ಚತೀನಿ ಮುಂದ ಹ್ಯಾಂಗರ ಮಾಡ್ಕೊಂದು ತಿನ್ನು.

ಸಿದ್ಧರಾಮ : ಆಗ್ಲೇವಾ! ನಿಂದ ಮಾತ ಗೆದೀಲಿ ಆಯ್ತಾ *(ಹೋಗುವನು)* ನೀನೆಷ್ಟ ಮದವಿ ಮಾಡ್ತೀಯೋ ಮಾಡು.

ಗಿರೆಮ್ಮ : ಈ ಸಿದ್ಧರಾಮನ ಕಾಲಾಗ ಸಾಕ ಸಾಕಾಗಿ ಹೇಗೇತಿ ನನಿಜೀವ. ಬ್ಯಾಡಂದ್ರು ಊರಾಗ ಕಿರಾಣಿ ಮಾಡಿದ. ಅಂಗಡ್ಯಾಗ ಮಾಲಿಲ್ಲ. ಉದ್ರಿಕೊಟ್ಟಾನ. ಅಂಗಡಿ ಖಾಲಿ ಆಗೇತಿ ಉದ್ರಿ ಎಂದ ಏಳಬೇಕು. ಮಾಲ ಎಂದ ತರಬೇಕ, ಬಂದವ್ರಿಗಿ ಇಲ್ಲಾ ಅನ್ನಾಂಗಿಲ್ಲ ಪುಣ್ಯಾತ್ಮ ಇಂವಾ ಒಬ್ಬ ನಮ್ಮ ಪಾಲಿಗಿ ಕಲಬುರ್ಗಿ ಶರಣಬಸಪ್ಪ ಆಗ್ಯಾನ.

ಸಿದ್ಧಲಿಂಗಪ್ಪ : ನಾನಷ್ಟು ಪೊಲೀಸ್ ಗೌಡರ ಮನೀಗಿ ಹೋಗಿ ಬರ್ತಿನಿ *(ಹೋಗುವರು)*

ಗಿರೆಮ್ಮ : ಹಂಪಿ ವಿರುಪಾಕ್ಷ, ರೇವಣಸಿದ್ಧೇಶ್ವರ ಎಲ್ಲಾ ನಿನಗ ಕೂಡ್ಯೆತಿ

ಲೈಟ್ ಆಫ್

ಪ್ರವೇಶ – ೧೫

ದೃಶ್ಯ ರಸ್ತಾ

ನೀಲಕಂಠ ಸ್ವಾಮಿ : ಚೈತದ್ರ ಚಿಗುರುಂಡ ಕೋಗಿಲೆಯು ಯಾವದನ್ನೂ ವೈಗಂಟಿಸಿಕೊಳ್ಳದೆ ಸ್ವತಂತ್ರತೆಯಿಂದ ಹೇಗೆ ವನವಿಹಾರಿಯಾಗಿರುವದೋ ? ಅದರಂತೆ ಆಧ್ಯಾತ್ಮದ ಚಿಗುರುನುಂಡ ಸಿದ್ಧರಾಮ ವನವಿಹಾರಿಯಾದ ಜಗಸಂಚಾರಿಯಾದ. ಅ ಸಂಚಾರದಲ್ಲಿಯೇ ಶಿವನನ್ನ ಕಂಡುಕೊಳ್ಳಲು ತನ್ನ ಸುತ್ತ ಮುತ್ತ ಬೆಳದಿರುವ ಕಮರಿ ಕಂಟಿಗಳಿಂದ ದೂರಾದ, ಹಠ ಸಾಧಿಸುವಲ್ಲಿ ಮಿಗಿಲಾದ ಕೂಡಿಗಿ ಗಿರೆಮ್ಮ ಒಂದೇ ಹಂದರಲ್ಲಿ ತಂದೆ ಮಗಳ ಮದುವೆ ಮಾಡಿದಳು. ಮಗಳು ಮೂರು ವರುಷದ ಹಸುಳೆ, ಅದೆಂಥ ಕಂಕಣ ಬಲ ಕೂಡಿ ಬಂದಿರಬೇಕು ? ಆದರೇನು ಸಿದ್ಧರಾಮನು ಎರಡನೆ ಮದುವೆ ಆದದ್ದಷ್ಟೇ ಕೂನ, ಆಕೆ ಗಂಡನ ಮನೆಗೆ ಬರಲಿಲ್ಲ ಇವರು ಕರೆಯಲೂ ಹೋಗಲಿಲ್ಲ. ವೈರಾಗ್ಯದ ತುತ್ತ ತುದಿಯನ್ನೇರಲು ಸಿದ್ಧರಾಮನಿಗೆ ಪೂರಕ ಶಕ್ತಿಯಾಗಿ ನಿಂತಿರಬೇಕು ಅಂತ ನನಗ ಅನಸ್ತ ಇದೆ ಆ ಮದುವೆ.

ಸಿದ್ಧಲಿಂಗಪ್ಪ : ಪೂಜ್ಯರಿಗೆ ಪ್ರಣಾಮಗಳು

ನೀಲಕಂಠಸ್ವಾಮಿ : ಶುಭವಾಗಲಿ! ಏಳು ಸಿದ್ಧಲಿಂಗಪ್ಪ ಎಲ್ಲಾ ಕುಶಲವೇ

ಸಿದ್ಧಲಿಂಗಪ್ಪ : ಎಲ್ಲಿಯ ಕುಶಲ ಪೂಜ್ಯರೇ ಎರಡನೆಯ ಮದುವೆಯಲ್ಲಿ ಸಿದ್ಧನು ಹಂದರದಿಂದ ಎದ್ದು ಹೋದವನು ಮನೆಗೆ ಹಿಂದಿರುಗಿಲ್ಲ. ಇಂಥಲ್ಲೇ ಇರುವನೆಂಬ ಸುಳಿವು ಕೂಡಾ ದೊರೆತಿಲ್ಲ. ನನ್ನಮಗ ರಾಚಪ್ಪನು ಬುಡು ಬುಡಕ್ಯಾನ ವೇಷ ಹಾಕಿಕೊಂಡು ಈ ನಾಡೇ ತಿರುಗಿ ಬಂದರೂ ಸುಳಿವು ಹತ್ತಲಿಲ್ಲ. ಮಗನು ಮನೆ ಬಿಟ್ಟು ಹೋದನಲ್ಲಾ ಎಂಬ ಚಿಂತೆ ಹಚ್ಚಿಕೊಂಡು ಆಕೆ ಸೊರಗಿ ಸಣ್ಣಾಗಿದ್ದಾಳೆ.

ನೀಲಕಂಠ ಸ್ವಾಮಿ : ಮಾಡಿಕೊಂಡ ಮಡದಿಯನ್ನು, ಮಗುವನ್ನು ಬಿಟ್ಟು ಮಧ್ಯರಾತ್ರಿಯಲ್ಲಿ ಮನೆಯಿಂದ ಹೊರಗಾದ ಸಿದ್ಧಾರ್ಥನು ಬೋಧಿ ವೃಕ್ಷದ ಕೆಳಗೆ ಕೂತು ಗೌತಮ ಬುದ್ಧನಾದಂತೆ ನಿನ್ನ ಮಗ ಸಿದ್ಧರಾಮನೂ ಕೂಡ ಮದುವೆಯಾದ ಮರುಕ್ಷಣ

ಮಧ್ಯಾನ್ಹದ ಉರಿಬಿಸಿಲಿನಲಿ ಪಾದಯಾತ್ರೆ ಕೈಕೊಂಡ ಸಿದ್ಧಲಿಂಗಪ್ಪ! ಹಾಲು ನೀರಿಗಿಂತಲೂ ಸತ್ವ ಪೂರ್ಣವಾಗಿದೆ ಅಲ್ಲವೇ ?

ಸಿದ್ಧಲಿಂಗಪ್ಪ : ನಿಜ ಪೂಜ್ಯರೇ

ನೀಲಕಂಠಸ್ವಾಮಿ : ಆದರೇ ಮೀನು ನೀರಿನಲ್ಲಿ ವಾಸಮಾಡುತ್ತದೆ ಹೊರತು ಆ ಹಾಲಿನಲ್ಲೆಲ್ಲ ಆ ಹರಿಯುವ ನೀರಿಗೆ ಎದುರು ಈಜುತ್ತಾನೆ ನಿನ್ನ ಮಗ! ಎಳೆತನದಲ್ಲಿಂಯೇ ವಿರತಿ ಭಾವ ಮೈಗೂಡಿಸಿಕೊಂಡು ಬಂದವನವನು. ಶಿವರತಿಯಲಿ ಬೆರೆಯುವ ಸಾಧನೆಯ ಸಂಪತ್ತು ಪಡೆದುಕೊಳ್ಳಲು ಆಧ್ಯಾತ್ಮದ ಕೃಷಿ ಋಷಿ ಆತ ಆತನಿಗಾಗಿ ವ್ಯರ್ಥ ಹುಡುಕಾಡಿ, ತಡಕಾಡಿ ಕಾಡಡವಿಯು ಸೇರದಿರಿ. ಮರದಿಂದ ಬೇರೆಯಾದ ಟೊಂಗೆಯು ಮತ್ತೆ ಮರಕ್ಕೆ ಅಂಟಿಕೊಳ್ಳುವದೇನು ? ಬಳ್ಳಿಯ ತುಂಬಿನಿಂದ ಬೇರ್ಪಟ್ಟ ಹಣ್ಣು ಮತ್ತೆ ಆ ಬಳ್ಳಿಗೆ ಅಂಟಿಕೊಳ್ಳ ಬಹುದೇನು ? ಅವನೀಗ ಕೂಡಿಗಿ ಬಳ್ಳಿಯ ತುಂಬಿನಿಂದ ಕಡೀಗಿ ಆಗಿ ನಾಡೋಜನಾಗಿ ಕಡೆಕೊಳ್ಳದಾಚೆ ಮೆರಿತಾನೆ. ದೃಢ ಸಂಕಲ್ಪದಿಂದ ಮೃಡ ಸ್ವರೂಪಿಯೇ ತಾನಾಗಿ ನಾಡಿನವರಿಂದ ಪೂಜೆಗೊಳ್ಳುತ್ತಾನೆ.

ಸಿದ್ಧಲಿಂಗಪ್ಪ : ಬ್ಯಾಡಾ ಬ್ಯಾಡಂದ್ರು ನಮ್ಮ ಸಿದ್ಧರಾಮನ ಮೊದಲನೆಯ ಹೆಂಡತಿ ಮಗಳು. ಮೂರು ವರುಷದ ಕೂಸಿಗಿ ಮದುವಿ ಮಾಡಿದಳು. ನನ್ನ ಹೆಂಡತಿ ತನ್ನ ಹಠಾನೆ ಸಾಧಿಸಿದ್ಳು. ಯಾವದೇ ವಿಷಯವಿದ್ದರೂ ಪ್ರೀತಿಯಿಂದ ಗೆದಿಬೇಕೂ ಅಂತ ಹೇಳ್ತಾರೆ ಹಿರಿಯರು ಆದರೆ ಅವಳು ತನ್ನದೆ ಛಲಾ ನಡಸಿದ್ಳು ಬಲವಂತದಿಂದ ಗೆದ್ದಳು.

ನೀಲಕಂಠ ಸ್ವಾಮಿ : ಆ ತಾಯಿಗೆ ಹುಟ್ಟಿನಿಂದಲೇ ಅಂಟಿಕೊಂಡಬಂದ ಹಟ ಬೆಳೆದು ಹೆಮ್ಮರವಾಗಿ ನಿಂತಾಗ ಅದನ್ನು ಬಗ್ಗಿಸಲು ಯಾರಿಂದಲೂ ಸಾಧ್ಯವಿಲ್ಲ. ಆದರೂ ಆ ಹಟವ ಹಿಂದೆ ಕೂಡಿಗಿ ಮನೆತನದ ಕೀರ್ತಿ ಅಡಗಿದೆ ಎಂಬುದನ್ನ ಮಾತ್ರ ಮರೆಯದಿರು ಸಿದ್ಧಲಿಂಗಪ್ಪ.

ಸಿದ್ಧಲಿಂಗಪ್ಪ : ಅದು ಹೇಗೆ ಪೂಜ್ಯರೇ

ನೀಲಕಂಠಸ್ವಾಮಿ : ಯೋಗಗಳಲ್ಲಿ ಹಠಯೋಗವೂ ಒಂದು. ಸಾವಿರ ವರುಷ ತಪಗೈದರೂ ಪ್ರತ್ಯಕ್ಷ ಆಗದ ಪರಮೇಶ್ವರನು ಭೀಮನ ಹಠಯೋಗದಿಂದ ತತ್‌ಕ್ಷಣವೇ ಪ್ರತ್ಯಕ್ಷನಾದ ಆ ಪರಶಿವನು;

ಹಠಯೋಗದಲ್ಲಿ ನಿಷ್ಠೆಯೆಂಬ ಶಕ್ತಿ ಅಡಗಿರುತ್ತದೆ, ಹಠಯೋಗದಿಂದಲೇ ಮಾರ್ಕಂಡೇಯ ಮೃತ್ಯುಂಜಯನಾದ, ಹಠಯೋಗದಿಂದಲೇ ಪ್ರಲ್ಹಾದ ನಾರಸಿಂಹನನ್ನು ಪ್ರಸನ್ನೀಕರಿಸಿಕೊಂಡ, ಹಠಯೋಗದಿಂದಲೇ ಪತಿಯ ಪ್ರಾಣವನ್ನು ಮರಳಿ ಪಡೆದಳು. ಸತ್ಯವಾನ ಸಾವಿತ್ರಿ ಅಂತಹ ಹಠವನ್ನು ಅರ್ಥಾತ್ ತಪಸ್ಸನ್ನು ಆಚರಿಸಿ ನಾಲ್ಕು ಮಕ್ಕಳ ತಾಯಿಯಾದಳು. ಆ ಅಚಲ ಶ್ರದ್ಧೆಯ ಪ್ರತೀಕವೇ ನಿನ್ನ ಮಗ ಸಿದ್ಧರಾಮನು.

ಸಿದ್ಧಲಿಂಗಪ್ಪ : ಅದೋ ನೋಡಿ ಬಂದೇ ಬಿಟ್ಟಳು ಎಂಟ್ಹತ್ತು ದಿವಸಗಳಾದವು ಮಗನನ್ನು ಹುಡುಕಲು ಹೋಗಿ.

ನೀಲಕಂಠಸ್ವಾಮಿ : ಗಿರೆಮ್ಮ! ಸಿಕ್ಕನೇ ನಿನ್ನ ಮಗಾ

ಗಿರೆಮ್ಮಾ : ಹುಬ್ಬಳ್ಳಿ ಸಿದ್ಧಾರೂಢರ ಮಠದಾಗಿರತಾನೇನಂತ ಅಲ್ಲಿಗೂ ಹೋಗಿ ಬಂದೀನ್ರಿ. ಲಚ್ಯಾಣಕಮರಿ ಮಠದ ಸಿದ್ಧಪ್ಪ ಮಹಾರಾಜರ ಹತ್ತರ ಇರತಾನೇನಂತ ಅಲ್ಲಿಗೂ ಹೋಗಿ ಬಂದೀನ್ರಿ, ಎಲ್ಲಿಯೂ ಸುಳಿವ ಹತ್ತಲಿಲ್ರಿಯಪ್ಪಾ, ಅಲ್ಲ ಹಿರಿಯ ನಮ್ಮ ಸಣ್ಣ ಮಗಾ ರಾಚಪ್ಪ ಬಂದನೇನು.

ಸಿದ್ಧಲಿಂಗಪ್ಪ : ಆಂಧ್ರ ಮಹಾರಾಷ್ಟ್ರ ಕರ್ನಾಟಕ ಎತ್ತಿಹಾಕಿ ಬಂದ ಎಲ್ಲಿಯೂ ಸುಳಿವ ಸಿಕ್ಕಿಲ್ಲ.

ನೀಲಕಂಠಸ್ವಾಮಿ : ತಾಯಿ ಗಿರೆಮ್ಮ! ನಿನ್ನ ಮಗನೀಗ ಈ ಪ್ರಪಂಚದ ಬಳ್ಳಿಯ ಕಾಲ್ತೊಡಕಿನಿಂದ ಬಿಡಿಸಿಗೊಂಡು ನಿರಾಭಾರಿಯಾಗಿದ್ದಾನೆ. ಆತನ ಸಲುವಾಗಿ ಯಾರೂ ಹುಡುಕಾಡುವದು ಬೇಡ ತಾಯಿ! ನಾಡಾಡಿಯಾದವನು ಮತ್ತೆ ಕೂಡಿಕೆಡುವದಿಲ್ಲ.

ಗಿರೆಮ್ಮ : ಹಡದ ಕರಳ ! ಅಧ್ಯಾಂಗ ಕೇಳತ್ತರಿಯಪ್ಪಾ

ನೀಲಕಂಠಸ್ವಾಮಿ : ಆ ಹಡೆದ ಕರಳಬಳ್ಳಿ ತನ್ನ ತುಂಬಿನಿಂದ ಎಷ್ಟ ದಿನಾಂತ ಹಿಡ್ಕೊಂಡು ಕುಂದ್ರತಾದ ಆ ಫಲಕ್ಕ ? ಫಲಾಹೋಗಿ ಪರಿಪಕ್ವವಾದಾಗ ತನ್ನ ತುಂಬಿನಿಂದ ತನಗರಿಯದಂತೆ ಬಿಟ್ಟಿರತಾದ ಹಂಗ ಆ ವಿಶ್ವ ಬಳ್ಳಿಯಂತಾಗಬೇಕು. ಬರುವಾಗ ಒಬ್ಬನೆ, ಹೋಗುವಾಗ ಒಬ್ಬನೇ ಆದರ ಬದುಕಿನ ಬಂಡ್ಯಾಗ ಹಲವರೊಡನೆ ಕೂಡಿದ್ದು ತಾಕಡೀಗಿರ ಬೇಕು ಅಂತ ಹೇಳಿದ ಶರಣರ ಸೂಳ್ನುಡಿಗಿ ಸಾಕ್ಷಿ ಆದ ನಿನ್ಮಗಾ.

ಗಿರೆಮ್ಮ : ಏನ್ಮಾಡ್ಬೇಕ್ರಪಾ! ನಾನೇನೋ ಮಾಡಬೇಕಂತ ಮಗನ ಕೂಡ ಹಠ ಸಾಧಿಸಿದ್ಯಾ ಆದ್ರ ಅದು ಆಗುವಂಗ ಆಗಿ ಹೋಯ್ತು.

ನೀಲಕಂಠಸ್ವಾಮಿ : ಜಗದ ನಿಯಂತ್ರಣಕ್ಕ ಯಾರು ತಡೆ ಹಿಡಿದು ನಿಲ್ಲಿಸುವರು ? ತಾಯಿ! ಆ ಸೃಷ್ಟಿ ತನ್ನ ಸಮತೋಲನ ಕಾಯ್ದುಕೊಳ್ಳುತ್ತದೆ. ಅದ ತೂಕ ತಪ್ಪಿದಾಗ ಏನಾದರೂ ಅಪಾಯ ಸಂಭವಿಸುತ್ತದೆ. ಒಬ್ಬರ ಹೋಗ್ತಾರ ಒಬ್ಬರ ಬರತಾರ, ಒಬ್ಬರು ಎಲ್ಲೆಲ್ಲಿಯೋ ಹೋಗಿ ಆ ನೆಲದ ಋಣ ತೀರಸ್ತಾರ. ಅದಕಂತ ಹಿಗ್ಗ ಬಾರದು, ಕೊರಗ ಬಾರದು ಸೊರಗ ಬಾರದು.

ಸಿದ್ಧಲಿಂಗಪ್ಪ : ಪೂಜ್ಯರೆ ಮನೆಗೆ ದಯಮಾಡಿಸಿ

ಗಿರೆಮ್ಮ : ಅಂದು ಬಂದು ವರ ಕೊಟ್ಟವರು ನೀವs ಇಂದ ಬಂದು ಚಿಂತಿಸ ಬ್ಯಾಡಂತ ಹೇಳವರು ನೀವ; *(ಹೋಗುವರು ಲೈಟ್ ಆಫ್)*

ಪ್ರವೇಶ – ೧೬

ದೃಶ್ಯ ಕಮರಿಕೊಳ್ಳ

ಮೋಹಿನಿ : ಯಾರಿವನು! ಏನಿವನ ರೂಪ ಏನಿವನ ಲಾವಣ್ಯ ಈತನ ರೂಪ ಸಂಪತ್ತಿಗೆ ಮನ ಸೋಲದವರಾರಿಲ್ಲ! ಅಬ್ಬಾ ಕುಟ್ಟಿ ಮಾಡಿದ ಮೈಕಟ್ಟು, ತಿದ್ದ ತೀಡಿದ ಅಂಗವಿನ್ಯಾಸಕ್ಕೆ ಮನ ಸೋತಿರುವೆ. ಓ! ತರುಣಾ! ಎಚ್ಚರಾಗು ಬಂದು ಈ ಅಬಲೆಯ ಅಧರಾಮೃತವನ್ನು ಹೀರು.............ಏನು ಮಾಡಲಿ! ಎಲ್ಲಿಗೆ ಹೋಗಲಿ, ಈತನಿಗೆ ಎಚ್ಚರಿಸುವ ಬಗೆಯಂತು? ನನ್ನ ನಾಟ್ಯದಿಂದ ಶಿವಪೂಜೆಯಲ್ಲಿ ನಿರತನಾದ ತರುಣನಿಗೆ ಎಚ್ಚರಿಸುವೆ.

(ಪದ ಹಾಡು)

ಸಿದ್ಧರಾಮ : ಯಾರು ? ಯಾರು ನೀ ಯೋಗ ಸಮಾಧಿಯಲ್ಲಿರುವ ನನಗೆ ಎಚ್ಚರಿಸಿದವರಾರು?

ಮೋಹಿನಿ : ನಾನು...........ಮೋಹಿನಿ....

ಸಿದ್ಧರಾಮ : ಓ! ಮೋಹಿನಿ! ಇಲ್ಲಿಗೇಕೆ ಬಂದಿರುವೆ.

ಮೋಹಿನಿ : ನನ್ನ ಮೋಹನನೆಡೆಗೆ.

ಸಿದ್ಧರಾಮ : ಇಲ್ಲಿ ಈ ನೈಮಿಷಾರಣ್ಯದಲ್ಲಿ ನಿನ್ನ ಮೋಹನನಿಲ್ಲ

ಮೋಹಿನಿ : ಸುಳ್ಳೇಕೆ ಹೇಳುವೆ ನನ್ನ ಮುಂದೆಯೇ ನಿಂತಿರುವನು.

ಸಿದ್ಧರಾಮ : ಹಾಗಾದರೆ ಹುಡುಕು.

ಮೋಹಿನಿ : ನನ್ನೆದೆಯ ಗೂಡಿನಿಂದ ಹೊರಬಂದು ನಿನ್ನ ರೂಪದಲ್ಲಿ ನಿಂತಿದ್ದಾನೆ.

ಸಿದ್ಧರಾಮ : ಅರ್ಥವಾಯಿತು ನಿನ್ನ ಮೋಹಿನಿ ತರಂಗಿಣಿಯ ನಾದಕ್ಕೆ ಮನ ಸೋಲದ ನಾನೊಬ್ಬ ಶಿವಚಿಂತಕ.

ಮೋಹಿನಿ : ಆ ನಿನ್ನ ಶಿವನಿಗೂ ಬಿಟ್ಟಿಲ್ಲ ಈ ಮಾಯೆ! ಅಂತೆಯೇ ಪಾರ್ವತಿಯನ್ನು ತೊಡೆಯಮೇಲೆ ಕೂರಿಸಿಕೊಂಡ. ಗಂಗೆಯನ್ನು ಜಡೆಯಲ್ಲಿರಿಸಿಕೊಂಡ, ಬ್ರಹ್ಮ ತಾ ಸೃಷ್ಟಿಸಿದ ಸರಸ್ವತಿಯನ್ನ ವರೆಸಿಕೊಂಡ ಇನ್ನೂ ವಿಷ್ಣುವಿನದಂತು ಹದಿನಾರು ಸಾವಿರ ಗೋಪಿಕೆಯರು ಅಷ್ಟ ಭಾರ್ಯಾ ಸಂಪತ್ತಿನಿಂದೊಡಗೂಡಿದವನು. ಇಂಥವರ ಚಿಂತನೆಯೊಳಗಿಂದ ಹೊರಗೆಬಂದು ಈ ನಿನ್ನ ದೇಹಾಲಿಂಗನಕ್ಕೆ ಬಯಸಿ ಬಂದ ಈ ಅಂಗನೆಯ ಆ ಲಿಂಗನದಲ್ಲಿ ಸುಖಪಡು.

ಸಿದ್ಧರಾಮ : ಯಾವುದು ಸುಖ? ಹಳೆ ತೊಗಲು ಹಸಿ ರಕ್ತದಿಂ ದೊಡಗೂಡಿದ ಈ ದೇಹದೊಡನೆ ರಾಸಕ್ರೀಡೆಯಾಡುವುದು ಸುಖವೇ? ಉಚ್ಚೆಯಾ ಬಚ್ಚಲದಲ್ಲಿ ಬಿದ್ದು ಒದ್ದಾಡುವುದು ಸುಖವೇ? ಕೀವು ತುಂಬಿ ವಸರುವ ಗಡಿಗೆಯ ಸೌಂದರ್ಯಕ್ಕೆ ಮಾರು ಹೋಗಿ ಭವಗೆಟ್ಟು ತಿರುಗುವದು ಸುಖವೇ?

ಮೋಹಿನಿ : ಇದೇ ಸುಖವೆಂದು ಭಾವಿಸಿ ಮೂಲೋಕವೇ ಮುಳುಗೇಳುತ್ತಿದೆ.

ಸಿದ್ಧರಾಮ : ಆ ಮೂಲೋಕದವರಲ್ಲಿ ನಾನೂ ಒಬ್ಬ. ಅದನ್ನ ಅನುಭವಿಸಿಯೇ ನಾನಿಲ್ಲಿಗೆ ಬಂದು ಕುಳಿತಿರತುವೆ? ಎಷ್ಟು ರೂಪದಲ್ಲಿ ಕಾಡುತ್ತಿರುವೆ? ಬೇಡಾ ಬೇಡಾ ನನ್ನನ್ನು ಕಾಡದಿರು . ಈ ಕಾಡಿನಲ್ಲಿ ನನ್ನನ್ನಾಗಿಸಲು ಹೋರಾಡುವ ಸಾಹಸಕ್ಕೆ ಅಡ್ಡವಾಗಿ ನಿಲ್ಲದಿರು. ಹೊರಟು ಹೋಗು ಇಲ್ಲಿಂದ ಅವರಿವರ ಉಧಾರಣೆಗಳೆನಗೆ ಬೇಕಾಗಿಲ್ಲಾ.

ಮೋಹಿನಿ : ಅಂದರೆ?

ಸಿದ್ಧರಾಮ : ಹಿಂತಿರುಗಿ ಹೋಗು.

ಮೋಹಿನಿ : ಹಿಂತಿರುಗಿ ಹೋಗಲು ಬಂದಿಲ್ಲಾ ಈ ಪಲ್ಲವ ಪಾಣಿ. ನನ್ನಂಗ ಸುಖ ಕೊಟ್ಟೇ ಹಿಂದಿರುಗುವೆ.

ಸಿದ್ಧರಾಮ : ನನ್ನನ್ನು ಕಾಡಿಸಿ ಪೀಡಿಸಿ ಕೊಪಕ್ಕೆಡೆಯಾಗಿ ಸುಟ್ಟುಹೋಗದಿರು

ಮೋಹಿನಿ : ಸುಟ್ಟು ಭಸ್ಮವಾದರೂ ಚಿಂತೆಯಿಲ್ಲ.

ಸಿದ್ಧರಾಮ : ನಿನ್ನಿಷ್ಟ(ಮತ್ತೆ ಅನುಷ್ಠಾನಕ್ಕೆ ಕೂಡುವನು ಮೋಹಿನಿ ನೃತ್ಯ ಮಾಡುತ್ತಾ ಮೈ ಮುಟ್ಟಲು ಹೋದಾಗ ಉರಿಹತ್ತಿ ಭಸ್ಮವಾಗುವಳು.

(ಸಿದ್ಧರಾಮನು ಅನುಷ್ಠಾನಕ್ಕೆ ಕುಳಿತಿರುವವನು ಹುತ್ತು ಬೆಳೆಯುವದು, ಆಕಳು ಹಾಲು ಕರೆದು ಹೋಗುವದು, ಸರ್ಪಗಳು ಮೈಮೇಲೆ ಹರಿದಾಡುವವು)

ಮಲ್ಲೇಶಪ್ಪ : ಈ ಕುಸನೂರ ಮಲ್ಲೇಶಪ್ಪ ಅಂದ್ರ ಇಡೀ ಕಲಬುರ್ಗಿನೆ ನಡಗ್ತಾದ. ಸುತ್ತ ಹತ್ತ ಹರದಾರಿ ಮಟ ಸಾಲಾ ಕೊಟ್ಟ ಶ್ರೀಮಂತ ಅಂತ ಹೊಗಳ್ತೈತಿ ಸಾವಿರಾರು ಎಕರೆ ಜಮೀನ್ದಾರನಾದ ನನಗ ಎಲ್ಲಿಲ್ಲದ ಸ್ವಾಗತ, ಅಂಥ ನಂದೂರ ಇಟಗಿ ದೇಶಮುಖರು ನನಗಂದ್ರ ಪ್ರಾಣಾನ ಕೊಡ್ತಾರ, ಹೆಚ್ಯಾಕ ನಾನಿಲ್ಲದ ಅವರೆಲ್ಲಿಯೂ ನ್ಯಾಯ ಮಾಡೂದಿಲ್ಲ ಆದರೇನು ? ಈ ಸಿರಿ ಸಂಪತ್ತು ಜಳದಂತೆ, ಕಾಂಚನ ಮೃಗದಂತೆ, ನನಗೆ ನಿಜವಾದ ಸಂಪತ್ತು ಎಲ್ಲಿ ದೊರಕೀತು ಅಂತ ಶೋಧ ಮಾಡುವದರಲ್ಲಿಯೇ ದಿನಗಳೆದೆ. ದಿನದಂತೆ ದಿನವಿಲ್ಲ, ಮನದಂತೆ ಮನವಿಲ್ಲ. ಜನ ಜಗವು ಚಣ ಚಣಕೆ ನವ ನವ್ಯ ಸೃಷ್ಟಿಯಾಗುತ್ತಿರುವದು ಕಂಡು ಮೂಕ ವಿಸ್ಮಿತನಾಗೀನಿ.

ಸಿದ್ಧರಾಮ : ಓಂ ನಮಃ ಶಿವಾಯ, ಓಂ ನಮಃ ಶಿವಾಯ, ಓಂ ನಮಃ ಶಿವಾಯ

ಮಲ್ಲೇಶಪ್ಪ : ಎಲ್ಲಿಂದ ಬರುತಿಹುದು ಈ ಓಂಕಾರನಾದ. ಅದೆಷ್ಟು ಸುಶ್ರಾವ್ಯವಾಗಿದೆ. ಬೀಸಿದ ತಂಗಾಳಿಯೊಡನೆ ತರೆಗಲೆಯಂತೆ ಬರುವ ತರಂಗಳ ಇನದನಿಗೆ ನನ್ನ ಮನ ಸೂರೆಗೊಂಡಿದೆ. ನನ್ನಾಶಾ ಜೀವನಕ್ಕೆ ಈಶ ಕೃಪೆಯಾದೀತೆ ? ಮನ ದಳಲ ನೀಗೀತೆ? ವರ್ಷಾ ಋತು ಸಂಭ್ರಮಿಸೀತೆ ?

ಸಿದ್ಧರಾಮ : ಓಂ ನಮಃ ಶಿವಾಯ, ಓಂ ನಮಃ ಶಿವಾಯ, ಓಂ ನಮಃ ಶಿವಾಯ

ಮಲ್ಲೇಶಪ್ಪ : ಇದೆಂಥ ಸಂಗೀತ ? ಏನಿದರ ಇಂಗಿತ ? ಜಾಲಗಾರನ ಬಲೆಗೆ ಸಿಕ್ಕ ಮೀನಿ ನಂತಾಯಿತಲ್ಲ ಮನಸ್ಸು, ಓಂ ನಮಃ ಶಿವಾಯ ಎಂಬ ಬಲೆ ನನ್ನ ಮೈಮನಕೆ ಸುತ್ತಿಕೊಂಡಿದೆ.

ಜಾಡಾಪರಿಯು ಹುಳುವನ್ನು ತಂದು ಸಂಸ್ಕಾರ ಕೊಡುವ ತೆರೆದಿ ಈ ಓಂಕಾರನಾದ ಕೈಬೀಸಿ ಕರೆಯುತಿದೆ. ಬರುವೆ ಓ ನಾದವೇ ಬರುವೆ ನಿನ್ನ ಸಂಸ್ಕಾರ ಸ್ವೀಕರಿಸಲು.

ಸಿದ್ಧರಾಮ : ಓಂ ನಮಃ ಶಿವಾಯ, ಓಂ ನಮಃ ಶಿವಾಯ, ಓಂ ನಮಃ ಶಿವಾಯ *(ರಂಗದಲ್ಲಿ ಕತ್ತಲೆಯಾಗಿ ಹುತ್ತಿನಲ್ಲಿ ಜಡಿಬೆಳೆದ ಮನುಷ್ಯಾ ಕೃತಿ ಕಾಣವದು.)*

ಮಲ್ಲೇಶಪ್ಪ : ಎಡೆಯೂರ ಸಿಧಲಿಂಗೇಶ್ವರರ ಪ್ರತಿರೂಪ ಈ ಪರಶಿವ ಸಾಕಾರ ಲೋಕಾನು ಭವಕೊಂದು ಜೀವಸ್ವ ಸಂಸ್ಕಾರ ಬೇಕುಬೇಡದ ಹಗೊಳಿಪ ಪರಿಷ್ಕಾರ, ಅಕುಲತೆ ಬಿಟ್ಟು ಬೆತ್ತಕೆ ಶಾಂತಿಯಾಧಾರ, ಇದುವೇ ಏಕಾತ್ಮ ವ್ಯವಹಾರ ನಿರ್ಗುಣ ನಿರಾಕಾರ.

ಸಿದ್ದಪ್ಪ ಮಹಾರಾಜ : ಸಿದ್ಧರಾಮ ಸಾಕಿನ್ನು ಈ ಅನುಷ್ಠಾನ, ಲೋಕಹಿತ ಸಾಧನೆಗೆ ಮೀಸಲಿರಸು ನಿನ್ನ ಮೈಮನ

ದೇವಿ : ನಿಜ! ಕಂದಾ! ವಿಕೃತ ವಿಲಾಸ ವಿಭ್ರಮೆಗಳಿಗೆ ಮನಸೋತ ಈ ಜಗದ ಜಂಗು ಕಿತ್ತೊಗೆದು ಜಗದ ಜಂಗಮನಾಗು. ಶೋಧಿಸಿ ಸಿದ್ಧಿಗೊಳಿಸಿದ ನಿನ್ನೆದೆಯ ಪಾಕ ಪಾತ್ರೆಯಿಂದ ಪಾಯಸದ ರುಚಿ ಆಯಾಸವಿಲ್ಲದೆ ಜಗಕೆ ಹಂಚಿ ದಾಸೋಹಿಯಾಗು, ದುಷ್ಟ ಶಕ್ತಿಗಳಿಗೆ ದಮನ ಮಾಡು.

ಸಿದ್ಧಪ್ಪ ಮಹಾರಾಜ : ಸಿದ್ಧರಾಮನಾಗಿ ಈ ಜಗಕೆ ಬಂದು ಈ ಜಗದ ತೊಡಕಿನಿಂದ ಪಾರಾದೆ, ಈ ಜಗದ ಸುಗ್ಗಿ ಹಿಗ್ಗಿನಿಂದ ಮಾಡಿ ಕಮರಿ ಮಠದ ಸಿದ್ಧಪ್ಪ ಮಹಾರಾಜನಿಗರ್ಪಿಸಿ ಸಿದ್ಧಲಿಂಗೇಶನಾದೆ. ಶ್ರೀದೇವಿಯಿಂದ ಸಿದ್ಧಿ ಪಡೆದು ಶಿವಲಿಂಗೇಶನಾಗಿ ಈ ಜಗವ ಬೆಳಗು; ಆ ಬೆಳಗಿನೊಳಗೇಕಾಗು.

ದೇವಿ : ನೀ ನಡೆವ ಹಾದಿ ಕಾರ್ಯಕ್ಷೇತ್ರ, ಮಲಗಿದ ಸ್ಥಳ ಮುಕ್ತಿ ಕ್ಷೇತ್ರ. ನೀನಿಂತ ನೆಲ ಸುಕ್ಷೇತ್ರ ಶಿವಲಿಂಗೇಶನಾಗಿ ಶಿವಬೆಳಗಿನೊಳಗೇಕಾಗಿ ಈ ಬಾಳ ಬೆಳಗು; ನುಡಿದಿದ್ದೆ! ಸಿದ್ಧಿ ಮುಟ್ಟಿದ್ದೇ ಪರುಷ ನೋಡಿದ್ದೇ ಶಿವಲಿಂಗ ತಥಾಸ್ತು *(ಮಾಯ)*

ಸಿದ್ದಪ್ಪ ಮಹಾರಾಜ : ಗಿರಿ ಶೃಂಗದಂತೆ ಅಚಲನಾಗು, ಬಿಸಿಲು ಮಳೆಗಾಳಿಗೆ ಬೆನ್ನುಕೊಟ್ಟ ಮರಗಳಂತೆ ನಿಶ್ಚಿಂತನಾಗು ಮಾರ್ದನಿ ಗೊಡುವ ಪ್ರಕೃರ್ತಿಯಂತೆ ಮೌನಿಯಾಗು, ಸಾಗರದಂತೆ

ಶಾಂತನಾಗು, ಭೋರಿಡುವ ಬಿರುಗಾಳಿಗೆ ತಲ್ಲಣಿಸುವ ಗಿಡ ಮರಗಳಂತೆ ನಿನ್ನೆದೆಯಾಳದಿಂದ ಹೊರ ಬರುವ ತೂರ್ಯಧ್ವನಿಗೆ ಜಗವು ಕಂಪಿಸುವುದು ಆಗ. ಅಣಿಮಾಡಿದಿ ಅಷ್ಟ ಸಿದ್ಧಿಗಳು ನಿನ್ನ ಸೇವೆಗೈಯುವವು ಆಗ.

(ಹುತ್ತಿನಿಂದ ಹೊರ ಬರುತ್ತ)

ಶಿವಲಿಂಗೇಶ : ತಂದೆ! ಎನ್ನ ಭವದ ಹಂಗು ಹರಿದ ಲಚ್ಚ್ಯಾಣಧೀಶ. ಆವ ಋಣಕೋಸುಗವೋ ? ಆರ ಹಿತಕೋಸುಗವೋ ? ಅದಾವ ಕಾರಣಕೋ ಈ ಜಗಕೆ ಬಂದು, ಅನಂತ ಪರಿತಾಪಗಳ ದವಡೆಯಲ್ಲಿ ಸಿಕ್ಕು ಜರ್ಝಿತನಾಗಿ ಜೀವನದ ಸೊದೆಯುಂಡೆ.

ಸಿದ್ದಪ್ಪ ಮಹಾರಾಜ : ಗಗನ ಬಿಸಿಗವಸಾಗಿ, ಕೆರೆಗಳಾವಿಗೆಯಾಗಿ, ಜಗದುಸಿರೆ ಹೊಗೆಯಾಗಿ, ಧಗ ಧಗಿಸುವ ಕಾಲ ಮುಂಬರುವ ದಿನಗಳಲ್ಲಿ ಬರುವವು. ಅವುಗಳನ್ನ ಕಾಲ್ಕಸವಾಗಿಸಿಕೊಳ್ಳಬೇಕು ಶಿವಲಿಂಗೇಶ.

ಶಿವಲಿಂಗೇಶ : ಆ, ಧೀರ ಪಥವನರುಹತ್ತ ನಿನ್ನ ವರದಹಸ್ತ ನನ್ನ ಮಸ್ತಕದ ಮೇಲಿರಲಿ ಸದಾ.

ಸಿದ್ಧಪ್ಪ ಮಹಾರಾಜ : ವಿಶ್ವಾಮಿತ್ರನು ಅದೆಷ್ಟು ಸಲ ತಪಗೈದನೋ ? ಅದೆಷ್ಟು ಸಲ ಅವಮಾನ ಪಟ್ಟನೋ ? ಆದರೂ ಆತ ಬ್ರಹ್ಮರ್ಷಿ ಪದವಿಗೇರಿದ, ಪ್ರತಿ ಬ್ರಹ್ಮನೆನಿಸಿಕೊಂಡ, ಈ ಜೀವನವೊಂದು ಸತತ ಕೃಷಿ ಹೋಗು, ಜಗ ಸಂಚರಿಸು ಜಗದೊಳೇಕಾಗು, ಜಗದಿಂದ ಹೊರಗಿರು ತಥಾಸ್ತು.

ಶಿವಲಿಂಗೇಶ : *(ನಮಸ್ಕರಿಸಿ)* ರಣ ಕಂಕಣವ ಕಟ್ಟಿಕೊಂಡು ಕಾದಾಡುವ ವೀರಯೋಧನ ತೆರದಿ, ನನಗಿಂದು ಶರಣ ಕಂಕಣವನೇ ಕಟ್ಟಿ ಶಿವರತಿಯಲಿ ಬೆರೆಯಲ್ಕೆ ಅವಿರತ ಹೋರಾಟ ಗೈಯಲು ಆಶೀರ್ವದಿಸಿದ ಕಮರಿಮಠದ ಚರಯೋಗಿ, ಚರ ಸಾಮ್ರಾಜ್ಯದ ಸಿದ್ಧ ಶಿವಯೋಗಿ ಬರುವೆ.

ಸಿದ್ಧಪ್ಪ ಮಹಾರಾಜ : ಹೊರಡು, ಹೊರಗಿದ್ದು ಹೋರಾಟ ಮಾಡು, ಜಯ ನಿನ್ನ ಪಾಲಿಗೆ ಶತಃಸಿದ್ಧಿ *(ಹೋಗುವರು)*

ಮಲ್ಲೇಶಪ್ಪ : ಕಾಲ ಪಕ್ವವಾದಾಗ ಫಲವು ತಂತಾನೆ ದೊರಕುವದು ಎನ್ನೋದಕ್ಕೆ ಇಂದಿನ ಈ ಶಿವ ಸಮಯವೇ ಸಾಕ್ಷಿ ತಂದೆ. ಶಿವಲಿಂಗೇಶ ಯಾವ ಬಯಕೆ ಭೂತವಾಗಿ ಕಾಡುತ್ತಿತ್ತೋ? ಆ ಬಯಕೆಯ ಭಾಗ್ಯ ನನಗಿಂದು ದೊರಕಿತು ತಂದೆ *(ನಮಸ್ಕರಿಸುವನು)*

ಶಿವಲಿಂಗೇಶ : (ಹುಚ್ಚು ನಗೆ) ಅವಿರಳ ಪರಂಜ್ಯೋತಿಂಯು ಪ್ರಭಾವಲಯದಲ್ಲಿ ಮಿಂದು ಮಡಿಯಾದೆ, ತುರಿ ಕಜ್ಜಿಯಿಂದ ಕಡೆಗಾದೆ, ಅಂಟು ಜಾಡ್ಯದ ನಂಟಿನಿಂದ ಸಿಡಿದು ಬಂದೆ, ಸುತ್ತಿ ಸುಳಿದು ಬರುವ ಮಮತೆಯ ಬಂಧನದಿಂದ ಪಾರಾಗಿ ನಿಂತೆ, ಲಚ್ಯಾಣದ ಸಿದ್ಧಶಿವಯೋಗಿಯ ಕೃಪೆಯಿಂದ

ಮಲ್ಲೇಶಪ್ಪ : ತಂದೆ! ನಿನಗಾಗಿ ನಾನೋಡಿ ಬಂದೆ.

ಶಿವಲಿಂಗೇಶ : ಯಾಕೆ ಬಂದೆ ? ಏನು ತಂದೆ ? ಅದೇ ನೊಂದು ಬೆಂದ ಬಸವಳಿದು ಬೇಸರಾದ ಬಿಸಿಲ್ಗುದುರೆಯ ಬೆನ್ನಹತ್ತಿ ಬಂದೆ ಸಂದ ಶಿವ ಸಮಯಕ್ಕ ವ್ಯರ್ಥವಾಗಿರಿಸಿ. ಆಶಾಮಿಷದ ಸುಳಿಯೊಳಗ ಸಿಕ್ಕು ನರಳಾಡುವ ಸಂದೇಶ ತಂದೆ *(ನಗು)* ನಿಜ ! ಅಂಥಾಹರಿಹರ ಬ್ರಹ್ಮಾದಿಗಳೇ ಭವಗೆಟ್ಟಿರುವಾಗ ನಿನ್ನಂಥವರು ಪಾಡೇನು ? ಆದರೂ ಆ ಪಾಪಕೂಪದಿಂದ ಎದ್ದ ಲಹೊರ ಬಂದವನೇ ಶರಣ. ಅರಳ ಗುಂಡಿಗೆಯ ಶರಣ ಬಸಪ್ಪ ಎಳಂದೂರಿನ ಅರಸ ನಿಜಗುಣಾರಾಧ್ಯರು ಹ್ಯಾಂಗ ಆ ಸುಳಿಯಿಂದ ಸಿಡಿದು ಪಶ್ಚಿಮ ಗಿರಿ ಏರಿದರೊ ? ಹಂಗ ನಾವು ಪ್ರಯತ್ನ ಮಾಡ್ಕೋಬೇಕು. "ಹುಟ್ಟುವಾಗ ಬೆತ್ತಲೆ, ಹೋಗುವಾಗ ಬೆತ್ತಲೆ" ನಡುವ ಈ ಬಟ್ಟೆ ವೇಶ್ಯಾ ಯಾಕ್ಲೆ? ನಿನ್ನ ಚಟ್ಟಕ್ಕೇರಿಸಿ ಅಗಸಿ ಹೊರಗ ತರುವ ಮೊದಲ ಬೆತ್ತಲಾಗು *(ನಗು)* ಬೆತ್ತಲಾಗು.

ಮಲ್ಲೇಶಪ್ಪ : ತಂದೆ ಶಿವಲಿಂಗೇಶ ! ಈ ಭವದ ಕತ್ತಲೆಯ ಕರಾಳವನ್ನು ಕತ್ತರಿಸಲು ನಿನ್ನೆಡೆಗೆ ಬಂದಿರುವೆ.

ಶಿವಲಿಂಗೇಶ : ಮಗನಾ ! ತಿಜ್ಯೋರ‍್ಯಾಗ ಒಟ್ಟಿದ ನೋಟಿನ ಕಟ್ಟಿನ ಆಶಾ ಕಡಿದೊಗೆದಾಗ ಆವರಿಸಿದ ಕರಾಳ ಕತ್ತಲೆ ಹರಿದು ಹೋಗ್ತಾದ. ಸುತ್ತೂರಿಗಿ ಸಾಲಾಕೊಟ್ಟ ಬರಸ್ಕೊಂಡ ಪ್ರಾಮಸರಿ ನೋಟು ಸುಟ್ಟಾಗ ಹೊರಟ ಹೋಗ್ತಾದ ಆವರಿಸಿದ ಕರಾಳ ಕತ್ತಲೆ. ಹೆಂಡ್ರು ಮಕ್ಕಳು, ಬಂಧು-ಬಳಗ ತೊರಿದ ನಿಂತಾಗ ಹರದ ಹೋಗ್ತಾದ ಕರಾಳ ಕತ್ತಲೆ....

ಮಲ್ಲೇಶಪ್ಪ : ಎಲ್ಲವೂ ಹರಿದೊಗೆದು ಬಂದಿರುವೆ ತಂದೆ

ಶಿವಲಿಂಗೇಶ : ಇನ್ನು ಬಿಟ್ಟಿಲ್ಲಾ ಹೋಗು ಮಗನ, ನೋಟಿನ ಕಟ್ಟಿಗಿ ಉರಿ ಹಚ್ಚಿ ಈ ನಿನ ಗಡಿಗಿ ಸುಟಗೊಂಡು ಬಾ ಅಂಬಲಿ ಕಂಬಳಿ ಆಸ್ತಿ ಮಿಕ್ಕಿದ್ದೆಲ್ಲ ಜಾಸ್ತಿ

ಮಲ್ಲೇಶಪ್ಪ : ಆಗಲಿ ತಂದೆ ! ಸುಟ್ಟು ಸುರಮಂಡ್ಲ ಮಾಡಿದ ಮ್ಯಾಲ ನಿನ ದರಶನ ಆಗ್ತೀನಿ

ಶಿವಲಿಂಗೇಶ : ಹೋಗು!

ಮಲ್ಲೇಶಪ್ಪ : ಎಲ್ಲಿಗೆ ಬರಲಿ ನಿಮ್ಮ ದರುಶನಕ್ಕೆ

ಶಿವಲಿಂಗೇಶ : ನೀನ್ಯಾಕ ಬರತೀಯಲೇ ನಾನೇ ಬರತೀನಿ ನೀನಿದ್ದಲ್ಲಿಗಿ. ಆದರ ನಿನಗ ಮೊದಲ ಶುದ್ಧಿ ಕರಣ ಪ್ರಸಾದ ನೀಡ್ತೀನಿ; ಶರಣ ನನ್ನಾಗಿ ಮಾಡ್ತೀನಿ. ಪ್ರಪಂಚದ ರಣದೊಳಗ ಹೋರಾಡಿ ಗೆದ್ದ ಬಂದವನೇ ಶರಣ, *(ಯೋಚಿಸಿ)* ಕಲಬುರ್ಗಿ ಅದೊಂದು ಕೂಡಲ ಸಂಗಮ, ಶರಣರ ಸಮ್ಮಿಲನದ ಮಹಾ ಸಂಗಮ, ಸೂಫಿ ಸಂತ ಹಜರತ್ ಖಾಜಾ ಬಂದೇ ನವಾಜರು, ಶರಣ ಬಸವೇಶ್ವರರು, ರಾಣೋಜಿ ಪೀರರು ವಾಸಗೈದ ಪುಣ್ಯ ಸ್ಥಳ ಅಲ್ಲೆ ನಾನಿರತೀನಿ ಮೈ ಇರುತನ ಮಲ ಇರತಾದ, ಮನಸಿರುತನ ಕೊಳಿ ಇರತಾದ ಎಲ್ಲಾ ತೊಳಕೊಂಡ ಉಳದ ಹೋಗಾಕ ಇಲ್ಲಿಗಿ ಬಾ.

ಮಲ್ಲೇಶಪ್ಪ : ಆಗಲಿ *(ಹೋಗುವನು)* ಅಂಬಲಿ ಕಂಬಳಿ ಆಸ್ತಿ, ಮಿಕ್ಕಿದ್ದೆಲ್ಲಾ ಜಾಸ್ತಿ

ಲೈಟ್ ಆಫ್

ಪ್ರವೇಶ – ೧೭

ದೃಶ್ಯ ರಸ್ತಾ

ಸುಂದ್ರ್ಯಾ : ಏಸೂರ ಕಣಾ ತಿರಗಿದ್ರು ಒಂದ ತಾಸ ಬುಟ್ಟಿ ತುಂಬಲಿಲ್ಲಾ, ಬಾರಾ ಮೈನಾ ಇವರ ಸೋಸಾಟ ಮಾಡಬೇಕು. ಹಡದರ, ಸತ್ತರ, ಮೈನೆರದರ ಹೂವಾ ಕಟ್ಟಿ ಕೊಡಬೇಕು. ಹೂವು ಕಟ್ಟಿ ಕೊಡದಿದ್ದರ ಲೇ ಮಗನ ಹೂಗಾರ ಈ ಊರಾಗಿದ್ದ ಜೀವನಾ ಸಾಗಿಸಿ ಏನೊ ಅಂತ ಅಂಜ್ಕಿ ಹಾಕ್ತಾರ. ಹಿಂಗಾದ್ರ ಆಯಿಗಾರ್ರು ಹ್ಯಾಂಗ ಬದಕಬೇಕೂ ಅಂತೀನಿ. ಹಿಂದ್ಕಿನವರು

ಕಣಕ ಹ್ವಾದ್ರ ಆಯಿಗಾರ್ರಿಗಿ ಉಣಿಸಿ ತಿನಿಸಿ ಎರಡೆರಡು ತಾಸ ಪುಟ್ಟಿ ಜ್ವಾಳಾ ಕೊಟ್ಟ ಕಳಸ್ತಿದ್ರು ಹತ್ತಿಹಾಕಾಕ ಹ್ವಾದ್ರ ಒಂದ್ಹೊರಿ ತೆನಿಗಣ್ಕೆ ಕಟ್ಟಿ ಕೊಡ್ತಿದ್ರು ಎಂಥಾ ಕಾಲ ಬಂತು. ಎಂಥಾ ಕಾಲ ಹೋಯ್ತು ವರ್ಷಕ್ಕ ಹತ್ತಿಪ್ಪತ್ತ ಚೀಲ ಜ್ವಾಳದ ರಾಶಿ ಮಾಡ್ತಿದ್ಯಾ ಮಾಲಿ ಬೇಕೇನ್ರವಾ ಮಾಲಿ. ಶಾವಂತಿಗಿ, ಜಾಜಿ ಮಲ್ಲಿಗಿ ಗುಲಾಬಿ ಹೂ ಕಲಬುರ್ಗಿ ಸಂತೀಗಿ ಹೋಗಿ ಮಾರಿಕೊಂಡು ಬರತೀನಿ.

ಚಂದವ್ವ : ಎಲಿ ಬೇಕೇನ್ರವಾ... ಎಲಿ ವೀಳೇದೆಲಿ.... ನಾಶಿ, ತಂಬಾಕು

ಸುಂದ್ರ್ಯಾ : ಬಂತಲ್ಲ ನಮ್ಮಾಸ್ವಾಮಿ, ಹೂವಾ ಬೇಕೇನಾ ಹೂವಾ ತುರುಬ್ನ್ಯಾಗಿಡೋ ಶಾವಂತಿಗಿ ಮಾಲಿ ಘಮ ಘಮಾ ಅಂತಾವ ತಾಜಾ ಹುವಾ ಅದಾವು ಹೂವು ಬೇಕೇನ ಚಂದವ್ವ....

ಚಂದವ್ವ : ನನ್ನ ಯಾಪಾರ ಆಗೂವಲ್ದು ವುತ್ತೆಲ್ಲಿ ನಿನ್ನ ಹೂವಾತೊಗೊಂಡು ನನ್ನ ತುರಬ್ನ್ಯಾಗಿಟಗೊಂಡು ತಿರಗಾಡ್ಲಿ. ನೀನರ ಮಾಡ್ತೀಯೇನ ನನ್ನಯಾಪಾರ

ಸುಂದ್ರ್ಯಾ : ಶಿವ ಶಿವ ಪರಮಾತ್ಮ ನಿನ್ನ ಯಾಪಾರ ಮಾಡಿ ನಾನೆಲ್ಲಿಗಿ ಹೋಗಂದಿ

ಚಂದವ್ವ : ನನ್ನ ಯಾಪಾರ ಅಲ್ಲ ಹೂಗಾರ, ನನ್ನ ಎಲಿ ಯಾಪಾರ ನೋಡು ಹ್ಯಾಂಗಾವ ಎಲಿ, ಎಳಿ ರೇಷ್ಮೆ ರೇಷ್ಮಿ ಆಗ್ಯಾವ. ಜರ ಸುಣ್ಣ ಸವರಿ, ಕಾಚಾ ಹಾಕೊಂಡು ಬಾಯಾಗ ಹಾಕು. ನೋಡು ನೋಡುದ್ರಾಗ ಬಾಯಿ ಕೆಂಪಗ ಆಗ್ತೈತಿ ಅದಿರ್ಲಿ ನನ್ನ ಯಾಪಾರ ಮಾಡುವಷ್ಟು ತಾಕತ್ತು ಐತ್ಯಾ ನಿನ್ನ ಹತ್ತರ.

ಸುಂದ್ರ್ಯಾ : ನಿಂದೊಬ್ಬಾಕಿದ್ಯಾಕ ಹತ್ತ ಮಂದಿ ಯಾಪಾರ ಮಾಡುವಷ್ಟು ತಾಕತ್ತ ಐತಿ ಆದರ ಊರಿಗಿ ಒಲು ಆಗಿ ತಿರಗಬಾರ್ದಂತ. ಹೂಗಾರ ಚಂದ್ರಾಮನ ಮಗ ಸುಂದ್ರ್ಯಾ. ಈ ಹೂ ಮಾರು ನೆವನ್ಯಾಗ ಹುಡಿಗೇರಿಗೆ ಪ್ರೀತಿ ಮಾಡ್ತನಂತ ಊರ ತುಂಬಾ ಪುಕಾರಾಗೇತಿ. ನಮ್ಮ ಯಾಪಾರ ಇರುದ ಅಲ್ಲಿ ಮದುಕೇರ ಹತ್ತರ ಒಯ್ದ್ರ ಹೂವಿನ ಯಾಪಾರ ಆದಿತ್ಯ? ಅವ್ರು ಹ್ಯಾಂಗ ಮುದುಡಿ ಮುದ್ದಿ ಆಗ್ಯಾರ ಹಂಗ ನನ್ನ ಹೂವಾನು ಬಾಡಿ ಮುದ್ದಿ ಆಗ್ತಾವ ಹಂಗಂತ ಹೂವು ಬಾಡು ಪೂರ್ವಾನೆ ಹುಡಿಗೇರ ಹತ್ತರ ಹೋಗಿ ನಿಂತರ ಸಾಕು ಹತ್ತ ನಿಮಿಷದಾಗ ನನ್ನ ಪುಟ್ಟಿ ಖಾಲಿ ಆಗ್ತಾದ ಹೂವಾ ಇಟಗೊಂಡ ತುರಬಗೋಳ ಘಮಾಸ್ತವ ಇಡು ಅಂದೇನು ?

ಚಂದವ್ವ : ಏನು

ಸುಂದ್ರ್ಯಾ : ಹೂವಾ

ಚಂದವ್ವ : ಆಯ್ತು! ಮೊಳ ಅಂತ ಹಾಕಿ ಕೊಡೂದ್ರಾಗ ಅದು ಗೇಣ ಆಗರಿತಾದ ಬಿಡನಿನ

ಸುಂದ್ರ್ಯಾ : ಆ ಗೇಣ ಇಟಗೊಳ್ಳದ್ರಾಗ ಕುರಿಕ್ವಾಣಾ ಬಿದ್ದ ಹೋಗ್ತಾವ ಇನ್ನ ಮೊಳ ಹೂವಿನ ಮಾಲಿ ಕಟಗೊಂಡು ತಿರುಗೂದಂದ್ರ ಸುಮ್ನಲ್ಲರಿ ಸುಮ್ನಲ್ಲ....

ಚಂದವ್ವ : ಯಾಕ ಅವೇನ ಒಲೂ ಆಗ್ತಾವ

ಸುಂದ್ರ್ಯಾ : ಹುಡುಗರ ಕಣ್ಣಾಗ ಒಲವು ಮೂಡಿ, ತಲಿತುಂಬಾ ಮಲ್ಲಿಗಿ ಮಾಲಿ ಮುಡಿದ ಈ ಮಂಗಲೀಗಿ ಎಂದ ಗಲ್ಲಾ ಕಡದೇನು ಅನ್ನು ತವಕ ಹೆಚ್ಚಾಗಿ ಹುಚ್ಚನಾಯಿ ಹಂಗ ತಿರಗ್ತಾವಲ್ಲ. ನಾಲ್ಕು ಮಂದಿ ಕಣ್ಣಾಗ ಅವು ಒಲು ಆಗ್ತಾವ.

ಚಂದವ್ವ : ಬಣ್ಣಗಿತ್ತ್ಯಾ! ನೀ ಏನ್ ಹೆಂಗ್ಸಾದ್ರ ಒಬ್ಬಗಿರ್ತಿದ್ದಿಲ್ಲ. ಮನ್ಯಾಗಿದ್ದ ಹಬ್ಬಾ ಮಾಡ್ತಿದ್ದಿಲ್ಲ ಎಷ್ಟರ ಬಣ್ಣಮಾಡಿ ಹೇಳ್ತೀದಿ.

ಸುಂದ್ರ್ಯಾ : ಎಷ್ಟು ಕೊಡಂದ್ರಿ ಮೊಳ ಕೊಡಂದ್ರ್ಯಾ? ಎರಡ ಮೊಳ ಕೊಡು ಅಂದ್ರ್ಯಾ? ಏನ್

ಚಂದವ್ವ : ಇಲ್ಲಾ; ಹತ್ತ ಮೊಳಾ ಕೊಟ್ಟ ಬಿಡು ತಲಿ ತುಂಬಿ ಹೆಚ್ಚಾಗಿದ್ದುಕೊಳ್ಳಾಗ ಹಾಕ್ಕೊಂಡು ಅಡ್ಡಾಡ್ರೇನಿ.

ಸುಂದ್ರ್ಯಾ : ಆಗ ನೋಡ್ರಿ; ಊರ ತುಂಬಾ ಘಮ ಘಮ ಇದ್ದವರು, ಬಿದ್ದವರು ನಿಮ್ಮ ಪುಟ್ಟಿ ಸುತ್ತ ಹರ್ದ ನಾನೀ ಅಂತ ತಗೊಂಡು ಹೋಗ್ತಾರೆ. ಮಾಲಿ ತಗೋಳ್ರಿ ಇಟಗೊಳ್ಳಿರಿ ಯಾವಾಗಲೂ ಸಂದಿ ಸಂದಿ ತಿರಗವ್ರು. ಚಂದ ಕಾಣಸ್ತಿರಬೇಕ್ರಿ ಕೊಡು ಅಂದ್ರ್ಯಾ ಶಾವಂತಿಗಿ, ಇರುವಂತಿಗಿ ಹೂ.

ಚಂದವ್ವ : ಎಷ್ಟರ ಮಾತ ಕಲ್ತೀದ್ಯಾ ಮಾರಾಯ

ಸುಂದ್ರ್ಯಾ : ಹತ್ತ ಮಾತ ಆಡುದ್ರಾಗ ಒಂದ ಪುಟ್ಟಿ ಹೂವಿನ ಮಾಲಿ ಮಾತಾಡ್ಕೊಂತ ಮಾರ್ತೀವ್ರಿ ಇದು ಯಾಪಾರ ಮಾಡವರ ಲಕ್ಷಣ, ಇಟಗೊಂತೀರ್ಯಾ ತುರಬ್ಯಾಗ ಹೂವಿನ ಮಾಲಿ

ಚಂದವ್ವ : ಮೊದ್ಲ ನೀನನ್ನ ಎಲಿ ಯಾಪಾರ ಮಾಡು ಆ ನಂತರ ನಿನ್ನ ಹೂವಿನ ಮಾಲಿ ಯಾಪಾರ ನಾ ಮಾಡ್ತೇನಿ

ಸುಂದ್ರ್ಯಾ : ಹೌದ್ರ್ಯಾ ಮತ್ತ ನೀವು ? ಆಡತರಕ ಆರ ಹರದಾರಿ ನಾನಿದ್ರು ನನಗಿಂತ ನೀವು ಮೂರ ಹರದಾರಿ ಮ್ಯಾಲದೀರಿ.

ಹಾಡು

ಗಂಡ : ಎಲೆ ಎಲಿಗಾರ್ತಿ! ಬಾಯಿ ಕೆಂಪಗ ಮಾಡಿತಿ
ತಲಿ ಮ್ಯಾಲ ಪುಟ್ಟಿ ಹೊತ್ತು । ಓಣಿ ಓಣಿ ತಿರಗತಿ
ಕಣ್ಣಿ ಹೊಡದು ಸನ್ನೆ ಮಾಡಿ । ನನ್ನ ತಲೆ ಕೆಡಸ್ತಿ ॥

ಹೆಂಡತಿ : ಯಾಕೋ ಹೂಗಾರ । ನೀನೆ ಸರದಾರ
ಹೂವೀಗಿ ಉರುಳ್ಹಾಕಿ । ನೀ ಮಾಡ್ತಿ ಯಾಪಾರ
ಮಾತಿನಿಂದ ಮರಳಮಾಡಿ । ನೀನಾಗತಿ ಮೋಜುಗಾರ ॥

ಗಂಡ : ಕಾಸಿದ್ರ ಕೈಲಾಸ । ನೀನಿದ್ರ ಬಲು ಸೊಗಸ
ಜೋಡಿ ಹಕ್ಕಿ ಆಡಿದಂಗ । ಆಡೋಣ ಬಾ ಸರಸ ॥

ಹೆಂಡತಿ : ತೆನಿಯ ಮ್ಯಾಲಿನ ಹಕ್ಕಿಹಂಗ । ನೋಡ ಬ್ಯಾಡ ನನ್ನಂಗ
ಕಾಳತಿಂದು ಹಾರಬ್ಯಾಡ । ಚಲುವ ಚಂದ್ರ ಚೆನ್ನಿಂಗ ॥
(ಈರ್ವರು ಹಾಡುತ್ತ ಹೋಗುವರು)

ಪ್ರವೇಶ – ೧೮

ದೃಶ್ಯ ಮನೆ

(ಮಂಚದ ಮೇಲೆ ರಾಯಗುಂಡಪ್ಪಗೌಡ ಅನಾರೋಗ್ಯದಿಂದ ಮಲಗಿರುವರು)

ಹಾಡು

ಇಟಗಿಯ ಪುರಧೀಶ । ಮೊರೆ ಕೇಳೋಜಗದೀಶ ।
ಸೆರಗೊಡ್ಡಿ ನಿಂತಿರುವೇ। ಕಾಪಾಡು ಕಲ್ಮೇಶ ॥
ಸಿರಿ, ಸುತ, ಸಂಪತ್ತು । ಏನೇನು ಬೇಡೆನು ।
ಹೊಲ ಮನೆ ವೈಭೋಗ । ನೀಡೆಂದು ಕಾಡೆನು ।
ನೆಂಟರಿಷ್ಟರ ಕಷ್ಟ । ಕಳೆಯಂದು ಕೇಳೆನು ।
ಆರೋಗ್ಯ ಕಾಪಾಡು । ಪತಿಗೆಂದು ಬೇಡುವೆನು ॥

ಚಂದಮ್ಮಗೌಡತಿ : ತಂದೆ! ಇಟಗಿಯ ಕಲ್ಮೇಶ್ವರ! ನನ್ನ ಮಾಂಗಲ್ಯ ಕಾಪಾಡು.ನಾಡಿನ ವೈದ್ಯರೆಲ್ಲರೂ ಬಂದು ಔಷಧಿ ಕೊಟ್ಟರೂ ಗುಣಮುಖವಾಗದೆ ಮತ್ತಷ್ಟ ರೋಗ

ಉಲ್ಬಣಗೊಳ್ಳತೊಡಗಿದೆ. ಅದಾವ ಜನ್ಮದ ಕರ್ಮವೋ ? ಅದಾವ ಸೇಡಿನ ಶಾಪವೋ ಈ ಜನ್ಮದಲಿ ನನ್ನ ಪತಿಗೆ ಕಾಡ ತೊಡಗಿದೆ. ಕಲಬುರ್ಗಿ ಸೊಲ್ಲಾಪುರ, ಮಿರಜ, ಮುಂತಾದ ಆಸ್ಪತ್ರೆಗಳಿಗೂ ಹೋಗಿ ಬಂದರೂ ವಾಸಿಯಾಗಿಲ್ಲ. ಅಂದಾಗ ಎಲ್ಲಿಗೆ ಹೋಗಲಿ ? ಯಾರ ನೆರವು ಬೇಡಲಿ? ಕಣ್ಣಿಗೆ ಕಂಡ ಕಲ್ಲು ದೇವರಗಳಿಗೆ ಕೈ ಮುಗಿದೆ, ಹರಕೆ ಹೊತ್ತ ಮುಡಿಪು ಕಟ್ಟಿಟ್ಟಿ ಎಲ್ಲವೂ ನಿಷ್ಫಲವಾದವು ಮಂತ್ರಗಾರರಿಗೆ ಯಂತ್ರಗಾರರಿಗೆ, ಜೋತಿಷಿಗಳಿಗೆ ಕೇಳಿದರೆ ಯೋಗಿಯ ಹಸ್ತ ಸ್ಪರ್ಶದಿಂದ ಮಾತ್ರ ಈ ರೋಗ ಪರಿಹಾರವಾಗುತಿದೆ ಅಂತ ಹೇಳ್ತಾರೆ ಅಂಥಾ ಯೋಗಿಗಳು ಈ ನಾಡಿನಲ್ಲಿ ಈ ನಿಟ್ಟಿನಲ್ಲಿಯಂತೂ ಇಲ್ಲಾವೇ ಇಲ್ಲ. ಎಲ್ಲಿ ಹುಡುಕಲಿ, ಅದಾವ ನಾಡಿಗೆ ಹೋಗಲಿ ನನಗೆ ನನ್ನ ಪತಿಯ ಪ್ರಾಣಬೇಕು ನನ್ನ ಮಾಂಗಲ್ಯಬೇಕು.

ಚನ್ನಬಸಯ್ಯಾ : ಹುಡುಕುವ ಹವ್ಯಾಸಕ್ಕೆ ಹೋಗದಿರು ತಾಯಿ ! ತಾನಾಗಿಯೇ ಬರುತ್ತಾನೆ ಆ ಶಿವಯೋಗಿ

ಚಂದಮ್ಮಗೌಡತಿ : ಅದು ಹೇಗೆ ಬರುತ್ತಾರೆ । ಚನ್ನ ಬಸಯ್ಯಾ ಸ್ವಾಮಿಗಳೇ

ಚನ್ನಬಸಯ್ಯಾ : ಯಾವಾಗ ಯೋಗಿಯ ಹಸ್ತದಿಂದ ರೋಗ ಪರಿಹಾರವಾಗುತ್ತದೆ ಎಂದ ಬಳಿಕ, ಆ ರೋಗ ಪರಿಹಾರ ಮಾಡತಕ್ಕಂಥಯೋಗಿ ಬರಲಿಕ್ಕೇಬೇಕು. ಇದು ಶಾಶ್ವತ ಯಾವಾಗ ಈ ಪ್ರಶ್ನೆ ಉದ್ಭವವಾಗಿದೆ ಅಂದ ಮೇಲೆ ಅದಕ್ಕೆ ಉತ್ತರ ಕೊಡಲು ಬರಲೇಬೇಕಲ್ಲ ? ಗೌಡತಿಯವರೇ.

ಚಂದಮ್ಮಗೌಡತಿ : ಆ ಕಾಲಕ್ಕಾಗಿ ಕಾಯ್ದು ಕಾಯ್ದು ಅವರ ಕಾಯ ಸವೆದು ಹೋಗಿದೆ ಗುರುಗಳೇ

ಚನ್ನಬಸಯ್ಯಾ : ಮನುಷ್ಯನಿಗೆ ಸಂಕಟವನ್ನೆದುರಿಸಲು ಮುಗುಳು ನಗೆಯ ಹೊರತು ಬೇರಾವ ಸಾಧನೆಗಳಿಲ್ಲ ತಾಯಿ. ಬಂದದ್ದು ಭೋಗಿಸಬೇಕು, ತಂದದ್ದು ತೀರಿಸಬೇಕು ಇದು ಸೃಷ್ಠಿಯ ನಿಯಮ ನಗುವೇ ಈ ಜಗ ಗೆದೆಯುವ ಸಾಧನೆ.

ಚಂದಮ್ಮಗೌಡತಿ : ಏನಾದರೇನಂತೆ ! ಗುರುಗಳೆ ೧ ಆ ಮುಗುಳ ನಗೆಗೂ ಒಂದು ಮತಿ ಇದೆ. ಇತಿ ಇದೆ ಬಾರದ ನಗೆ ತಂದುಕೊಂಡು ನಕ್ಕರೆ ಆತ್ಮಕ್ಕೆ ಶಾಂತಿ ಲಭಿಸುವದೆ ? ನೆಮ್ಮದಿ ಲಭಿಸುವದೇ ಅದ್ನು ಎಲ್ಲಿಯವರೆಗೆ ?

ಚನ್ನಬಸಯ್ಯ : ಆ ಸಮಯ ಪರಿಪಕ್ವವಾಗುವವರೆಗೂ ಏನೊಂದು ಸಾಧಿಸುವದಿಲ್ಲ ತಾಯಿ. ಸಮಯ ಪರಿವರ್ತನೆಯ ಸಂಪತ್ತು. ಸಮಯದ ಒಂದೊಂದು ಕ್ಷಣವೂ ಅತ್ಯಮೂಲ್ಯವಾದದ್ದು. ತಾಯಿ ಬರುವ ಸಮಯವನ್ನ ನಿರರ್ಥಕ ಗೊಳಿಸದಿರು ಅದಕೆ ಶಿವನಾಮದ ನಾದ ತುಂಬು. ಆ ನಾದವೇ ಓಂಕಾರಗೊಂಡು ಯೋಗಿಯ ಮನದಾಳದಲ್ಲಿಳಿದು ಇದ್ದಲ್ಲಿಗೆ ಬರಬಾರದೇಕೆ ? ಅದು ನಿಮ್ಮಂಥ ಗರತಿಯರ ಆಕ್ರಂದನಕೆ ಆ ಗಿರಿಜಾವಲಭ ಕಲ್ಮೇಶನ ಕರುಣೆ ಆಗಬಾರದೇಕೆ ?

ರಾಯಗುಂಡಪ್ಪ : *(ಎದ್ದು ಬರುತ್ತ)* ಚನ್ನಬಸಯ್ಯಾ ಸ್ವಾಮಿಗಳೇ ನನ್ನ ಮರಣದ ಬಗ್ಗೆ ಚಿಂತಿಸಬೇಕಾಗಿಲ್ಲ. ಜೀವನವೆಂಬುದರ ವಿಕೃತಿಯೇ ಮರಣ. ಮರಣವೇ ಮಹಾನವಮಿಯಂದು ಶರಣರು ಸ್ವೀಕರಿಸಿಲ್ಲವೇ ? ಆದರೆ ? ನಿತ್ಯ ಈ ನರಳಾಟ, ಗೋಳಾಟ, ಇದು ಎಂಥ ಶೆಣಸಾಟ? ಆಕೆಗಂತೂ ನಿದ್ರೆಯಿಲ್ಲ, ನೀರಡಿಕೆಯಿಲ್ಲ. ನನ್ನ ಸೇವೆಯೊಳಗೆ ಬಿದ್ದು ಸೊರಗಿ ಸಣ್ಣಾಗಿದ್ದಾಳೆ; ಬಹಳ ಬೇಸರಿಕೆಯನ್ನುಂಟು ಮಾಡಿದ್ದೇನೆ ನಾನವಳಿಗೆ.

ಚಂದಮ್ಮಗೌಡತಿ : ಹಾಗನ್ನದಿರಿ ಸ್ವಾಮಿ! ಅದು ನನ್ನ ಕರ್ತವ್ಯ. ನನ್ನ ಸ್ವಾಮಿಯ ಸೇವೆ ಶಿವ ಪೂಜೆಗೂ ಮಿಗಿಲು

ರಾಯಗುಂಡಪ್ಪ : ಎಂತಹ ಸಹನೆ ನಿನ್ನದು, ಎಂತಹ ಶಾಂತಿ ನಿನ್ನದು, ಎಲ್ಲವೂ ನಗು ನಗುತ್ತಲೇ ಸ್ವೀಕರಿಸಿದಿ ಅಳಿದ ಮನೆಯನು ಮರಳಿ ಕಟ್ಟಿ ಬಾಳು ಬೆಳಗಿದ ಆದರ್ಶ ಸತಿ ನೀನು. ಸಿರಿಯಾಶೆ, ಸುಖದಾಶೆ, ಬಂಧು ಬಳಗದಾಶೆ ತೊರೆದು ಪತಿಯ ಸದುದ್ದೇಶದಲಿ ಪಾಲ್ಗೊಂಡ ಸೃಜನ ಶೀಲೆ ನೀನು.

ಚಂದಮ್ಮಗೌಡತಿ : ಹೊಗಳದಿರಿ ಸ್ವಾಮಿ ! ಹೊಗಳದಿರಿ ದಾಸಿಯಾಗಿ ಬಂದವಳು ನಾನು

ರಾಯಗುಂಡಪ್ಪ : ಅಲ್ಲಲ್ಲ! ದಾಸಿಯಾಗಿ ಬಂದವಳಲ್ಲ ಗೌಡತಿ ಈ ಮನೆಯ ಅರಸಿ, ಒಡತಿಯಾಗಿ ಬಂದವಳು *(ಕೆಮ್ಮುವನು)*

ಚಂದಮ್ಮಗೌಡತಿ : ಬನ್ನಿ ! ಮಾತಾಡಿದರೆ ಆಯಾಸವಾಗುತ್ತದೆ ಪಲ್ಲಂಗದ ಮೇಲೆ ಮಲಗಿಕೊಳ್ಳಿ

ರಾಯಗುಂಡಪ್ಪ : ಮಲಗಿ ಮಲಗಿ ನನ್ನ ಮಗ್ಗುಲಗಳು ಮೂಲೆ ಗುಂಪಾಗಿವೆ. ಹೀಗೆಯೇ ಎಷ್ಟು ದಿವ್ಸಂತ ಮಲಗಿಕೊಳ್ಳಲಿ.

ಚನ್ನಬಸಯ್ಯಾ : ಗೌಡರೇ ! ಮೌನವೇ ಮಹಾ ಔಷಧ ! ಮಾತು ಆಡಿದಂತೆ ದೇಹ ವಿಕೃತಗೊಳ್ಳುತ್ತದೆ. ಈಗ ಸಧ್ಯ ಶಾಂತವಾಗಿ ಮಲಗಿಕೊಳ್ಳಿರಿ. ನಾನೂ ಹೋಗಿ ಬರುತ್ತೇನೆ. *(ಮಲಗಿಸುವರು)* ಬರತೀನಮ್ಮ ಗೌಡತಿ ಬರತೀನಿ ರೋಗಿ ಇದ್ದಲ್ಲಿಗೆ ಯೋಗಿ ಬರುವ ಕಾಲ ಸನ್ನಿಹಿತವಾಗದೆ ಇಟಗಿಯ ಪುಣ್ಯ ಪ್ರಭೆಯಲಿ ಮಿಂದು ಮಡಿಯಾದ ಕಲ್ಮೇಶನ ವರಕೃಪೆಯಾಗುವ ಸಮಯವನ್ನು ದೂರಿಲ್ಲ (ಹೋಗುವನು)

ಚಂದಮ್ಮಗೌಡತಿ : ಇಟಗಿಯ ಕಲ್ಲೇಶ್ವರ ಕೃಪೆಮಾಡು ನನ್ನಪ್ಪಾ ಧರೆಬಿರಿಯಲಿ, ಗಗನ ಕಳಚಲಿ, ಬಿರುಗಾಳಿ ಬೀಸಲಿ, ಮಹಾಪುರ ಹರಿಯಲಿ ಆದರೆ ಹಿಡಿದ ವೃತ ಬಿಡಲಾರೆ. ನಿನ್ನ ನಾಮ ಒಂದೇ ತಾರಕ ಮಂತ್ರ (ಲೈಟ್ ಆಫ್)

ಪ್ರವೇಶ – ೧೯

ದೃಶ್ಯ ಕೋಟ್ಟೂರ ರಸ್ತಾ

ಶ್ರೀಮಂತಪ್ಪ : ಈ ಕೊಟ್ಟೂರಿನ ಶ್ರೀಮಂತಪ್ಪ ಸಾಹುಕಾರನ ಮಾತಂದ್ರ ವೇದವಾಕ್ಯ. ನಾನಂದದ್ದೇ ಆಗಬೇಕು ಹರಿದ್ಹೋಗುವ ಹಾಂವಿಗಿ ಹಿಡಿಯಂದ್ರ ಹಿಡಿಬೇಕು ತುಂಬಿದ ಭಾವಿಯೊಳಗ ಜಿಗಿ ಅಂದ್ರ ಜಿಗಿಬೇಕು. ಯಃಕಶ್ಚಿತ ಒಬ್ಬ ಸಾಧು ನಮ್ಮೂರಿಗಿ ಬಂದು ಮಾಲಗಂಬದ ಮ್ಯಾಲ ನಿಂದ್ರೂದು. ನೀರಿನ ಮ್ಯಾಲ ಮಲಗೂದು, ಇಲ್ಲದ ಮೋಡಿಕಾರ ಆಟಾ ನಡಿಸ್ಯಾನ. ತನ್ನ ಮೈಮ್ಯಾಲ ಹರಿದಾಡೋ ಹೇನಗಳಿಗಿ ಮತ್ತ ತಲ್ಯಾಗಿ ಬಿಡ್ತಾನ ಬಚ್ಚಲ ಮೋರ್‍ಯಾಗ ಜಳಕ ಮಾಡ್ತಾನ. ಮತ್ತ ಅವೇ ನೀರ ಕುಡಿತಾನ, ಹಿಂಗಾದರ ಅವನ ಆರೋಗ್ಯ ಕೆಟ್ಟು ಊರವರಿಗೆಲ್ಲಿ ಆ ಸುಂಕು ರೋಗ ತಟ್ಟತಾದೋ, ಇವತ್ತ ಸಿಕ್ಕರ ಹಡಪದ ಕರಣಪ್ಪನ ಕರ್ಸಿ, ಗಡ್ಡ ಮೀಸಿ ತೆಗಿಸಿ ಬಿಡ್ತೀನಿ. ಅಂಥವನಿಗಿ ಸಿದ್ದಪ್ಪಗೌಡ ಅವರ ಕುಟುಂಬ ಮಲ್ಲಮ್ಮ ಗೌಡತಿ ಎಲ್ಲಿದ್ದಲ್ಲಿ ಹೋಗಿ ಕರಕೊಂಡು ಬಂದು ಉಣಸ್ತಾರ. ತಮಗ ಒಂದ್ಹೊತ್ತಿಗಿ ಗತಿಯಿಲ್ದಂಗ ಕುಂತಾರ, ಮ್ಯಾಲ ಶರಣರಿಗೆ ಸಾಧುರಿಗಿ ಕರದು ಪ್ರಸಾದ ಮಾಡಸ್ತೀವಿ ಅನ್ನೊ ಹಮ್ಮಿನೊಳಗದಾರ. ಹೋಗ್ತೀನಿ. ಇವತ್ತ ಸಿದ್ದಪ್ಪಗೌಡಗ ಭೆಟ್ಟಿ ಆಗಿ ಕೇಳೇ ಬಿಡ್ತೀನಿ ಆ ಹುಚ್ಚಗ ಊರಬಿಟ್ಟು

ಕಳಸ್ತೀರೋ ಇಲ್ಲಾ ಗಡ್ಡಾ ಮೀಸಿ ಬೋಳಿಸಿ ಸ್ವಚ್ಛವಾಗಿಟಗೊಂತೀರೂ ಅಂತ ಎಚ್ಚರಿಕೆ ಕೊಟ್ಟ ಬರತೀನಿ, ಯಾರ ಮನ್ಯಾಗಿನ ರೊಟ್ಟಿ ತಂದು ಮತ್ತೊಬ್ಬರ ಮನ್ಯಾಗಿನ ರೊಟ್ಟಿ ಪುಟ್ಟ್ಯಾಗ ಹಾಕೂದು ಅವರ ಮನಿ ರೊಟ್ಟಿ ಒಯ್ದು ಮತ್ತೊಬ್ಬರ ಮನೀಗಿ ಕೊಡೂದು ಹಿಂಗಾದ್ರ ನಮ್ಮ ಮಡಿವಂತ ಸಮಾಜದ ಗತಿ ಹ್ಯಾಂಗಂತ ? ಇನ್ನು ಕೆಲವು ದಿವಸ ಊರಾಗಿದ್ರ ಊರೆಲ್ಲಾ ಹದಗೆಡಿಸಿ ಬಿಡ್ತಾನ ತೀರ್ತು.

(ಹುಚ್ಚನಾಗಿ ಮಾಲಗಂಬದ ಮ್ಯಾಲ್ನಿಂತು)

ಶಿವಲಿಂಗೇಶ : *(ಹುಚ್ಚನಗುತ್ತ)* ವಿಷಯ ಭೋಗ ವಿರಕ್ತಿ ವಿಶ್ವ ಲೀಲಾಶಕ್ತಿ. ಆತ್ಮಕೃಷಿಗೆ ಸತತ ದೀಕ್ಷೆ, ವಿಫಲಕೆ ತಿತಿಕ್ಷೆ. ವಿಷಮದಲಿ ಸಮದೃಷ್ಟಿ. ವಿವಿದಾತ್ಮ ಸಂಸೃಷ್ಟಿ, ಕುಶಲ ಸಾಧನಗಳಿವು ಮಂಕು ಮಾನವ *(ನಗು)* ವಿಷಯಾದಿ ಭೋಗಗಳನ್ನು ತ್ಯಜಿಸಿ ವಿರಕ್ತಿಯಾಗು, ವಿಶ್ವಲೀಲಾ ಶಕ್ತಿಯಾಗು. ಆತ್ಮ ಕೃಷಿಗೆ ಸತತ ದೀಕ್ಷಾಐತಿ. ಈ ಬಿಡುವಿಲ್ಲದ ಭವದೊಳಗೆ ಬಿತ್ತಿದ ಭೂಮಿ ಬೆಳಿಲಿಲ್ಲಾಂತ ಅಸಮಾಧಾನ ಪಡಬೇಡ, ಸಹನೆ ಶಾಂತಿ, ಸಹ ಜೀವನದ ಸೀಮೆ ದಾಟು, ಸಮದೃಷ್ಟಿ ಇರಲಿ, ಸೃಜನ ಶೀಲ ಸಂಪಾದನೆಯಲಿ ಸೊಂಪಿರಲಿ ಕಂಪಿರಲಿ ಹಂಪಿ ಹೃದಯವಾಗರಲಿ ಪಂಪಾಪತಿ ನಿನ್ನ ಹೃದಯ ಗುಡಿಯಾಗ ವಾಸ ಮಾಡ್ತಾನ; *(ನಗು)* ಕೃಷಿಯಾಗು, ಋಷಿಯಾಗು ಕಾಶಿ ವಿಶ್ವನಾಥ ನಿನ್ನ ಮನದೊಳಗ ಮನಿ ಮಾಡ್ತಾನ. ಕೋಟ್ನೂರ ಬಸವ ಮಂದಿರದ ಮಾಲಗಂಬಾ ಹತ್ತಿ ಒಂಟಿಗಾಲಿನ ಮ್ಯಾಲ್ನಿಂತು ಜಪಾ ಮಾಡ್ತೀನಿ. ನನ್ನ ಮಂತ್ರ ಯಾವುದು ಗೊತ್ತಾ ? *(ನಗು)*ಲೇ ಸಿದ್ದಪ್ಪಗೌಡ ಮಲ್ಕಮ್ಮ ಗೌಡತಿ ನನಗ ಹಸಿವು ಆಗೇತಿ ರೊಟ್ಟಿ ಕೊಡ್ರೋ ನಾ ಸಾಯ್ತೀನಿ. ನಾ ಸಾಯ್ತೀನಿ. ಇದು ನನ್ನ ಮಂತ್ರ

(ಸಿದ್ದಪ್ಪಗೌಡ ಮಲ್ಕಮ್ಮ ಗೌಡತಿ ಬರುವದು)

ಸಿದ್ದಪ್ಪಗೌಡ : ಕೆಳಗಿಳಿದ ಬಾಯಪ್ಪಾ ; ಬುತ್ತಿ ತಂದೀನಿ ಬಾ

ಮಲ್ಕಮ್ಮ : ಕೆಳಗಿಳಿದ ಬಾ ಯಪ್ಪಾ ! ನಿನ ಸಲುವಾಗಿ ರೊಟ್ಟಿ ತಂದೀನಿ ಬಾ ನನ್ನಪ್ಪ

ಶಿವಲಿಂಗೇಶ : ಏನ್ ಹಸಿವು ಕಡ್ತೈತಲೇ ಇದಿ ಆಗಿ ಬೆನ್ನ ಹತ್ತೇತಿ ಹಸಿವು ಹಸಿವು ಹಸಿವು ಎಷ್ಟ ಹಾಕಿದರೂ ತೃಪ್ತೀನೆ ಇಲ್ಲ. ತಿಂದಿದ್ದೆಲ್ಲ ಕರಗಿ ಹೋಗ್ತಾದ ಮತ್ತ ಬೇಡ್ತಾದ.

ಸಿದ್ದಪ್ಪಗೌಡ : ಬಾ ಯಪ್ಪಾ ಮಾಲಗಂಬದಿಂದ ಕೆಳಗಿಳದ ಬಾ

ಮಲ್ಕಮ್ಮ : ಮೂರ ದಿವಸದಿಂದಲೂ ಮಾಲಗಂಬದ ಮ್ಯಾಲನಿಂತ ಕೂಗತೀದಿ ರೊಟ್ಟಿ ರೊಟ್ಟಿ ಅಂತ ರೊಟ್ಟಿ ನಿನ ಸಲುವಾಗಿ ಅಂತ ಹೊಟ್ಟ್ಯಾಗಿಟಗೊಂಡು ಬಂದೀನಿ ಬಾ ನನ್ನಪ್ಪ

ಶಿವಲಿಂಗೇಶ : ಆದಿಶಕ್ತಿ ಅವಿರಳ ಪರಂಜ್ಯೋತಿ *(ಕೆಳಗಿಳಿದು)* ಮಕ್ಕಳ ಮ್ಯಾಲ ತಾಯಿ ಪ್ರೀತಿ ಎಷ್ಟೈತಿ ಅನ್ನೋದು ನೀನಿಂದು ಜಗತ್ತಿಗಿ ತೋರಿಸಿ ಕೊಟ್ಟಿ. ನೀವು ಮೂರದಿವಸದಿಂದ ಉಪವಾಸ ವಿದ್ದು ನನಗ ರೊಟ್ಟಿ ತಂದುಕೊಟ್ಟ ನಿಮಗ ದೇವರು ಕಲ್ಯಾಣ ಮಾಡ್ತಾನ. ಹಸಿವು ಓಡಿ ಹೋಗಿ ಬಿಡ್ತಾದ ಎಷ್ಟ ದಿನಾ ಅಂತ ಕಾಡ್ತಾದ ಕಾಡಿ ಕಾಡಿ ಒಂದಿವ್ಸ ಅಡವಿ ಸೇರತಾದ. ಇನ್ನ ಮ್ಯಾಲ ನಿಮ್ಮ ಮನ್ಯಾಗ ಹಾಲುಕ್ಕಿ ಹಳ್ಳಾ ಹರಿತಾದ; ಇದಿಮಾಯಿ ಓಡಿ ಹೋಯ್ತು ಅನ್ನ ಪೂರ್ಣೇಶ್ವರಿ ಪ್ರವೇಶ ಮಾಡಿದಳು.

ಸಿದ್ದಪ್ಪಗೌಡ : ಪ್ರಸಾದ ಮಾಡು ನನ್ನಪ್ಪ

ಶಿವಲಿಂಗೇಶ : ಹೊಟ್ಟಿ ತುಂಬಿದ ಮ್ಯಾಲ ಹ್ಯಾಂಗುಣಬೇಕ್ಲೇ ಸಿದ್ದಪ್ಪಗೌಡ ಹೊಟ್ಟಿ ತುಂಬಿ ತುಳಕಾಕ ಹತ್ತೈತಿ ನೀವು ಮಮತೆಯಿಂದ ತಂದರೊಟ್ಟಿ ಹೊಟ್ಟಿ ತುಂಬಾ ಉಂಡೀನಿ ತೃಪ್ತಿ ಆಗೇತಿ ಡೇಗ ನೋಡು ಹ್ಯಾಂಗ ಬರತೈತಿ.

ಮಲ್ಕಮ್ಮ : ಯಪ್ಪ! ಇದ್ದ ರೊಟ್ಟಿ ಇದ್ದಂಗ ಐತಿ ಕುಂತು ಊಟಾ ಮಾಡು ಬಾ.

ಶಿವಲಿಂಗೇಶ : ಎಪ್ಪತ್ತೆಕರೆ ಜಮೀನಿದ್ರು ಒಪ್ಪತ್ತಿನ ಅಶನಕ್ಕ ಗತಿಯಿಲ್ಲಾಂತ ಇನ್ನ ಮ್ಯಾಲ ಕೊರಗ ಬ್ಯಾಡ್ರಿ, ಮರಗಬ್ಯಾಡ್ರಿ, ಜೋಕಿನಿಂದ ಜೋಕಾಲಿ ಜೀಕ್ತಾದ *(ಹೋಗುವನು)*

ಮಲ್ಕಮ್ಮ : ಮಧ್ಯರಾತ್ರಿಯೊಳಗ ಬಂದು "ಮಲ್ಕಮ್ಮ ನನಗ ಹಸಿವಿ ಆಗೇತಿ ಬಾಗಿಲಾ ತೆರಿ" ಅಂತ ಚೀರಿದರೂ ನಾನು ಏಳಲಿಕ್ಕರ ಯಾವ ಮಾಯದಿಂದ ಒಳಗ ಬಂದ ನನಗ ಎಬ್ಬಿಸಿ ರೊಟ್ಟಿತಾನ ತೊಗೊಂಡು ಹೊರಗ ಹೋಗ್ತಾನ.

ಸಿದ್ದಪ್ಪಗೌಡ : ಮಹಾತ್ಮರ ವರ್ತನಾನೆ ಹಂಗಿರತಾದ, ನಮ್ಮ ಹಸಿವು ಹಿಂಗಸ್ಲಿಕ್ಕ ಬಂದವರು ಅವರು ಆಶಾಮಿಷ ಅಳಿಯಾಕ ಬಂದವರು ಅವರು. ನಮ್ಮಗಂಟಿದ ದಾರಿದ್ರ್ಯ ದೂರ. ಮಾಡಲು ಬಂದವರು ಅವರು.

ಮಲ್ಕಮ್ಮ : ನಾವು ಮೂರು ದಿವಸದಿಂದಲೂ ಉಪವಾಸವಿದ್ದದ್ದು ಆ ಮಹಾತ್ಮನಿಗೆಂತು ಗೊತ್ತಾಗಿರಬೇಕ್ರಿ.

ಸಿದ್ದಪ್ಪಗೌಡ : ಗೌಡತಿ : ನಮಗೆ ಎಪ್ಪತ್ತೆಕರೆ ಜಮೀನಿದ್ರು ಒಪ್ಪತ್ತಿನ ಅಶನಕ್ಕೆ ಗತಿಯಿಲ್ಲದಂತೆ ಮಾಡಿತ್ತು ವಿಧಿ ಸಾಧು ಶಿವಲಿಂಗೇಶ್ವರ ದರುಶನದಿಂದ ಆ ವಿಧಿ ಓಡಿ ಹೋಯ್ತು.

ಮಲ್ಕಮ್ಮ : ಕಾಲ, ಕರ್ಮ, ಹುಟ್ಟು, ಸಾವು, ಪಾಪ ಪುಣ್ಯದ ಬೆಳ್ಸಜವನ್ನ ಜನಮನಕ್ಕೆ ಹಂಚಿದ ಘನ ಮನದ ಮಹಾಂತರ ವಾಣಿ ಅದೆಂತು ಸುಳ್ಳಾದೀತು. ಕರಾಳ ಪರದಿ ಹರಿಯಿತು. ಬೆಳಕು ಧರೆ ಬೆಳಗಿತು.

ಸಿದ್ದಪ್ಪಗೌಡ : ಅತಿ ಮಾನಸಕ್ಕೇರಿದವರು ಮುಟ್ಟಿದ್ದೆಲ್ಲ ಪರುಷವಾಗುತ್ತದೆ ಕಂಡದ್ದೆಲ್ಲ ಪಾವನವಾಗುತ್ತದೆ. ಸುಳಿದ ಸುಳುಹೆಲ್ಲಾ ಜಗತ್ಪಾವನವಾಗುತ್ತದೆ. ಮೆಟ್ಟಿದ ಧರೆ ಅವಿಮುಕ್ತ ಕ್ಷೇತ್ರವಾಗುತ್ತದೆ. ಸೋಂಕಿದ ಜಲವೆಲ್ಲ ಪುಣ್ಯತೀರ್ಥವಾಗುತ್ತದೆ ಗೌಡತಿ.

ಮಲ್ಕಮ್ಮ : ಅಂತೆಯೇ ಬಚ್ಚಲದ ನೀರು ನಿಶ್ಚಲ ಭಾವದಿಂದ ಕುಡಿದು ಕುಣಿಯುತ್ತಾನೆ. ಆ ಪುಣ್ಯ ಪುರುಷ ಆತನಿಗೆ ಮಡಿ ಮೈಲಿಗೆ ಹೇಸಿಕೆ ಎಂಬುವದೇ ಇಲ್ಲ. ಸುತ್ತೆಲ್ಲಾ ಸೌಗಂಧ ಭರಿತ ಕೇಸರಿಯಂತೆ ವಾಸನೆ ಹರಿಯುತ್ತಿರುತ್ತದೆ.

ಸಿದ್ದಪ್ಪಗೌಡ : ಮೊನ್ನೆ ನಂದಿಕೂರಿಗೆ ಹೋಗಿ ಅಲ್ಲಿಯ ಭೋಜಪ್ಪ ಗೌಡರಿಗೆ ಕರೆದುಕೊಂಡು ಶಿಲೆಯ ಮೇಲೆ ಕುಳಿತು ಮಾತಾಡುತ್ತಿರುವಾಗಲೇ "ಭೋಜಪ್ಪಗೌಡ ನಿಂದು ಅಮವಾಸಿಗಿ ಜಾತ್ರಿ ಆದ್ರ ನಂದು ಪಂಚಮಿಗಿ ಜಾತ್ರಿ ಆಗ್ತಾದ" ಈ ಮಾತ ನೆನಪ್ಯಾಗಿಡು ಮತ್ತ ಎದಿ ವಡ್ಡೇನ ಸಾಯ್ತೀನಿ ಅಂತ ? ಮುಂದ ಆಗೂದು ಈಗ ಹೇಳ್ತಿನಿ. ಈಗೇನ ಈ ಕಲ್ಲಿನ ಮ್ಯಾಲ ಕುಂತೀನಲ್ಲ. ಮುಂದ ಇದ ಕಲ್ಲು ಲಿಂಗಮೂರ್ತಿ ಆಗಿ ಪೂಜೆಗೊಳ್ತಾದ ಅಂತ ಹೇಳಿ ಬಂದ್ನಂತ ಎಂಥ ಭವಿಷ್ಯವಾಣಿ.

ಮಲ್ಕಮ್ಮ : ನಮ್ಮ ಕೋಟ್ನೂರ ಶ್ರೀಮಂತಪ್ಪ ಸಾವ್ಕಾರಗ ಏನ್ ಕಾಡೂದ ಬಂದ್ಯೆತೋ ? ಈ ಸಾಧು ಗಂದ್ರ ನಿಟ್ಟನಿಲಾ ಸೇರೂದಿಲ್ಲ. ಜಡಿಯಾಕ ಬಿಟ್ಟಾನ, ಗಡ್ಡಾಯಾಕ ಬಿಟ್ಟಾನ ಹಿಡ್ದ ತಗಸ್ತೀನಿ ಅಂತ ಬೆನ್ನ ಹತ್ತ್ಯಾನ ಎಲ್ಲಿ ಶಾಪಕ್ಕ ಗುರಿ ಆಗ್ತಾನೇನೊ ಅಂತೀನಿ ಬನ್ನಿ ಹೋಗೋಣ.

ಪ್ರವೇಶ – ೨೦

ದೃಶ್ಯ ರಸ್ತಾ

(ಹೋಗುವರು)

ಸುಂದ್ರ್ಯಾ : ಮಾಲಿ ಬೇಕೇನ್ರಿ ಮಾಲಿ ಇರುವಂತಿಗಿ, ಶಾವಂತಗಿ, ಜಾಜಿ ಮಲ್ಲಿಗಿ ಹೂವು ತಾಜಾ ತಾಜಾ ಹೂವು ತಂದೀನ್ರಿ.

ಚಂದವ್ವ : ಎಲಿ ಬೇಕೇನ್ರೇವಾ ಎಲಿ ಅಡ್ಕಿ ನಾಶಿ ಹ್ಯಾಂಗ ನಡೆದೈತ್ಯೆ ಸುಂದ್ರ್ಯಾ ನಿನ್ನ ಹೂವಿನ ಯಾಪಾರ

ಸುಂದ್ರ್ಯಾ : ಇನ್ನಾ ಈಗರ ಓಣ್ಯಾಗ ಕಾಲಿಟ್ಟೀನಿ ಹಿಂಗ್ಹೋಗಿ ಹಂಗ ಬರೂದ್ರಾಗ ಬುಟ್ಟೀನ ಖಾಲಿ ಆಗ್ತಾದ

ಚಂದವ್ವ : ಸುಮ್ನ ಯಾಕ ಜಂಭಾ ಕೊಚ್ಗೋತೀದಿ ನೀನೇನ ಖಮ್ಮನ ಹೂ ಅದಾವಂತ ತಿಳಿದ ತಗೊಂತಿರಬೇಕು ಅದೇ ಹಳಿಸದ್ದ ಬಾಡಿದ ಹೂವು ಮುದುಡಿದ್ದು.

ಸುಂದ್ರ್ಯಾ : ಹಳಸಿದ್ದು ಬಾಡಿದ್ದು ಅನಬ್ಯಾಡಾ ಮತ್ತ ? ನಿನ್ನಂಗಲ್ಲ ತ್ವಾಟದಿಂದ ತಂದ ಎಲಿ ಹತ್ತ ಹತ್ತ ದಿವಸ ತಲಿಮ್ಯಾಲಿಟಗೊಂಡ ಮಾರೂದಿಲ್ಲ. ನಾತಂದ ಹೂವು ಅವತ್ತಿಂದ ಅವತ್ತ ಖಲಾಸ.

ಚಂದವ್ವ : ಏ! ಜೊಕಮಾರ, ನನ್ನೆಲಿ ಅಂದ್ರ ಏನಂತ ತಿಳಿದೀದಿ. ಹತ್ತ ದಿವ್ಸ್ಯಾಕ ತಿಂಗಳಾನ ಗಟ್ಲೆ ನೀರಾಗ ಬಿಟ್ರ ತಾಜಾ ಎಲಿ ಇದ್ದಾಂಗ ಇರತಾವ. ನಿಂದೇನು ಮುಂಜಾನೆ ಅರಳಿದ ಹೂವು ಸಂಜಿ ಆದಕೂಡ್ಲೆ ಬಾಡಿ ಬಕ್ಕಲಾಗಿ ಹೋಗಿ ಬಿಡ್ತಾವ.

ಸುಂದ್ರ್ಯಾ : ಬಾಡಿ ಬಕ್ಕಲಾದ್ರೂ ಅದರ ವಾಸನಾ ಎಷ್ಟು ಘಮ ಘಮ ಅಂಥ ಬರತಾದ ತೆರದು ತೋರಸಂದೇನು ಹೂವು

ಚಂದವ್ವ : ನೀ ತೆರದು ತೋರ್ಸೂದ ಬ್ಯಾಡ ಮಾರಾಯ ಇಲ್ಲಿಗೆ ಗಬ್ಬ ವಾಸನಾ ಬರಾಕ ಹತ್ತೈತಿ. ಅಲ್ಲ ಸುಂದ್ರು, ನಂದಿಕೂರು ಕೆಸರಟಗಿ ಕೋಟ್ನೂರು ಖಣದಾಳ್ದಾಗ ಇರತಾನಲ್ಲ ಸಾದು ಬಚ್ಚಲ ಮೋರಿ ಜಳಕ ಮಾಡಿ ಮೈ ತುಂಬಾ ಹೊಲಸ ಹಚಗೊಂಡ್ರು ಸಮೀಪ ಬಂದಂಗೆಲ್ಲ ಇಷ್ಟ ಸುವಾಸನ ಬರತೈತಿ ಮಾರಾಯ. ಜಗತ್ತಿನ ಎಲ್ಲಾ ಹೂವಿನ ವಾಸನಾ ತನ್ನಲ್ಲೆ ಇಟಗೊಂಡಾನೇನು ಅಂತ ಅನಸ್ತೈತಿ.

ಸುಂದ್ರ್ಯಾ : ಅಂದಲ್ಲೇ ಹಾಂವುಗಳು ಅವನ ಸುತ್ತ ಮುತ್ತ ಇರ್ತಾವ ನಾಯಿಗಳಂತೂ ಬ್ಯಾಡದು ಸುದ್ದಿ. ಏಳೆಂಟು ನಾಯಿ ಬೆನ್ನ ಹತ್ತಿರ್ತಾವ ಕುಂಯಿ ಕುಂಯಿ ಅಂತ.

ಚಂದವ್ವ : ಕೋಟ್ನೂರ ಶ್ರೀಮಂತಪ್ಪ ಆ ಸಾಧುಗ ಹುಡುಕಾಡಾಕ ಹತ್ಯಾನಂತಲ್ಲ ಮಾರಾಯ

ಸುಂದ್ರ್ಯಾ : ಯಾಕಂತ?

ಚಂದವ್ವ : ಯಾಕಂದ್ರ ಮೈತುಂಬಾ ತಲಿ ತುಂಬಾ ಹರದಾಡೋ ಹೇನು ಕಂಡು ಜಟಾ ಮುಕುಟ ಎಲ್ಲಾ ತೆಗ್ಸಬೇಕಂತ ಮಾಡ್ಯಾನಂತ ನೋಡಾ ಅಂವ.

ಸುಂದ್ರ್ಯಾ : ಅಲ್ಲಿ ಅದಾನು ಅನ್ನುದ್ರಾಗ ಇಲ್ಲಿ ಇರತಾನ, ಇಲ್ಲಿ ಅದಾನು ಅನ್ನುದ್ರಾಗ ಮತ್ತೆಲ್ಲೋ ಇರತಾನ. ಇಂಥವರ ಕೈಯಾಗ ಸಿಗ್ತಾನಾ ಅಂವಾ; ಸಿಕ್ರ ಅವ್ನ ಕೆಡಿಕೆಗೆ ಸಿಗಬೇಕ ನೋಡು ಮತ್ತ ಅಲ್ಲಲೇ ಚಂದ್ರಿ ಚಿಂಚನಸೂರಿನ ಸಿದ್ಧಮಲ್ಲಪ್ಪ ಶೀಲವಂತಗ ಕರಿಸಿ ಇನ್ನ ಮ್ಯಾಲ ನಿನ್ನ ಬಡತನ ಓಡಿಹೋಗಿ ಬಿಡ್ತಾದ. ಏಳು ರೊಟ್ಟಿ ಕೊಡತೀನಿ ಉಂಡ ಹೋಗು ಅಂತ ಆಶಿರ್ವಾದ ಮಾಡಿದ್ನಂತ ನೊಡ.

ಚಂದವ್ವ : ಉಂಡೂಟ, ಕಂಡ ಕನಸ ಹೇಳ್ತಾನೋ ಪುಣ್ಯಾತ್ಮ. ಕದ್ದು ಮುಚ್ಚಿ ಕಳೂಲೆ ಮಾಡಿದ ವ್ಯವಹಾರೆಲ್ಲಾ ಬಯಲಿಗೆ ಹಾಕಿ ಬಿಡ್ತಾನ, ಮೊನ್ನಿ ಖಣದಾಳ್ದಾಗ ಎಲಿ ಮಾರಕೊಂತ ನಾ ಹೊಂಟೀನಿ ಯಾರಿಗಂದ್ನೋ ಏನೋ ಹತ್ತಿ ಹೊಲ್ದಾಗ ಉಳ್ಯಾಡಿ ಬಂದು ಮಕ್ಕಳು ಊರಾಗ ನ್ಯಾಯ ಹರಿಲಿಕ್ಕಿ ಬರತಾರ ಅಂತ ಸಿಕ್ಕಂಗ ಒದರತಿದ್ದ. ಎಲ್ಲಿ ನಂದು ಹೊರಗ ಹಾಕ್ತಾನಂತ ಬೆಂಡೆಬ್ಯಾಸಿರ್ಕಿ ಇಲ್ದಿಂಗ ಮತ್ತೊಂದು ಓಣೇಗಿ ಹೋಗೂದ್ರಾಗ ಅವನಿಗಿ ತುಡಗ ದನಾ ತಿರಗ್ದಂಗ ಯಾಕ ತಿರಗ್ತೀದಿ. ಕಡಗ ಹಾಕ್ಕೊಂಡ ಮೆರಿಬೇಕು ಅಂತ ತನ್ನಿಂದ ತಾನ ಮಾತಾಡೂದು, ನಗೂದು ಮಾಡ್ತಿದ್ದ.

ಸುಂದ್ರ್ಯಾ : ಮರತೂರಿಗೆ ಹೋಗಿ ಹೈಯ್ಯಾಳದ ಲಿಂಗಯ್ಯನ ಗುಡ್ಯಾಗ ಬೈಲಾಟದ ತಾಲೀಮ ನೋಡಿ, ಚಹಾಕಿಟ್ಟ ಬೋಗೋಣಿ ಜಾಡಿಸಿ ಭಾವ್ಯಾಗ ಒಗದರ ಒಳಗಿನ ಹಾಲ ಸಕ್ರಿ ನೀರ ಸ್ವಲ್ಪರ ಬಿದ್ದಿದ್ದಿಲ್ಲಂತ; ಮತ್ತ ತಂದ ಚಹಾ ಮಾಡಿ ಕುಡಿಸಿದ್ರಂತ.

ಚಂದವ್ವ : ಮತ್ತ ಅದೇ ಊರಿನ ಕುರಬರ ಪೂಜೇರಿ ಹುಣಚಪ್ಪ ಭೀಮಪ್ಪ ಕೂಡಿ ಮುತ್ಯಾಗ ಕುಚೋದ್ಯತನ ಮಾಡಿ ತುಂಬಿದ ಹಳದಾಗ ದಬ್ಬಿ ಬಿಟ್ಟರಂತ ಆಚೆದಡದ ಮ್ಯಾಲ್ನಿಂತ ನನಗೇನಾಗ್ತಾದೊ ಮಕ್ಕಳ್ಯಾ ನಿಮ್ಮವಂಶ ನಿರ್ವಂಶವಾಗ್ತಾದಂತ ಶಾಪಕೊಟ್ನಂತ.

ಸುಂದ್ರ್ಯಾ : ಖಣದಾಳದ ವೀರಭದ್ರ ದೇವರ ಗುಡ್ಯಾಗಿದ್ದಾಗ ಮಳಿಬರು ಮುಂದ ಪರ್ಯಾಣ್ದಾಗ ನೀರ ಹಿಡದ ಬತ್ತಿ ಹೊಸದ ನೀರ ದೀಪ ಹಚ್ಚಿ ಮಲ್ಕೊಂಡ ಬಿಟ್ಟಾಗ ಹಾವುಗಳು ಬಂದು ಮೈ ಮ್ಯಾಲ ಆಡ್ತಿದ್ದುವಂತ.

ಚಂದವ್ವ : ನಡಿಯ ಮಾರಾಯ ಮಾತ ಮನಿ ಕಣ್ಣಿಲ್ಲಾಂತ ಊರಾಗ ಹೋಗಿ ಮಾರ್ಕೊಂಡ ಬರತೀನಿ.

ಸುಂದ್ರ್ಯಾ : ಮತ್ತ ನಿಂದೇನ ಸುದ್ಧಿ

ಚಂದವ್ವ : ಸುದ್ದಿಲ್ಲ ಸುಕ್ಕಾಲನು ಇಲ್ಲ ಹ್ಯಾಂಗ ಬಂದೀವಿ ಹಂಗ ಹೋಗೋದು

ಸುಂದ್ರ್ಯಾ : ಅಂದ್ರ ಮೂಗಿಗಿ ತುಪ್ಪವರೆಸಿ ತಿರುಗುವಾಕಿ ಅಂದಂಗಾಯ್ತು ಇವತ್ತ ಎರಡರಾಗ ಒಂದ ಹೇಳಿ ಹೆಜ್ಜೆ ಕಿತ್ತು.

ಚಂದವ್ವ : ನನಗಂತೂ ಹಿಂದಿಲ್ಲ ಮುಂದಿಲ್ಲ ಹೊಟ್ಟಿ ಉಪಜೀವನಕ್ಕ ಎಲಿ ಯಾಪಾರ ಮಾಡಿ ಉಂಡುಟ್ಟ ಸಾಯಬೇಕಂತ ಮಾಡೀನಿ.

ಸುಂದ್ರ್ಯಾ : ಆಂದ್ರ ಮದವಿ ಮಾಡ್ಕೊಳ್ಳುದಿಲ್ಲಾದಂಗಾಯ್ತು

ಚಂದವ್ವ : ಹೌದ ಬಿಡ ಮಾರಾಯ, ಇದು ಯಾರ ಹೇಳಿದ್ದ ಶಾಣೇತನ ಮದವಿ ಮಾಡ್ಕೋಬೇಕು ಮಕ್ಕಳನ್ನ ಹಡಿಬೇಕು, ಸಾವುತನ ಮಣ್ಣ ಮುಸಿ ಆಗಬೇಕು, ಅದ್ಕಂತ ಗಟ್ಟಿ ದೈರ್ಯಮಾಡಿ ಬಿಟ್ಟೀನಿ ಅಖಂಡ ಬ್ರಹ್ಮಚಾರಿಣಿಯಾಗಬೇಕಂತ.

ಸುಂದ್ರ್ಯಾ : ಅಂತು ಶಿವಶರಣೆ ಆಗ್ತೀದಿ ಅಂದಂಗಾಯ್ತು. ನಿನ್ಗ್ಯಾಂವ ಸಾಧು ಮಹಾರಾಜ ಕಿಂವಿ ಊದ್ಯಾನ ಬ್ರಹ್ಮ ಚಾರಿ ಆಗಬೇಕಂತ.

ಚಂದವ್ವ : ಯಾರ್ಯಾಕ ಊದತಾರ! ನನ ಮನಸ್ಸಿಗಿ ನಾನ ತಿಳ್ಕೊಂಡೀನಿ. ಕಡಕೋಳ ಮಡಿವಾಳಪ್ಪನವರು ಹೇಳಿಲ್ಲ. "ನೀ ತಿಳಿದರ ತಿಳಿತೆ, ತಿಳಿಯದಿದ್ದರ ಏನ್ ಉಳಿತೆ" ಅಂತ.

ಸುಂದ್ರ್ಯಾ : ಅಂದ್ರ! ಇನ್ನ ಮುಂದ ಮದವಿ ಮಾತ ಎತ್ತಬಾರ್ದ ಆಂ ಮತ್ತ ? ನಡಿಯಿನ್ನ ನಿನದಾರಿ ನಿನಗ, ನನದಾರಿ ನನಗ *(ಹೋಗುವರು)*

(ಅದೇ ರಸ್ತೆಯಲ್ಲಿ)

ಶ್ರೀಮಂತಪ್ಪ : ಈ ಕೋಟ್ನೂರ ಶ್ರೀಮಂತಪ್ಪನ ಸಿಟ್ಟ ಅಂದ್ರ ಹಠದಲ್ಲಿ ವಿಶ್ವಾಮಿತ್ರ, ಛಲದಲ್ಲಿ ದುರ್ಯೋಧನ ಅವರಿಗಿಂತಲೂ ಮಿಗಿಲು ಅನ್ನೋದು ಈ ಸುತ್ತ ನಾಲ್ಕು ಹಳ್ಳಿಗೂ ಮನೆಮಾತಾಗೇತಿ... ಶಂಬಣ್ಣಗ ಬೆನ್ನ ಹಚ್ಚಿನಿ ಆ ಹುಚ್ಚಗ ಹಿಡ್ಕೊಂಡ ಬರಲಿಕ್ಕಿ ಆ ಹುಚ್ಚನ

ಗಡ್ಡಾಮೀಸಿ ತಗಿಸುವವರೆಗೂ ನನಗ ನೆಮ್ಮದಿಯಿಲ್ಲ. ನನ ಮನಸ್ಸ್ಯಾಗ ಬಂದದ್ದು ಬಿಟ್ಟಿಲ್ಲ.

ಸಿದ್ದಪ್ಪಗೌಡ : ನೀನೇನ್ಮಾಡಿದರೂ ಅಂವಾನಿನಕೈಯಾಗ ಸಿಗೂದು ಇಲ್ಲ. ಅಕಸ್ಮಾತ ಸಿಕ್ರು ಅದು ನಿನ ಕೆಡಕಿಗೆ ನಾಂದಿಯಾಗ್ತಾದ ಹೊರ್ತು ಈ ನಿನ್ನ ದರ್ಪ ದಬ್ಬಾಳಿಕೆಗೆ ಯಶ ಸಿಗೂದಿಲ್ಲ. ಜನ ನೀ ಮಾಡೂದ್ಕ ಮೆಚ್ಚೂದೂ ಇಲ್ಲ. ಶ್ರೀಮಂತಪ್ಪ ಗಾಳೀಗಿ ಹೊಲಸು ಆಗೈತಿ ಅಂತ ಜಳಕ ಮಾಡಿಸವವರುಂಟಾ ಈ ಜಗತ್ತಿನ್ಯಾಗ ? ಎಂಥ ಹುಚ್ಚ ಅದೀ ಅಂತೀನಿ.

ಶ್ರೀಮಂತಪ್ಪ : ಗಾಳಿ ಹೊಲಸ ಆಗಿದ್ರು ಹಂಗ ಕುಂತ್ರ ಮೂರ್ಖತನ. ಸುತ್ತಿನ ಮನೆ ಮಾರುಗಳಿಗೆ ಹಬ್ಬಿ ಆರೋಗ್ಯ ಹದಗೆಡಿಸಿ, ಜೀವಕ್ಕ ಧಕ್ಕೆ ಆದ್ದದ್ದು ಈ ಹಿಂದ ನೀವು ಕೇಳಿಲ್ಲವೆ? ಊರ ಬಿಟ್ಟು ಹೋದದ್ದು ಗೊತ್ತಿಲ್ಲವೇ ? ಅದ್ಕಂತ ಯಾವಾಗಲೂ ಮುಂಜಾಗ್ರತ ಕ್ರಮ ಅನುಸರಿಸಬೇಕು. ನಮ್ಮ ನಮ್ಮ ಸುತ್ತಲಿನ ಪರಿಸರ ಸ್ವಚ್ಚಗೊಳಿಸಬೇಕು. ಆಗ ಆರೋಗ್ಯಕರವಾದ ವಾತಾವರಣ ಹಬ್ಬಲಿಕ್ಕಿ ಅನಕೂಲ ಆಗ್ತಾದಿರಿ ಗೌಡ್ರ.

ಸಿದ್ದಪ್ಪಗೌಡ : ನೀನನ್ನೂದ ನಿಜ ಐತಿ! ಅದು ಊರ ಸುತ್ತಮುತ್ತ ತಿಪ್ಪೆಗುಂಡಿಗಳು ಹಾಕುವದರಿಂದ ಮಲಮೂತ್ರ ವಿಸರ್ಜನೆ ಮಾಡುವದರಿಂದ ಸತ್ತ ದನಕರುಗಳಿಗೆ ಅಲ್ಲಿಯೇ ಒಗೆಯುವದರಿಂದ ಕಲುಷಿತ ವಾತಾವರಣ ಹಬ್ಬಿ ಅನಾರೋಗ್ಯಕ್ಕ ಕಾರಣ ಆಗ್ತಾದ ಆದರ? ಆ ಹುಚ್ಚನ ಹತ್ತಿರ ಹೊಲಸ ಐತಿ ಅಂತ ತಿಳಿದು ಆತನಿಗೇನಾದರೂ ನೀನು ಮಾಡಲಿಕ್ಕಿ ಹೋದ್ರ ನಿನ್ನ ಕೆಡಕಿಗೆ ನೀನೆ ಕಾರಣ ಆಗ್ತೀದಿ. ಈ ಮಾತು ನೆನಪಿನ್ಯಾಗಿರ್ಲಿ ಯಾಕಂದ್ರ ಅವರ ಇರುವಿಕೆನೆ ಬೇರೆ ಇದೆ. ಆರೂಢ ಅವಧೂತ ಆರಋುಕ್ಷ ಸ್ಥಾನಕ್ಕೇರಿದ ಮಹಾ ಮಹಿಮರು ಅವರು. ನಿನ್ನ ಕಣ್ಣಿಗೆ ಅವರು ಹುಚ್ಚರಾಗಿ ಕಂಡಿರಬಹುದು. ನಿಜ ಆದರ ಅವರು ಹುಚ್ಚರಲ್ಲ ಈ ಜಗದ ಹುಚ್ಚತನ, ಹುಂಬತನ ಕಂಡು ಎಚ್ಚರಸಿಲಿಕ್ಕೆ ಬಂದ ಹುಚ್ಚೇಶ್ವರರು ಅವರು ಅಂಥಾ ಕಲಬುರ್ಗಿ ನಾಡಿಗೇನೆ ಕೋಟ್ಯಾಧೀಶ್ವರ ಎನಿಸಿಕೊಂಡ ಕುಸನೂರ ಮಲ್ಲೇಶಪ್ಪ ಅವರು ಸಾಧು ಶಿವಲಿಂಗೇಶ್ವರರ ಶಿಷ್ಯರಾಗ್ಯಾರ.

ಶ್ರೀಮಂತಪ್ಪ : ನಿಮ್ಮಂಥವರ ಹಿಂಗ ಮಾತಾಡಿ ನಮ್ಮೂರ ಪರಸ್ಥಿತಿ ಇಲ್ಲಿಗಿ ಬಂದೈತ್ರಿ ಗೌಡ್ರ, ಯಾಕಂದ್ರ ಮಾಡಿದ್ದs ಮಾರ್ಗ ಅಂದದ್ದs ವೇದವಾಕ್ಯ. ಊರ ಗೌಡ್ರೆ ಹುಚ್ಚನ ಕಾಲ ಹಿಡ್ಕೊಂಡರಂತ ತಿಳ್ದು ಊರ ಜನಾನೂ ಕಾಲ ಹಿಡ್ಕೊಂತಾರ ತೀರ್ತು

ಸಿದ್ದಪ್ಪಗೌಡ : ನಿಜ! ಶ್ರೀಮಂತಪ್ಪ ಅವರು ನನ್ನ ದೃಷ್ಟಿಯಲ್ಲಿ ಮಹಾಂತರು, ಮಹಾತ್ಮರು ಮಹಿಮಾತೀತರು

ಶ್ರೀಮಂತಪ್ಪ : ನಿಮ್ಮ ಸರಿ ಮಾತಾಡುದೇನು ರಾಡಿಯೊಳಗ ಕಲ್ಲ ಒಗಿಯುದೇನು ಎರಡೂ ಒಂದ ಬರ್ತೀನಿ.

ಮಲ್ಲೇಶಪ್ಪ : ಶರಣು ಸಿದ್ದಪ್ಪ ಗೌಡರಿಗೆ

ಸಿದ್ದಪ್ಪಗೌಡ : ಶರಣು, ಶರಣು ಬರ್ರಿ ಕುಸನೂರ ಮಲ್ಲೇಶಪ್ಪಣ್ಣೋರೆ ಎಲ್ಲಾ ಆರಾಮರ್ರ್ಯಾ

ಮಲ್ಲೇಶಪ್ಪಾ : ಗುರು ಮಹಾರಾಜ ಶ್ರೀ ಸಾಧು ಶಿವಲಿಂಗೇಶ್ವರರ ಕೃಪೆಯಿಂದ ಆರಾಮವಾಗಿದ್ದೇನೆ ನೀವು ಆರಾಮಾಗಿದ್ದೀರಾ

ಸಿದ್ದಪ್ಪಗೌಡ : ಎಂದು ನಮ್ಮ ಮಸ್ತಕದ ಮೇಲೆ ಗುರು ಮಹಾರಾಜ ಸಾಧು ಶಿವಲಿಂಗೇಶ್ವರರು ತಮ್ಮ ವರದ ಹಸ್ತವಿರಿಸಿದರೊ ಅಂದಿನಿಂದ ಆರಾಮವಾಗಿದ್ದೇವೆ. ಅಫಜಲಪೂರ ತಾಲೂಕಿನ ಕಾರಭಾಸ್ಗಿಯೊಳಗಿನ ೯೪ ಎಕರೆ ಜಮೀನು ನಮ್ಮ ಸ್ವಾಧೀನಕ್ಕ ಬಂದು ಕೋರ್ಟಿನಲ್ಲಿ ನಮ್ಮಂತೆ ಫೈಸ್ಲಾನೂ ಆಯ್ತು. ಒಪ್ಪತ್ತಿನ ಅಶನಕ್ಕ ಗತಿಯಿಲ್ದಂಗ ಇದ್ದವರು ಈಗ ಎರಡೂ ಹೊತ್ತಿನ ಅಶನಕ್ಕೇನೂ ಕೊರತಿಯಿಲ್ಲಾರಿ.

ಮಲ್ಲೇಶಪ್ಪ : ಗುರುವಿನ ಕೃಪಾ ಕಟಾಕ್ಷ ಆದರ ಕೊರಡು ಕೊನರ್ತಾದ, ಬರಡು ಹಯನಾಗ್ತಾದ ವಿಷ ಅಮೃತವಾಗ್ತಾದ. ಸಿದ್ದಪ್ಪಗೌಡ್ರ! ಆ ಗುರುವಿನ ಶಕ್ತಿ ಹರನಿಗಿಂತಲೂ ಅಧಿಕವಾದದ್ದು ಅಂತೆಯೇ ಹೇಳಿತು ಜನವಾಣಿ ಹರ ಮುನಿದರೂ ಗುರುಕಾಯ್ತಾನೆ ಅಂತ.

ಸಿದ್ದಪ್ಪಗೌಡ : ಅಂಥ ಮಹಾತ್ಮರಿಗಿ ನಮ್ಮ ಕೋಟ್ನೂರಿನ ಶ್ರೀಮಂತಪ್ಪ ಶೆಟ್ಟಿ ಜಟಾ ಮುಕುಟ ತಗಸ್ತೀನಿ ಹಡಪದ ಶರಣಪ್ಪಗ ಕರ್ಸಿ ಅಂತ ಅವ್ರಿಗಿ ಹುಡಕ್ಲಿಕ್ಕಿ ನಮ್ಮೂರಿನ ಶಂಬಣ್ಣಗ ಕಳಿಸಿ ಕೊಟ್ಟಾನ್ರಿ

ಮಲ್ಲೇಶಪ್ಪ : ಓದು, ವಾದ, ಬುದ್ಧಿ ದೊರಕಿಸಿ ಕೊಡಲಾರದು, ಪರತತ್ವ ಅದಕೆ ಬೇಕು ಬೇರೆ ಕಣ್ಣು, ಅದುವೇ ಅರಿವಿನ ಕಣ್ಣು, ಆ ಕಣ್ಣೆ ಇಲ್ಲದವನಿಗೆ ಅತಿ ಮಾನಸಕ್ಕೇರಿರುವವರ ಸ್ಥಿತಿ ಎಂತು ಗೊತ್ತಾಗ ಬೇಕು ? ಕೇವಲ ಹುಂಬತನದ ಹಂಬಲವೊಂದಾವರಸಿದವರಿಗೆ ಅಂಬರವ ನುಟ್ಟ ದಿಗಂಬರನ ಮೇಲೆ ನಂಬಿಕೆಯಾದರು ಅದು ಹೇಗೆ ಬಂದೀತು ಸಿದ್ದಪ್ಪ ಗೌಡರೆ, ಅದಕೆ ನಾವಾದರೂ ಮಾಡುವದೇನು ? ಮಾಡಿದವನುಣ್ಣುತ್ತಾನೆ ಮಣಿಯದಂಥ ಕಡಬು.

ಸಿದ್ದಪ್ಪಗೌಡ : ಬನ್ನಿ ಮನೆಗೆ ಹೋಗೋಣ

ಮಲ್ಲೇಶಪ್ಪ : ಮತ್ತೊಮ್ಮೆ ಬಂದಾಗ ಅವಶ್ಯ ಬರ್ತೀನಿ ಗೌಡರೆ *(ಹೋಗುವರು)* ಅಂಬಲಿ ಕಂಬಳಿ ಆಸ್ತಿ ಮಿಕ್ಕಿದ್ದೆಲ್ಲಾ ಜಾಸ್ತಿ.

ಸಿದ್ದಪ್ಪಗೌಡ : ಕೋಟ್ಯಾಧೀಶ್ವರರಾದ ಕುಸನೂರ ಮಲ್ಲೇಶಪ್ಪನವರು ಗುರು ಮಹಾರಾಜರು ಹೇಳಿದಂತೆ ಒಟ್ಟಿದ ನೋಟಿನ ಕಟ್ಟುಗಳನ್ನು ಸುಟ್ಟು ಅವರಲ್ಲಿ ಸಾಲವಾಗಿ ಪಡೆದುಕೊಂಡ ಹಣದಲ್ಲಿ ಆಸ್ತಿಪಾಸ್ತಿಗಳನ್ನು ಅಡವಿಟ್ಟು ಬರೆದುಕೊಟ್ಟ ಪ್ರಾಮೇಸರಿ ನೋಟುಗಳನ್ನು ಸುಟ್ಟು ಶ್ರೀ ಸಾಧು ಶಿವಲಿಂಗೇಶ್ವರರ ಧ್ಯಾನದೊಳಗೋಲಾಡ್ತಾರೆ, "ಅಂಬಲಿ ಕಂಬಳಿ ಆಸ್ತಿ ಮಿಕ್ಕದ್ದೆಲ್ಲಾ ಜಾಸ್ತಿ" ಎನ್ನುತ್ತ ಜನ ಸಮುದಾಯಕ್ಕ ತಮ್ಮ ಜ್ಞಾನವನ್ನು ಹಂಚುತ್ತಾರೆ. ನಿಜವಾಗಿಯೂ ಧನ್ಯಾತ್ಮರವರು *(ಹೋಗುವರು)* ನೊಂದವರ ಧ್ವನಿ ಆದ್ರು ಬೆಂದವರ ಬೆಂಗಲಿಗರಾದ್ರು ಶೋಷಣೆಯೊಳಗಿದ್ದವರನ್ನ ಬಿಡಿಸಿಕೊಂಡು ಬಂದ್ರು ಇಟಗಿ ಸಾಧು ಶಿವಲಿಂಗೇಶ್ವರರ ನಾಮಾಮೃತವನ್ನ ಜನ ಸಮುದಾಯಕ್ಕ ಹಂಚಲಕ್ಕೆ ಹತ್ಯಾರ. ಕಾಡು ಮಾನವನೊಬ್ಬ ರಾಮನಾಮದ ಮಂತ್ರ ಬಲದಿಂದ ವಾಲ್ಮಿಕಿ ಮಹರ್ಷಿಯಾದ. ರಾಮಾಯಣ ಬರೆದ ನಾಡೋಜ ನೆನಸಿದ ಅತಿಕಾಮಿ ವೇಮಣ್ಣಾ ಅತ್ತಿಗೆ ಹೇಮರಡ್ಡಿ ಮಲ್ಲಮ್ಮನ ಮೂಗುತಿಯ ಪ್ರಭಾವದಿಂದ ವೇಮನ ಯೋಗಿ ಆದ, ವಚನಗಳನ್ನು ಬರೆದ ಆದ ರಂಗನ ನಮ್ಮ ಮಲ್ಲೇಶಪ್ಪ ಸಾಹುಕಾರ ಸಾಧು ಶಿವಲಿಂಗೇಶ್ವರರ ವರದ ಹಸ್ತದ ಪ್ರಭಾವದಿಂದ ಪರಿವರ್ತನೆ ಆದ್ರು.

ಪ್ರವೇಶ – ೨೧

ದೃಶ್ಯ ಖಣದಾಳ ವೀರಭದ್ರ ದೇವರ ಗುಡಿ

ಶಿವಲಿಂಗೇಶ್ವರ : *(ತಲಿ ಗಡ್ಡಾ ಬೋಳಿಸರಬೇಕು ಮಳೆ ಬರುತ್ತಿರಬೇಕು)* ಲೇ ಕೋಟ್ನೂರ ಶ್ರೀಮಂತಪ್ಪ ಶೆಟ್ಟಿ ಇನ್ನ ಒಂದ ವರ್ಷದೊಳಗ ಹೊರಗ ಬರತಾದ್ಲೇ ನಿನ ಚಟ್ಟ, ನನ್ತಲಿ ಬೋಳಿಸಿದ ಆ ಹಡಪದ ಕರಣ್ಯಾನವಂಶ ನಿರ್ವಂಶ ಆಗ್ತಾದ ಮತ್ತ ಆ ಊರಿಗಿ ಹಡಪದವರು ಬರಲಾರ್ದಂಗ ಆಯ್ತುಲ್ಲೆ. ಶಂಬ್ಯಾ! ನನಗ ಹಿಡ್ಕೊಂಡ ಬಂದ ನಿನಗ ಹೊಟ್ಟಿ ಬ್ಯಾನಿ ಎದ್ದು ಒಂದ ವರ್ಷದಾಗ ಸಾಯ್ತೀದಿ. ನಿಮ್ಮ ನಿಮ್ಮ ಭವಿಷ್ಯನ

ಪರಿವರ್ತಿಸಬೇಕಂತ ಸಿಗಲಾರ್ದ ಕುಂತಿದ್ದ್ಯಾ ಅಧ್ಯಾಂಗ ಅಳಕತಾದಲೇ ಬ್ರಹ್ಮಬರಹ, ಲೇ ಕುಸನೂರ ಮಲ್ಲೇಶಪ್ಪ ಮಳಿ ಬರಾಕ ಹತ್ತೈತಿ ಪರ್ಯಾಣ್ದಾಗ ನೀರ ಹಿಡದ ದೀಪ ಹಚ್ಚಲೇ.

ಮಲ್ಲೇಶಪ್ಪ : ಆಗಲಿ ತಂದೆ! *(ಪರ್ಯಾಣದಲ್ಲಿ ನೀರ ಹಿಡಿದು)* ದೀಪದ ಕಡ್ಡಿ ಬೇಕಲ್ರಿ ಅಂಗಡಿಗಿ ಹೋಗಿ ತರತೀನ್ರಿ.

ಶಿವಲಿಂಗೇಶ್ವರ : ಮಗನ ಧಾರಾಕಾರವಾಗಿ ಸುರಿವ ಮಳ್ಯಾಗ ಅಧ್ಯಾಂಗ ಹೋಗ್ತಿ. ಅದರಾಗ .ಕಗ್ಗತ್ತಲಿ ಮಗನ ದಿಟ್ಟಿಸಿ ಪಣತೀಗಿ ನೋಡು. ತಾನ ದೀಪ ಹತ್ತತಾದ.

ಮಲ್ಲೇಶಪ್ಪ : ಯಪ್ಪಾ! ಆ ಕೆಲಸ ನಿಮ್ಮಿಂದ ಸಾಧ್ಯ ಐತಿ, ಕಸರು ಉಳದವರ ಹತ್ತಿರ ಅದು ಹ್ಯಾಂಗ ಸಾಧ್ಯ.

ಶಿವಲಿಂಗೇಶ್ವರ : ಮಗನ ಸುಟ್ಟ ಸುರಮಂಡ್ಲ ಆದಾಗ ಅಧ್ಯಾಂಗ ಉಳಿತಾದೋ ಕಸರ ಹೆಸರಗಿರಲಾರ್ದಂಗ ಸುಟ್ಟು ಕರಕಾಗಿ ಕರಗಿ ಹೋಗ್ಯಾದ, ನೋಡ ಮಗನ ಪಣತೀಗಿ.

ಮಲ್ಲೇಶಪ್ಪ : ನಿನ್ನಪ್ಪಣೆ ತಂದೆ;

ಶಿವಲಿಂಗೇಶ್ವರ : ಶಿವ ಮತ್ತು ಶಕ್ತಿ ಇವರು ವಿಶ್ವದ ಬೀಜಗಳು ಶಿವನು ಶಕ್ತಿಯನ್ನು ಹೊಕ್ಕು ಬಿಂದುವಾಗುವನು. ಶಕ್ತಿ ಬಿಂದುವನ್ನೂ ಸೇರಿ ನಾದವಾಗುವಳು. ಈ ನಾದ ಬಿಂದುಗಳು ಸೇರಿ ವಾಕ್ ಉತ್ಪತ್ತಿಯಾಗುವದು. ಅದುವೇ ಕುಂಡಲಿನಿ ಶಕ್ತಿ ಆ ಕುಂಡಲಿನಿ ಶಕ್ತಿಗೆ ದಳ ಸಹಸ್ರದೊಳಗ ನಿಲ್ಲಿಸಿ ಪಶ್ಚಿಮ ಗಿರಿಯಡೆಗೆ ನೋಡು ಕರ್ಪುರದಂಗ ಉರಿ ಎದ್ದ ಬಿಡ್ತಾದ.

(ಪಣತಿಗೆ ದಿಟ್ಟಿಸಿ ನೋಡಿದಾಗ ದೀಪ ಬೆಳಗುವದು)

ನೋಡ ಮಗನ ಹ್ಯಾಂಗ ಹತ್ತಿತು ದೀಪ ? ದೀಪದ ಕಡ್ಡೀನ ನೀನಾದಾಗ ಮತ್ತ್ಯಾವ ದೀಪದ ಕಡ್ಡಿ ತರ್ತಿಯೋ ಮಗನ. ಪುಂಗಿ ಉದ್ತೀನಿ ಹ್ಯಾಂಗ ಬರ್ತಾವ ನೋಡು ಹಾವುಗಳು (ತನ್ನ ಬಾಯಿಯಿಂದ ಪುಂಗಿ ಊದುವನು ಹಾವುಗಳು ಬರುವವು ಆಡಿಸುವನು ನಂತರ ಕುಂತಾಗ ಮೈ ಮೇಲೆ ಹರಿದಾಡುವವು) ಹೋಗ್ರಿನ್ನ (ಎಲ್ಲಾ ಹಾವುಗಳು ಹೋಗುವವು)

ಮಲ್ಲೇಶಪ್ಪ : ತಂದೆ! ಶಿವಲಿಂಗೇಶ ಆದಿ ಅನಾದಿಗೆ ಅತೀತನು ನೀನು, ವೇದ ಓದುಗಳಿಗೆ ಮೀರಿದವನು ನೀನು.

ಶಿವಲಿಂಗೇಶ : ಉಂಕಿಯ ನಿಗುಚಿ ಸರಿಗೆಯ ಸಮಗೊಳಿಸಿ ಸಮಗಾಲನಿಕ್ಕಿ ಅಣಿಯೊಳು ಏಳು ಮೆಟ್ಟಿದೆ. ಹಿಡಿದ ಲಾಳಿಯ ಮುಳ್ಳು ಕಂಡಿಕೆಯ ನುಂಗಿತ್ತು, ಈ ಸೀರೆಯ ನೇಯ್ದವ ನಾನೋ ನೀನೋ ರಾಮನಾಥ *(ನಗು)*

ಮಲ್ಲೇಶಪ್ಪ : ನೇಯ್ಗೆಯ ವೃತ್ತಿ ಮಾಡಿದವನು, ಕಾಯಕ ಮಾಡುತ್ತ ಕಾಯ ಭಾವವನ್ನು ಕರಗಿಸುವದರ ಮೂಲಕ, ಲೋಪದೋಷಗಳನ್ನ ಖಂಡಿಸುವದರ ಮೂಲಕ, ಅಹಂಕಾರ, ನಾಸ್ತಿಕತೆ ಪರನಿಂದೆ, ಪರದಾರಗಳನ್ನು ಖಂಡಿಸಿ ಬಂದವನು ಈತ.

ಶಿವಲಿಂಗೇಶ : ಇಳೆ ನಿಮ್ಮ ದಾನ, ಬೆಳೆ ನಿಮ್ಮದಾನ, ಸುಳಿದು ಸೂಸುವ ಗಾಳಿ ನಿಮ್ಮದಾನ, ನಿಮ್ಮ ದಾನವನುಂಡು ಅನ್ಯರನು ಹೊಗಳುವ ಕುನ್ನಿಗಳ ನೇನೆಂಬೆ ರಾಮನಾಥ....

ಮಲ್ಲೇಶಪ್ಪ : ನಮಗೆ ಅನ್ನ ನೀಡುವ ಒಡೆಯ ಶಿವನಿರುವಾಗ ಅನ್ಯರಿಗೆ ತಲೆಬಾಗಿ ಅವರನ್ನೇ ಹೊಗಳಿ, ಸ್ವಂತಿಕೆಯನ್ನ ಮಾರಿಕೊಂಡು, ಸ್ವಾಭಿಮಾನ ಕಳೆದುಕೊಂಡು ಜೀವಂತ ಶವಗಳಾಗಿ ಬದುಕುವವರು ಕುನ್ನಿಗಳೆ ಸರಿ, ಎಂದು ಹೇಳಿದ ಮುದನೂರ ದೇವರ ದಾಸಿಮಯ್ಯನ ವಚನ ಸಾರವೇ ನೀನು. ಶಿವ ಸಾಕಾರ ಸ್ವರೂಪವೇ ನೀನಾಗಿ ಬಂದು ಅಂಬಲಿ ಕಂಬಳಿ ಆಸ್ತಿ ಮಿಕ್ಕಿದ್ದೆಲ್ಲ ಜಾಸ್ತಿ ಎಂದು ಒಟ್ಟಿದ ನೋಟುಗಳನ್ನು ಸುಟ್ಟು ಕರಕಾಗಿಸಿದೆ. ಕೊಂಡವರ ಸಾಲ ಕೇಳದಂತೆ ಮಾಡಲು ಅವರಿಂದ ಬರೆಯಿಸಿಕೊಂಡ ವತ್ತು ಪತ್ರಗಳನ್ನ ಸುಟ್ಟು ಹಾಕಿಸಿದೆ. ದೇಹದೊಂದಿಗೆ ಬಂದ ಹಸಿವು ಹುಸಿತನು ವ್ಯಸನ ಎಲ್ಲವೂ ನಾಶಗೊಳಿಸಿ ನಿನ್ನೊಳಗೆ ಮಾಡಿಕೊಂಡೆ.

ಶಿವಲಿಂಗೇಶ : ಕೋಣಿನ ಕಾಶಮ್ಮಗ ಜಡ್ಡಾಗಿ ಮಲಗಿ ಬಿಟ್ಟಾಳ, ಎಷ್ಟು ದಿವಸಾಂತ ಹೊರಸಿನ ಮ್ಯಾಲ ಮಲ್ಕೊಂತಾಳ ನಡ ಬೆನ್ನಿಗಿ ಗುದ್ದಿದರ ತಾನ ಎದ್ದ ಕುಂದ್ರತಾಳ. ನಡಿಯಲೇ ಮಲ್ಲೇಶಿ ಹೋಗುನ ನಡಿ ಅದು ಅಲ್ಲದ ಅದೇ ಖಣದಾಳದ ಶಿವಶರಣ ಕೋಬಾಳನ ಭವಿಷ್ಯ ಚೆನ್ನಾಗಿಲ್ಲ. ನಾಳಿಗಿ ಅಂಗಡಿ ತೆರಿ ಬ್ಯಾಡಂತ ಹೇಳೂನ ನಡಿ ಅಂಗಡಿ ತೆರದ್ರ ಕರಿನಾಗರ ಕಚ್ಚಿ ಸಾಯ್ತಾನ.

ಮಲ್ಲೇಶಪ್ಪ : ಅವರ ಮುತ್ಯಾ ಭಾಳ ಶ್ಯಾಣ್ಯಾ ಅದಾನ್ರಿ, ಅವನ ಭವಿಷ್ಯ ಗೊತ್ತಾಗಿ ಇನ್ನು ಅವ್ನಿಗಿ ಮದ್ವಿನೇ ಮಾಡ್ಹಿಲ್ಲರಿ ಅದು ಅಲ್ಲದ ಹಾಂವು ಇಷ್ಟೆ ವರಷಕ್ಕ ಕಚ್ಚತಾದಂತ ತಿಳಿದು ತಲ ಬಾಗಿಲ ಮ್ಯಾಲ ಅಗಟ್ಯಾಗ ಗಿಡ ಹಚ್ಚಿ ಬಿಟ್ಟಾನ್ರಿಯಪ್ಪಾ

ಶಿವಲಿಂಗೇಶ : ಏನಿದ್ದರೂ ಎದ್ಕ ಬಂತಲೇ ಹುಡುಗ ಅನರ್ಥ ಸಾಯ್ತಾದ ನಾಳಿಗಿ ಒಂದಿವ್ಸ ಬಾಗಿಲ ತೆರಿಲಿಕ್ರೆ ಬಂದ ಪೀಡಾ ಕಡದ ಹೋಗ್ತಾದ

ಮಲ್ಲೇಶಪ್ಪ : ಭವಿಷ್ಯ ಬಲ್ಲ ಭಗವಂತನೇ ನೀರುವಾಗ... ನಿನಗರಿಯದ ವಿಷಯ ಯಾವದಿದೆ ತಂದೆ

ಶಿವಲಿಂಗೇಶ : ಅರಿವುನೊಳಗಿದ್ರು ಅದು ಮರಿವು ಮಾಡ್ತಾದ. ಜಾಗ್ರದೊಳಗಿದ್ರು ಉಗ್ರರೂಪ ತಾಳಿ ನುಗ್ಗಿ ನುಚ್ಚು ನೂರು ಮಾಡ್ತಾದ. ವಿಧಿಯ ಕೈ ಹಿಡಿದವರಿಲ್ಲ, ಅದ್ಕ ಬಗ್ಗ ಬಡದವರಿಲ್ಲ ಅಂಥಾ ಹರಿಗೆ ಹತ್ತು ಭವದೊಳಗ ಉರುಳಾಡಿಸಿ ಬಿಟ್ತಾದ ವಿಧಿ. ಬ್ರಹ್ಮನ ಶಿರ ಕಡಿಗಿ ಮಾಡ್ಯಾದ ವಿಧಿ, ಶಿವನಿಗಿ ಕಪಾಲವ ಓಡಿದು ತಿರಿದುಣ್ಣಾಕ ಹಚ್ಯಾದ ವಿಧಿ ಅಂಥವರ ಪಾಡ ಹಂಗಾದ್ಮ್ಯಾಲ ಈ ಜಗತ್ತಿನ ಪಾಡೇನಲೇ *(ನಗು)* ಹಗ್ಗಾ ಹೊಸಿಬೇಕು, ಮಗ್ಗಾ ಕಟ್ಟಬೇಕು, ನೇಯ್ಗಿ ಮಾಡಬೇಕು, ಹಿಗ್ಗಿನಿಂದ ಜಗದ ಸುಗ್ಗಿ ಮಾಡಬೇಕು. ನುಗ್ಗಿ ಹುಗ್ಗಿ ಹೊಡಿಬೇಕು ಆದರೂ ಕಡಿಮೆ ಉಣ್ಣು, ಕಡಿಮೆ ಮಾತಾಡು, ಕಡಿಮೆ ಮಲಗು, ಅಜ್ಞಾನಿಗಳ ಜೊತೆಗೆ ಸೇರದಿರು, ದೇವರ ಧ್ಯಾನದಲ್ಲಿ ತಲ್ಲೀನನಾಗಿರು, ನೀನು ಸಣ್ಣವನೆಂಬ ಪ್ರಜ್ಞೆ ನಿನಗಿರಲಿ, ಅಂತ ಸೂಫಿಸಂತ ಹಜರತ್ ಖಾಜಾ ಬಂದೇನವಾಜರು ಅಪ್ಪಣಿ ಕೊಡಿಸ್ಯಾರ *(ಸಿಟ್ಟಿನಿಂದ)* ಗಪ್ಪಾಗೋ ಮಗನ ಉಪ್ಪುಂಡವರ ಮಾತು ರೇಗಸ್ತಾದ, ಸಪ್ಪಂದು ಊಟಾ ಮಾಡದವರ ಮಾತು ಬಾಗಸ್ತಾದ, ಶಾಂತ ಸಮುದ್ರ ಆಗಬೇಕು *(ಹಾಡುತ್ತ)*

ಹಕ್ಕಿ ಹಾರುತಾದ ನೋಡಣ್ಣಾ ಈಜಗಕೆ ಬಂದು।

ಮಿಕ್ಕಿ ಸಂಸಾರ ಮಾಡತಾದಣ್ಣಾ *(ಹಾಡುತ್ತಾ ಹೋಗುವನು)*

ಪ್ರವೇಶ – ೨೨

ದೃಶ್ಯ ರಸ್ತಾ

ಬಸವಂತಪ್ಪ : *(ಹಾಡುತ್ತ)*

ಗುರುವಿನ ಗುರ್ತಿಹಿಡಿಯೋ ನರನೇ

ಅರವಿನಿಂದ ನಡಿಯೋ ॥

ಪಾರಮಾರ್ಥದಲ್ಲಿ ದುಡಿಯೋ,

ಪ್ರಪಂಚದ ಮೋಹದ ಮೂಲವಕಡಿಯೋ,
ಪರಮುಕ್ತಿ ಪಡಿಯೋ ಪಡಿಯೋ ಪಡಿಯೋ.

ಅಂಗ, ಮಣ್ಣು, ಲಿಂಗ, ಮರ ಜಂಗಮ, ಹಣ್ಣು, ವಿಶ್ವಪರಿಪೂರ್ಣವಾದ ಹಣ್ಣಿನ ರಸಪಾಕವನ್ನು ತಿಂದವನೇ ಶಿಷ್ಯೋತ್ತಮ, ಶರಣರ ಸಮರಸವಾದ ಸೊಗಸಿನ ಸೂಳ್ನುಡಿಗಳು ನುಡಿದ ಘನ ಗಂಭೀರ ಗೀರ್ವಾಣವಾಣಿ ಭಾವದ ಕೊನೆಯ ಮೊನೆಯ ಮೇಲೆ ಸ್ಪಂಧಿಸಿದ ಚರಚೇತನ. ಸಾಕ್ಷಾತ್ಕಾರಿ ಶಿವಲಿಂಗೇಶ ಸಾಕು ನಿನ್ನ ಲೀಲಾವಿನೋದ ? ಪೂರ್ವ ಶ್ರಯದ ಪ್ರವೃತ್ತಿಗಳಿಂದ ನಿವೃತ್ತಿಗೊಂಡ ನಿಶ್ಚಿಂತ ಚೇತನದ ಚಲುವಲ್ಲರಿ ಯಲ್ಲರಳಿದ ಅರಳ ಪರಿಮಳವನ್ನ ದಿಗ್ ದೆಶೆಗೂ ಹಂಚಿದೆ. ಈ ನಿನ್ನ ಪ್ರವೃತ್ತಿ ಯಾವ ಪುಸ್ತಕಗಳಿಲಿಲ್ಲ ನೀ ಸಂಪಾದಿಸಿದ ಸೊಂಪುನ್ನುಂಡು ನನ್ನ ಹೃದಯ ಹಂಪಿಯಾಗಿದೆ ತಂದೆ ಕಂಪು ಸೂಸುತಿದೆ.

ಚನ್ನಬಸಯ್ಯ : ಓಹೋ! ಹತಗುಂದಿ ಬಸವಂತಪ್ಪ ಗೌಡರು, ಕವಿಗಳು

ಬಸವಂತಪ್ಪ : *(ನಮಸ್ಕರಿಸಿ)* ನಮಸ್ಕಾರ ! ಈ ನಾಡಿನ ಪುಣ್ಯಹಣ್ಣಾಗಿದೆ. ಅಂತೆಯೇ ಸಿದ್ಧ ಪುರುಷ ನನ್ನ ಬರಮಾಡಿಕೊಂಡಿದೆ.

ಚನ್ನಬಸಯ್ಯಾ : ಯಾರು ಆ ಸಿದ್ಧಪುರುಷರು ?

ಬಸವಂತಪ್ಪ : ಮತ್ತಾರು ? ಸಾಧು ಶಿವಲಿಂಗೇಶ್ವರರು ಅವರ ದರುಶನಕ್ಕಾಗಿ ತಿರುಗುತ್ತಿರುವೆ.

ಚನ್ನಬಸಯ್ಯಾ : ತಾವುಗಳು ಗುಂಡೇರಾವ ಮಹಾರಾಜರ ಶಿಷ್ಯರಲ್ಲವೇ ?

ಬಸವಂತಪ್ಪ : ನಿಜ! ಚನ್ನ ಬಸಯ್ಯಾ ಸ್ವಾಮಿಗಳೇ ಗುಂಡೇರಾವ ಮಹಾರಾಜರ ಕರಣ ಪ್ರಸಾದ ಪಡೆದುಕೊಂಡರು. ಆವರ ಸ್ವರೂಪವೇ ಸಾಧು ಶಿವಲಿಂಗೇಶ್ವರರಲ್ಲಿ ಕಂಡುಕೊಂಡಿದ್ದೇನೆ. ಅವರಲ್ಲಿ ಭೇದವಿಲ್ಲ ಅಭೇದ ಸ್ವರೂಪಿಗಳು.

ಚನ್ನಬಸಯ್ಯ : ತಿಳಗೂಳದ ಅಮರಪ್ಪ ಗೌಡರು ಗುಂಡೇರಾವ ಮಹಾರಾಜರ ಶಿಷ್ಯರಾಗಿದ್ದರೂ ಅವರು ಅಬ್ಬೇತುಮಕೂರಿನ ಶೂನ್ಯ ಸಿಂಹಾಸನಾಧೀಶ್ವರ ಘನ ಪಂಡಿತ ವಿಶ್ವಾರಾಧ್ಯರನ್ನೇ ತಮ್ಮ ಆರಾಧ್ಯ ದೈವವನ್ನಾಗಿರಿಸಿಕೊಂಡು ಅನೇಕ ತತ್ವ ಗೀತೆಗಳನ್ನು ಈ ನಿಟ್ಟಿಗೆ ಹಂಚಿದ್ದಾರೆ. ನೀವು ಸಾಧು ಶಿವಲಿಂಗೇಶ್ವರರ ಕುರಿತು ತತ್ವಗೀತೆಗಳನ್ನು ಬರೆದು ಪ್ರಸ್ತುತ ಪಡಿಸಿದ್ದೀರಿ.

ಬಸವಂತಪ್ಪ : ನೀವೇನಾದರೂ ಗುರುಮಹಾರಾಜರಿಗೆ ಕಂಡಿದ್ದೀರಾ ಚನ್ನಬಸಯ್ಯ ಸ್ವಾಮಿಗಳೇ

ಚನ್ನಬಸಯ್ಯ : ಖಣದಾಳದಲ್ಲಿಯೇ ಇದ್ದಾರೆ ಅಂತ ಸುದ್ದಿ ಕೇಳಿ ಹೊರಟಿರುವೆ.
ಬಸವಂತಪ್ಪ : ಖಣದಾಳದಲ್ಲಿ ದೊಡ್ಡ ಪವಾಡವೇ ಮಾಡಿದ್ದರಂತೆ ಕೇಳಿ

ಹಾಡು

ನೋಡು ನೋಡಲ್ಲಿ ಬೆಳಗುವದು ಜ್ಯೋತಿ ।
ಖಣದಾಳದ ಮನೆಗಳಲ್ಲಿ ಲೀಲಾ ಮೂರ್ತಿ ।
ಶಿವಲಿಂಗನ ಕೀರ್ತಿ

ಬಚ್ಚಲದ ನೀರೇ ಗಂಗೆ ತುಂಗೆ ಯಾಯಿತು
ಬಚ್ಚಲದ ನೀರೇ ಅಚ್ಯೋದಕ ವಾಯಿತು
ಬಚ್ಚಲದ ನೀರೇ ಔಷಧವಾಯಿತು
ಬಚ್ಚಲದ ನೀರೇ ನಿರಾಕಾರವಾಯಿತು

ಹನುಮಂತ ಗುಡಿಯ ಮಂದಿ ನಾಯಿ ಮಲಗಿತ್ತು
ಎತ್ತಿ ಕಲ್ಲು ಹಾಕಿದಾಗ ಸತ್ತು ಹೋಯಿತು
ಮರುದಿವಸ ಬಂದು ನೋಡಲಲ್ಲೇ ಬಿದ್ದಿತ್ತು
ಎದ್ದು ಹೋಗೆನಲು ಅದು ಓಡಿ ಹೋಯಿತು

ಕೂಬಾಳದ ಶಿವ ಶರಣಗ ಕದವ ತೆರಿಬೇಡೆಂದ
ತೆರೆದರೆ ಕರಿನಾಗರ ಕಚ್ಚುವ ದೆಂದುಸಿರಿದ
ಹುಚ್ಚನ ಮಾತು ಮೀರಿ ಕದವ ತೆರೆದ
ಹಾವು ಕಚ್ಚಿ ತೆಂದು ಜೋರಾಗಿ ಚೀರಿ ಸಾವಪ್ಪಿದ್ದ

ಅಪಚಂದಿಯವರಶಿಶು ಬಸವನಿಗೆ ಕಾಯಿಲೆ
ಕೊರಳತುಂಭಕಟ್ಟಿದ್ದರು ಕರಿದಾರ ಯಂತ್ರ ಮಾಲೆ
ಶಿಸುವಿಗೆತ್ತಿ ಒಗೆದನು ತಿಪ್ಪಿಯಾಗುಂಡಿಯಲಿ
ರೋಗ ಅಳಿದು ಹೋಯ್ತು ನಿರೋಗಿ ಅಲ್ಲಿಂದಲೆ
ಶಿವಲಿಂಗೇಶನಲೀಲೆ

ಚಂದಮ್ಮ ತಾಯಿಯೊಡನೆ ಬೀಸಿದನು ದಿಗಂಬರ
ಪರುಷ ಬಟ್ಟಲಿವನಿತ್ತ ದಾಸೋಹ ಗೈಯು ನಿರಂತರ
ಕೋಣೆನ ಕಾಶಮ್ಮನ ರೋಗ ಕಳೆದ ಚಿದಂಬರ
ಎಣ್ಣೆ ಕಾಯ್ದ ಕಡಾಯಿಯೊಳಗ ಕರವಿಟ್ಟ ಮಂದಾರ
ಆಲ್ದಾಳೀಶ ಸ್ವರೂಪ ಈಹರ

ಚನ್ನಬಸಯ್ಯ : ಇಂಥ ಪುಣ್ಯ ಪುರುಷರು ನೂರೊಕ್ಕೊಬ್ಬರು, ಸಾವರಿಕ್ಕೊಬ್ಬರು ಅಲ್ಲಲ್ಲ ಕೋಟಿಗೊಬ್ಬರು ಬನ್ನಿ ಹೋಗೋಣ. ಕಾಶೀಮ ಸಾಹೇಬನಿಗೂ ಹುಡಕಲಿಕ್ಕೆ ಕಳುಹಿಸಿರುವೆ. ಇಟಗಿ ರಾಮರಾವ ಕುಲಕರ್ಣಿಯವರೂ ಕೂಡಾ ಹುಡುಕಾಡಲು ಹಚ್ಚಿದ್ದಾರೆ.

ಬಸವಂತಪ್ಪಾ : ಬಹುತೇಕ ಸಾಧು ಶಿವಲಿಂಗೇಶ್ವರರು ಮರತೂರಿಗೆ ಹೋಗಿರಬಹುದು ಅಂತ ನನ್ನ ವಿಚಾರ.

ಚನ್ನಬಸಯ್ಯ : ಹಂಗಂತ ಈ ನಿಟ್ಟಿನ ಹೊಲದ ಬನ್ನಿ ಗಿಡಗಳಲ್ಲಿ ಆ ಮಹಾತ್ಮನ ಸಲುವಾಗಿ ಬುತ್ತಿ ಕಟ್ಟಿರುತ್ತಾರೆ. ಆ ಕಟ್ಟಿದ ಬುತ್ತಿ ಯಾವ ಮಾಯದಿಂದ ಅಲ್ಲಿಗೆ ಹೋಗಿ ಉಂಡು ಹೋಗಿರ್ತಾನ ನೋಡ್ರಿ.

ಕಾಶೀಮಸಾಬ : ಮರತೂರ ನಂದೂರ ಹಿಡ್ಕೊಂಡು ಕೆಸರಟಗಿತನ ಹೋಗಿ ಬಂದಿನ್ರಿ ಸಿಗಲಿಲ್ರಿ ಸ್ವಾಮಿಗಳು. ಇನ್ನಾ ಇದೇ ನೋಡೀನಿ ಅಂತ ಹೇಳ್ತಾರೆ. ಹುಡುಕಿದರ ಸಿಗವಲ್ಲ. ನಮ್ಮೂರ ಇಟಗಿ ಪುಣ್ಯ ಜಬರ ಇತ್ತಂದ್ರ ತಾನ ಬರತಾನ ನಡಿರಿ *(ಹೋಗುವರು)*

ಪ್ರವೇಶ – ೨೩

ದೃಶ್ಯ ಸ್ಮಶಾನ

(ಸಮಾಧಿಯ ಮೇಲಿರುವ ಹೂವುಕೊರಳಿಗೆ ಹಾಕಿಕೊಂಡು ಕೈಯಲ್ಲಿ ಸಮಾಧಿಯ ಮೇಲೆ ಚುಚ್ಚಿದ ಬಿದರಿನ ಹಸ್ತ ಹಿಡಿದು ಇಟಗಿ ಪ್ರವೇಶ.)

ಶಿವಲಿಂಗೇಶ : ಸಾಯುವವನು ನಾನು, ಆಳವನು ನಾನು ಮತ್ತ ಹುಟ್ಟಿ ಬರುವವನು ನಾನ. ಸತ್ತ ಗೋರಿ ಮ್ಯಾಲ ಬೆಳದ ಹುಲ್ಲಿನ ಕಡ್ಡೀನೂ ನಾನ. ನಾನೇ ಪೃಥ್ವಿ, ನಾನೇ ಅಪ್ಪು, ನಾನೇ ತೇಜ, ನಾನೇ ವಾಯು, ನಾನೇ ಆಕಾಶ *(ನಗು)* ಈ ಪಂಚತತ್ವಗಳ ಕುಂಡವೇ ಈ ದೇಹ. ನಾನು ನಾನು ನಾನು ನಾನು ಎಷ್ಟೈತಲೇ ನಿನಗ ಅಹಂಕಾರ ಈ ನಾ ಒಂದ ಕಳದರ ನೀನೆ ಪರಬ್ರಹ್ಮ. "ಏಕದೊಳಗನೇಕಂ ಅನೇಕ ದೊಳಗೇಕಂ" ಸ್ವೀಕರಿಸಿ ತಾನದರೊಳೊಂದೊಂದುವರೆದು ಸಾಕಲ್ಯದಿಂದೆಲ್ಲ ನೋಡುವಾತ್ಮಜನಿಗೆ ಶೋಕ ವೈರಿಗಳಲ್ಲಿ ಮರುಳ ಮಾನವಾ. *(ಕುಣಿಯುತ್ತ)* ಕೆಂವಸ್ಯೆ ಭಂವಸ್ಯೆ ದಿಗ್ ದಿಗ್ಗಾಂವಿ ಸಂಗ್ ಸಂಗಾವಿ ಅಲಾಯಿ ಆಡಬೇಕು ಬಲಾಯಿ ತಗೊಬೇಕು,

ಮಲಾಯಿ ಹೊಡಿಬೇಕು. ಬಾರೆ ಬಾರೆ ಬಸಲಿಂಗಿ ಕಿತ್ತೋಣಬಾರೆ ಮುಲ್ಲಂಗಿ, ಕೊಡ್ತೇನಿ ಬಾರೆ ಚೆನ್ನಂಗಿ *(ಹುಡುಗರು ಬರವರು)* ಹೂವಿನೊಳಗ ಪರಿಮಳ, ಹಣ್ಣಿನೊಳಗರುಚಿ ಬೆಲ್ಲದೊಳಗ ಸಿಹಿ, ಹುಡುಗರೊಳಗ ಶಿವ ಶಿವ ಶಿವ ಶಿವ ಶಿವಾಯ ನಮಃ, ಹರ ಹರ ಹರ ಹರಾಯ ನಮಃ *(ಹುಡುಗರು ಅನ್ನುತ್ತ ಆತನ ಸುತ್ತ ಕುಣಿಯುವರು)* ಮನ ಶುದ್ಧವಿಲ್ಲದವರಿಗೆ ದ್ರವ್ಯದ ಬಡತನವಲ್ಲದೇ ಚಿತ್ತ ಶುದ್ಧದಲಿ ಕಾಯಕವ ಮಾಡುವಲ್ಲಿ ಸದಭಕ್ತಂಗೆ ಎತ್ತ ನೋಡಿದತ್ತ ಲಕ್ಷ್ಮಿ ತಾನಾಗಿಪ್ಪಳು. ಮಾರಾಯ್ಯ ಪ್ರೀಯ ಅಮರೇಶ್ವರ ಲಿಂಗದ ಸೇವೆಯುಳ್ಳನ್ನಕ್ಕ *(ನಕ್ಕು)* ನಿಜ ಮನವೇ ಎಲ್ಲಕ್ಕೂ ಕಾರಣ. ಸಿರಿತನ, ಬಡತನಗಳಿಗೂ ಸುಖ ದುಃಖಗಳಿಗೂ ಬಂಧ ಮೋಕ್ಷಗಳಿಗೂ ಮನವೇ ಕಾರಣ. ಮನ ಅಶುದ್ಧವಾಗದ್ದಲ್ಲಿ ಬಡತನ, ದಾರಿದ್ರ್ಯ ಇಲ್ಲದ ಬಂಧಗಳ ಶೆಳವಿನ ಸುಳಿಯೊಳಗ ಸಿಕ್ಕು ಪೇಚಾಡ ಬೇಕಾಗುತ್ತದೆ. ಅದೇ ಮನಶುದ್ಧವಾಗಿಟ್ಟು ಕಾಯಕ ಮಾಡಿದ್ರ ಕೈಲಾಸವೇ ನಿನ್ನ ಹತ್ತಿರ ಬರ್ತಾದ, ನೋಡ್ರಿ, ಸತ್ತವರ ಸಮಾಧಿಗಳಿವು ಇದ್ದವರ ಸಮಾಧಿ ಊರೊಳಗ ಅದಾವ, ಧೋಲ್ಯೋ, ಧೂಲ್ಯೋ ಕೆಂವಸ್ಯೆ ಭಂವಸ್ಯೆ ದಿಗ್ ದಿಗ್ಗಾವಿ ಸಂಗ ಸಂಗಾವಿ ಸತ್ತು ತಿಳಿಯೋ ಗೊತ್ತು. ಎತ್ತ ನೋಡಿದರತ್ತತ್ತ ಒದರುತ್ತಲಿತ್ತು. ಸತ್ತಂವ್ಗಸಾವಿಲ್ಲ. ಹೊತ್ತಂವ್ಗ ಜೀವಿಲ್ಲ *(ನಗುತ್ತ)* ಇದು ಇದ ಇಟಗಿ ಹಿರೇಮಠದ ಗುರುತಾಯಿ ಶರಣಮ್ಮ ತಾಯಿದು ಆ ತಾಯಿ ಆಶೀರ್ವಾದ, ತಾಯಿ ನಿನ್ನ ಉಪಕಾರವನು ಮರೆಯಲೆಂತು ನಾನು.

ಚನ್ನಬಸಯ್ಯ : ರಾಮರಾವ ಕುಲಕರ್ಣಿಯವರ ಯಾವದೇ ವಸ್ತುವಿಗಿ ನಾವು ಆಶಾಪಟ್ಟು ಹುಡುಕಾಢಿದರ ಅದು ಸಿಗೂದಿಲ್ಲ. ಅದೇ ನಿರಾಶಾ ಭಾವದಿಂದ ಮನಶುದ್ಧವಾಗಿದ್ದಲ್ಲಿ ಸಿಗಲಾರದ ವಸ್ತು ತಾನಾಗಿಯೇ ಒದಗ್ತಾದ ಅನ್ನೋದಕ್ಕ ಇಂದಿನ ದೃಶ್ಯವೇ ಸಾಕ್ಷಿ.

ರಾಮರಾವ : ನಿಜ ಚನ್ನ ಬಸಯ್ಯನವರೇ ನಿಮ್ಮ ಮಾತು ಅಕ್ಷರಸಹಜ. ಮನಶುದ್ಧವಾಗಿದ್ದ ಪ್ರಲ್ಹಾದಗ ಕಂಬದಲ್ಲೇ ಆ ನರಸಿಂಹ ಪ್ರತ್ಯಕ್ಷನಾದ. ಕರಿಮಕರಿಗೆ ಸಿಕ್ಕ ಬಳಲುತ್ತಿರುವಾಗ ಕೃಷ್ಣ ಎಂದು ಕೂಗಿದಾಗ ಶ್ರೀಹರಿ ಪ್ರತ್ಯಕ್ಷನಾದ. ಮನ ಪ್ರಸನ್ನವಾಗಿದ್ದಲ್ಲಿ ಮಹಾದೇವ ಹತ್ತಿರದಲ್ಲಿಯೇ ಇರತಾನೆ.

ಕಾಶೀಮಸಾಬ : ಸುತ್ತ ಹತ್ತ ಹರದಾರಿವರೆಗೂ ಹುಡುಕಿ ಬಂದ್ರು ಸಿಗಲಾರ್ದಂವ ತನ್ನಿಂದ ತಾನ ಬಂದಾನ ನಮ್ಮ ಇಟಗಿ ಪುಣ್ಯ ಜಬರದಸ್ತ ಐತಿ, ಇದ್ಕ ನೀವೇನಂತೀರಿ.

ಚನ್ನಬಸಯ್ಯ : ನಮ್ಮ ಇಟಗಿಯ ಪುಣ್ಯದ ಹಣ್ಣು ಪರಿಪಕ್ವ ಆಗೇತೋ ಕಾಶೀಮ ಅಂದಲ್ಲೆ ಕೈಲಾಸ ಪತಿ ಕಲ್ಮೇಶ್ವರನು ಇಟಗಿಯಲ್ಲಿ ನೆಲೆಸಿದ; ಸೂಫಿಸಂತ ಹಜರತ್ ಸುಲ್ತಾನ ಬಾಷಾ ಖಾದರಿಯವರು. ಬಗದಾದನಿಂದ ಸಂಚರಿಸುತ್ತ ಈ ಇಟಗಿಗೆ ಬಂದು ನೆಲೆಸಿದರು; ಅದರಂತೆ ಪ್ರಣವ ಪುಣ್ಯ ಪುರುಷ ಸಾಧು ಶಿವಲಿಂಗೇಶ್ವರರು ಇಟಗೆಗೆ ಪಾದರ್ಪಣ ಮಾಡಿದ್ದಾರೆ. ಇದು ಜನುಮ ಜನ್ಮಂತರದ ಪುಣ್ಯ ವಿಶೇಷವೇ ಸರಿ.

ಕಾಶೀಮಸಾಬ : ಖಣದಾಳ ಹುಲ್ಲೆಪ್ಪ ಹರಿಜನ ಮೊದಲ ಎಟ್ಟಿ, ಯಾರ್‍ಯಾರಿಗೂ ಅಂಜಲಾರ್ದಂವ. ಊರಿಗೆ ಮೀರಿದಂವ. ಸಾಧು ಶಿವಲಿಂಗೇಶ್ವರರು ಅವನ ಹತ್ತರ ಹೋಗಿದ್ದಾಗ ಹೀಯಾಳಿಸಿ ಹೊರಗಟ್ಟಿ ಬಿಟ್ಟನಂತ. ನಿನಗ ನಿನ್ನ ಮಗನಿಂದಲೇ ಮರಣ ಆಗ್ತಾದ ಅಂತ ಹೇಳಿ ಖಣದಾಳ ಬಿಟ್ಟ ಬಂದಾನ್ರಿ ನಮ್ಮ ಮುತ್ತ್ಯಾ ಕೆಲವೇ ದಿವಸದಾಗ ಅವ್ನ ಮಗನೇ ಸತ್ತಹೊಡದ.

ಚನ್ನಬಸಯ್ಯ : ಶರಣರ ವಾಣಿ ಎಂದೂ ಸುಳ್ಳಾಗುವದಿಲ್ಲ. ಕಾಶೀಮಸಾಬ ಶರಣರು ಮನಿಗೋಳ್ಗಿ ಕರಿಲಾರ್ದ ಹೋಗಬೇಕಾದ್ರ ಆ ಮನೆತನದ ಭವಿಷ್ಯ ಬಲ್ಲವರಿರ್ತಾರ ದರಿದ್ರತನ ದೂರ್‍ಮಾಡ ಬರಬೇಕಂತ ಹೋಗಿರತಾರ. ಆದರ ಅವರಿಗಿ ತಿಳ್ಯಾಂಗಿಲ್ಲ ಹುಚ್ಚ ಅಂತ ಕಲ್ಲ ಹಚ್ಚತಾರ ಅದೇ ಹುಚ್ಚನ ಮಾತಿಗಿ ಅಲಕ್ಷ್ಯ ಮಾಡೇ ಕೋಬಾಳ ಶಿವಶರಣ ಕರಿನಾಗರ ಕಚ್ಚಿ ಸಾಯಲಿಲ್ಲಾ? ಅದೇ ಖಣದಾಳದಾಗ ಕೋಟ್ನೂರ ಶ್ರೀಮಂತಪ್ಪ ಶೆಟ್ಟಿ ಸಾಧು ಮುತ್ತ್ಯಾನ ಜಟಾ ಮುಕುಟ ತೆಗಿಸಿ ಶಾಪಕ್ಕ ಗುರಿಯಾಗಲಿಲ್ಲ ? ವರ್ಷೊಪ್ಪತ್ತ್ಯಾಗ ನಿನ್ನ ಮಗನಿಂದನ ನಿನಗ ಮರಣ ಅಂತ ಹೇಳಿದ ಪ್ರಕಾರ ಮೊನ್ನೆ ಮೊನ್ನೆ ಅವ್ನ ಮಗನೇ ಹೊಡದ ಹಾಕಿ ಬಿಟ್ಟ, ಹಿಡ್ಕೊಂಡ ಹ್ವಾದ ಶರಬಣ್ಣಾ ಹೊಟ್ಟಿ ಬ್ಯಾನಿ ಎದ್ದ ಸತ್ತ ಹ್ವಾದ. ಹಡಪದ ಶರಣಪ್ಪನ ವಂಶನ ನಿರ್ವಂಶ ಆಗಿ ಹೋಯ್ತು. ಇನ್ನ ತನಕ ಆ ಊರಿಗಿ ತಲಿಮಾಡಾಕ ಯಾರೂ ಇಲ್ಲ ಕಲಬುರ್ಗಿಗೆ ಹೋಗಿ ಮಾಡಿಸ್ಕೊಂಡು ಬರತಾರಂತ.

ರಾಮರಾವ : ಇನ್ನೊಂದು ಸುದ್ದಿ ಕೇಳಲ್ಲೇನು ಚನ್ನಬಸಯ್ಯಾ ಖಣದಾಳದ ಚಿನ್ಮಳ್ಳಿ ಸಿದ್ದಪ್ಪ ಸಾಹುಕಾರ ಭೀಮಣ್ಣ ಹೂಗಾರ ಅಣ್ಣಪ್ಪ ಗೌಡ್ರು ಕೂಡಿಕೊಂಡು ಅಬ್ಬೇ ತುಮಕೂರ ವಿಶ್ವಾರಾಧ್ಯರ

ಹತ್ತಿರ ಹ್ವಾದಾಗ ವಿಶ್ವಾರಾಧ್ಯರು ಮನಿಗಂಡಗ ಬಿಟ್ಟು ಮತ್ತೊಬ್ಬ ಗಂಡಗ ಹುಡಕಾಡಾಕ ಹತ್ತೀರ್ಯಾ ಮಕ್ಕಳ ಹೋಗ್ರಿ ಅಂತ ಬೈದು ಕಳಿಸಿದ್ರಂತ. ಇಲ್ಲಿ ಸಾಧು ಶಿವಲಿಂಗೇಶ್ವರರು ಹ್ಯಾಂಗ ಹೊಡ್ದ. ಏರಿ ಹಾಕಿ ಹೊಡದ್ನಿಲ್ಲ! ಅಂಥ ಅದರಂತ ಇದು ಎಂಥ ಅವಸ್ಥೆ ಅಂತೀನಿ. ಅವರಿಗಿ ಇವರು ನೋಡಿಲ್ಲ ಇವ್ರಿಗಿ ಅವು ನೋಡಿಲ್ಲ. ಬರ್ರಿ ಬರ್ರಿ ಅವರ ಹತ್ತಿರ ಹೋಗೋಣ.

ಕಾಶೀಮಸಾಬ : ಕಲ್ಮೇಶ್ವರ ಗುಡಿ ಮುಂದಿನ ಬಸವಣ್ಣನ ಮ್ಯಾಲ ಕುಂತ ಬಿಟ್ಟಾನ್ರಿ ಜನಾ ಜಾತ್ರಿ, ನಮ್ಮ ಹೀರೇಮಠದ ಆಯಿ ಶರಣಮ್ಮನ ಸಮಾಧಿ ಮ್ಯಾಲಿನ ಹೂವಿನ ಹಾರ ಕೊರಳಾಗ ಹಾಕ್ಕೊಂಡಾನ. ಸಮಾಧಿ ಮ್ಯಾಲಿನ ಹಸ್ತ ಕೈಯಾಗ ಹಿಡ್ಕೊಂಡಾನ ಹಂಗ ಬಯಲಾಟದ ಸೋಗ ಕಂಡಂಗ ಕಾಣಸ್ತಾನ ಸ್ವಸ್ಥ. ಬಸವಣ್ಣನ ಮ್ಯಾಲ ಪರಮಾತ್ಮ ಕುಂತಂಗ ಕಾಣಸ್ತಾನ್. ಬರ್ರಿ ಬರ್ರಿ ಹುಡುಗರು ಭಾಳ ಗದ್ದಲ ಮಾಡ್ಲಿಕ್ಕಿ ಹತ್ಯಾವ. ರಾಯಗುಂಡಪ್ಪ ಸಾಹುಕಾರರ ಸ್ಥಿತಿ ಚಿಂತಾಜನಕ ಆಗ್ಯೆತಿ.

(ಹೋಗುವರು)

ಪ್ರವೇಶ – ೨೪

ಕಲ್ಮೇಶ ಮಂದಿರ

ಹಾಡು

ಚಂದಮ್ಮ ಗೌಡತಿ : ತಂದೆ; ಕಲ್ಮೇಶ! ಆವ ಕಾರಣಕ್ಕಾಗಿ ಈ ಪರಿತಾಪ. ಬದುಕಿನುರಿಯುಲಿ ಬೆಂದು ಬೇಸತ್ತಿರುವೆ. ಅವ ಋಣಕೋಸುಗವೋ ಆವ ಕರ್ಮಕೋಸುಗವೋ ನನ್ನ ಪತಿ ದೇವರಿಗೆ ಕ್ಷಯ ರೋಗ ಅಂಟಿಹುದು. ಅದರಿಂದ ವಿಮುಕ್ತರಾಗುವ ಪರಿ ತಿಳುಹಿಸು. ತಂದೆ! ನನ್ನೇಳು ಬೀಳುಗಳು ನಿನಗೆ ಸೊಗದ ಸುಗ್ಗಿಯೇ ? ಹೇಳು ತಂದೆ ಕಲ್ಲಾಗಿ ಕುಳಿತ ಕಲ್ಮೇಶ ಕರಗಲೊಲ್ಲದೆ ನಿನ್ನ ಹೃದಯ ? ಮರುಗಲೊಲ್ಲದೇ ನಿನ್ನ ಮನಸ್ಸು ? ಕಾಲ ನದಿಯಲಿ ನಮ್ಮ ಬಾಳ ದೋಣಿಗೆ ಮುತ್ತಿಗೆ ಹಾಕಿದ ಬಿರುಗಾಳಿಗೆ ಶಮನ ಮಾಡುವ ಶಕ್ತಿ ನಿನ್ನಲ್ಲಿಲ್ಲವೇ? ಅದಾವ ಯೋಗಿ ಬರಬೇಕು ರೋಗ ಗುಣ ಪಡಿಸಲು ? ಅದಾವ ಶಿವಯೋಗಿ ಬರಬೇಕು. ನಿರೋಗಿಯನ್ನಾಗಿ ಮಾಡಲು ? ಹೇಳು ತಂದೆ ಹೇಳು ನೀ ಹೇಳದ ಹೊರತು ನಾ ತೆರಳುವದಿಲ್ಲ. ಗಗನ

ಬಿಸಿಗವಸಾಗಲಿ ಕೆರೆಗಳಾವಿಗೆಯಾಗಲಿ ಜಗದುಸಿರೆ ಹೊಗೆಯ ಹೊನಲಾಗಿ ಹರಿಯಲಿ ಇದು ನನ್ನ ಅಂತಿಮ ನಿರ್ಧಾರ.

(ರಂಗದಲ್ಲಿ ಕತ್ತಲೆಯಾಗಿ ಪರಮೇಶ್ವರ ಒಮ್ಮೆ ಶಿವಲಿಂಗೇಶ ಕಾಣಿಸಿಕೊಳ್ಳವರು ಗಾಳಿ ಬೀಸುವದು)

ಶಿವಲಿಂಗೇಶ : ಮಗಳೆ! ಸಹನೆ ವಜ್ರದ ಕವಚ, ಸಹನೆ ಜೀವಕ್ಕೆ ವಿಜಯ. ಸಹಿಸು ನೀ ಬಂದುದೆನ್ನೆಲ್ಲ.

ಚಂದಮ್ಮಗೌಡತಿ : ಎಲ್ಲಿಯವರೆಗೆ? ಅದಕ್ಕೆ ಕಾಲವಿಲ್ಲವೆ ? ಮಿತಿಯಿಲ್ಲವೆ ?

ಶಿವಲಿಂಗೇಶ : ಕಾಲವೂ ಇದೆ ಮಿತಿಯೂ ಇದೆ. ಇಂತಿಷ್ಟೇ ವರುಷ ಇಂತಿಷ್ಟೇ ದಿವಸ ಅಂತ ಲೆಕ್ಕ ಬರದವನ ಬರಹ ಅದೆಂತು ಸುಳ್ಳಾದೀತು ? ಈಗ ಸೀಮೆ ತಲುಪಿದೆ ಲೆಕ್ಕವೂ ಪರಿಪೂರ್ಣ ವಾಗಿದೆ. ಭಾಗ್ಯೋದಯದ ಬೆಳಕು ಚೆಲ್ಲುವ ಸುಯೋಗ ಒದಗಿ ಬರಲಿದೆ ಮಗಳೆ.

ಚಂದಮ್ಮಗೌಡತಿ : ಸಾಂತ್ವನ ನೀಡುವ ಮಾತೆನಗೆ ಬೇಡ ತಂದೆ.

ಶಿವಲಿಂಗೇಶ : ಮಗಳೆ ! ನಿತ್ಯ ಮಂಗಳವಿರಲಿ, ನಿತ್ಯ ಸಂತಸವಿರಲಿ ನಿತ್ಯ ತಾಳಲು ಎದೆಯಿರಲಿ ಎಂದ್ಹೇಳುವ ಸೂಳ್ನುಡಿಗಳ ಶಕ್ತಿಯೇ ನೀನಾಗಿರುವಿ. ನಿನ್ನ ಕರ್ಮದ ಕಥೆ ಕೇಳಲು ಲೋಕಕ್ಕೆ ಬಿಡುವಿಲ್ಲ. ನಿನ್ನ ನೀನಾಗದೇ ಗತ್ಯಂತರವಿಲ್ಲ. ನಿನ್ನ ಸಹನೆಯ ನಿನಗೆ ದಾರಿದೀಪ ನೀನಿದ್ದಂತೆ ನಿನ್ನ ದೇವರು ನಿನ್ನ ಬಿಟ್ಟು ಬೇರಿಲ್ಲ ದೇವರು.

(ಮತ್ತೆ ರಂಗದಲ್ಲಿ ಬೆಳಕು)

ಚಂದಮ್ಮಗೌಡತಿ : ಹರಿಯಿತು ನನ್ನ ಭಾಗ್ಯದ ಬೆಳಕು. ತೆರೆಯಿತು ನನ್ನ ಭಾಗ್ಯದ ಬಾಗಿಲು.

ಶಿವಲಿಂಗೇಶ : *(ಹುಚ್ಚ)* ನನಗ ಹಸಿವು ಆಗ್ಯಾದವ ಚಂದಮ್ಮ ಸಾಹುಕಾರ್ತಿ ನನಗ ರೊಟ್ಟಿ ಕೊಡು ಬಾ

ಚಂದಮ್ಮಗೌಡತಿ : ನಿನಗ ರೊಟ್ಟಿ ಕೊಡಾಕ ನಾನ್ಯಾರೊ ನನ್ನಪ್ಪ ಎಲ್ಲಾನೂ ನಿಂದ ಐತಿ. ನಿನ ಮನಿ ರೊಟ್ಟಿ ನೀನ ತೊಗೋಬೇಕು ನನ್ನಪ್ಪ.

ಶಿವಲಿಂಗೇಶ : ಆದರೂ ಆ ರೊಟ್ಟಿ ಮಾಡಿದಾಕಿ ನೀನ ಹೌದಿಲ್ಲ.

ಚಂದಮ್ಮಗೌಡತಿ : ನಾನು ನಿನ್ನ ಆಳು, ನೀ ಹೇಳಿದಂಗ ನಡೆಯುವಾಕಿ ನಿನ್ನ ಮನೀಗಿ ನೀ ಬರ್ಲಿಕ್ಕಿ ಯಾಕೆ ಈ ಸಂಕೋಚ.

ಶಿವಲಿಂಗೇಶ : ನಾ ಮನೀಗಿ ಬಂದ್ರ ನಿನ ಗಂಡ ರಾಯಗುಂಡಪ್ಪನ ಮ್ಯಾಲ್ಕುಂತು ಲಗಾಮಹಾಕಿ ಓಡ್ಸ್ಯಾಡಂವ.

ಚಂದಮ್ಮಗೌಡತಿ : ನಿನ್ನ ವಸ್ತು, ನಿನ್ನ ಕುದರಿ, ನೀ ಹ್ಯಾಂಗರ ಮಾಡು. ಹಿಂಗ್ಯಾಕಂತ ಯಾರ ಕೇಳ್ತಾರೋ ನನ್ನಪ್ಪ.

ಶಿವಲಿಂಗೇಶ : ಇಲ್ಲಿವರೆಗೂ ನಾ ಊಟಾನೇ ಮಾಡಿಲ್ಲ. ಉಂಡು ತೃಪ್ತಿ ಪಡಿತೀನಿ. ಉಪವಾಸ ಇದ್ದು ಬ್ಯಾಸರಾಗ್ಯೆತಿ. ಮಲಗಿ ಮಲಗಿ ಮಗ್ಗಲಂಬುದು ದಡ್ಡ ಬಿದ್ದ ಹೋಗೇತಿ ಯವ್ವಾ ನಾ ಕೂಸಾಗ್ತೀನಿ ನೀ ಜೋಗುಳ ಹಾಡ್ತಿಯಾ.

ಚಂದಮ್ಮಗೌಡತಿ : ಆಗಲಿ ನನ್ನಪ್ಪಾ

(ರಂಗದಲ್ಲಿ ಕತ್ತಲೆಯಾಗಿ ತೊಟ್ಟಿಲ ಕಾಣಿಸುವದು ಕೂಸಿಗೆ ತೊಟ್ಟಿಲದಲ್ಲಿ ಹಾಕಿ)

ಜೋಗುಳ ಹಾಡು

(ರಂಗದಲ್ಲಿ ಬೆಳಕಾಗುವದು) ಇದೇನು ಕನಸೋ, ನನಸೋ ಇದಾವ ಪರಿಭ್ರಮಣೆ ? ಹುಚ್ಚು ಮನಸಿನ ಕಲ್ಪನೆಯೋ ಅಥವಾ ಸಾವು ಬದುಕಿನ ಹೋರಾಟದಲ್ಲಿ ನನ್ನ ಪತಿ ದೇವರು ಜಯಿಸುವ ಶುಭ ಸೂಚನೆಯೋ ? ತಂದೇ! ಕಲ್ಮೇಶ್ವರ ಪ್ರತಿನಿತ್ಯ ಮೂರು ವರುಷದ ಪರ್ಯಂತ ಉದಯವಾಗುವ ಪೂರ್ವವೇ ನಿನ್ನ ಪೂಜೆ ಮಾಡಿದ ನನ್ನ ಸೇವೆಗೆ ಮಂಗಲಮಯ ಸಮಯ ಒದಗಿಸಿದೆ. ಹಕ್ಕಿ ಪಕ್ಷಿಗಳ ಇಂಚರ ಶುಭ ವಾತಾವರಣ ನಿರುಮಿಸಿದ ನಿನಗೆ ಅನೇಕ ನಮನಗಳನ್ನು ಸಲ್ಲಿಸುವೆ ತಂದೆ *(ಹೋಗುವಳು)*

ಶಿವಲಿಂಗೇಶ : *(ನಕ್ಕು)* ಗರತಿಯರ ಕೂಗಿಗೆ ಓಗೊಡಲಾರನೇ ಕಲ್ಮೇಶ್ವರ, ಓ ಗೊಡುತ್ತಾನೆ, ಕರುಣಿಸುತ್ತಾನೆ ಆಳಿನ ಆಳಾಗಿ ದುಡಿತಾನೆ, ಹೋಗ್ತೀನಿ. ಕೆಂಪ ಸಾಯಬಣ್ಣನ ಹಲಗಿತೊಗೊಂಡು ಬಡ್ಕೊಂತ ಎಬ್ಬಸ್ತೀನಿ. ಇನ್ನ ಮಲ್ಕೊಂಡಾರ ಮಕ್ಕಳು. ಶಿವನಾಮವಿಲ್ಲ, ಸತ್ಯ ಶುದ್ಧ ಕಾಯಕವಿಲ್ಲ, ದಾಸೋಹ ಭಾವವಿಲ್ಲ. ಕಳು ವಾಡೂದು, ಹತ್ತಿ ಹೊಲ್ದಾಗ ಹೊಳ್ಳಾಡೂದು ಹಳ್ಳ ಕೊಳ್ಳ ತಿರುಗೂದು ಹಂಗ ಮಾಡಿದ್ರ ಮುಕ್ತಿಯಾವಾಗ ಪಡ್ಕೊಂತಿರೋ ಮಕ್ಕಳ್ಯಾ ನಾಲಿಗಿ ರುಚಿಗೆ ಏನೆಲ್ಲಾ ಮಾಡ್ಲಿಕ್ಕ ಹತ್ತೀರಿ. "ಈಸಕ್ಕಿಯ ಆಸೆ ಯಾಕೆ" ಅಂತ ಕೇಳಿದ ಲಕ್ಕಮ್ಮನ ವಿಚಾರವಾದಿಗಳು ಆಗಬೇಕು.

ಧರ್ಮಕ್ಕಾಗಿ ಹೋರಾಡಿದ ಧೀರೆ ದಾನಮ್ಮ ದೇವಿಯ ಆತಸ್ಥೈರ್ಯ ಒಲಿಸಿಕೊಳ್ಳಬೇಕು *(ನಗು)* ಜಾತಿ ಜಾತಿ ಅಂತ ಬಡದಾಡ್ತಾರ ಮಕ್ಕಳು. ಆ ಜಾತಿ ಬಣ್ಣ ಹ್ಯಾಂಗೈತಿ ತೋರಸ್ತ್ರ್ಯೋ? ಇಲ್ಲದ ಜಾತಿ ಕಲ್ಪಿಸಿಕೊಂಡು ನಾ ಹೆಚ್ಚು ನೀ ಹೆಚ್ಚು ಅಂತ ಕಿಚ್ಚ ಹಚ್ಚಿ ಕಡಿಗಿ ಆಗ್ತಾರ, ಕಚ್ಚೆ ಕೈ ಬಾಯಿ ಶುದ್ಧಿ ಇದ್ದರ, ಕೈಲಾಸ ನಿನ್ನ ಹತ್ತರ ಐತಿ. ಹರದಾಡೋ ಮನಸ್ಸಿಗಿ ಕಟ್ಟಿ ಹಾಕ್ರಿ ಅದ್ಕ ಕೂಳ ಹಾಕ ಬ್ಯಾಡ್ರಿ. ಆವಾಗ ಅದರ ಸೊಕ್ಕ ಇಳಿತೈತಿ ಗಿಡದಿಂದ ಗಿಡಕ್ಕ ಹಾರ್‍ಯಾಡಿ ಒಂದು ಫಲಾ ಉಳಿಸಲಿಲ್ಲ. ತಾನೂ ತಿನ್ನೂದಿಲ್ಲ ಮಂಗ್ಯಾ *(ನಗುತ್ತ)*

ಪ್ರವೇಶ – ೨೫

ದೃಶ್ಯ ರಸ್ತಾ

ಶಿವಲಿಂಗೇಶ : *(ಹಲಗಿ ಬಾರಿಸುತ್ತ)* ದಿಗ್ಗ್ ದಿಗ್ಗಾಂವಿ ಸಂಗ ಸಂಗಾವಿ ದಿಗ್ಗ್ ದಿಗ್ಗಾಂವಿ, ಸಂಗ ಸಂಗಾವಿ, ಕೆಂವಸ್ಯೆ ಭಂವಸ್ಯೆ, ಕೆಂವಸ್ಯೆ ಭಂವಸ್ಯೆ, ಧೂಲ್ಯೊ, ಧೂಲ್ಯೊ *(ನಗು)* ಕಾಯವಿಲ್ಲದ ಪುರಷನು ಕಸವಿಲ್ಲದ ಭೂಮಿಯಲ್ಲಿ ಕಾಮಿತವಲ್ಲದ ಬೀಜ ಬಿತ್ತಿದಾ ಅದು ಅಂಕುರ ಒಡೆದು ಎಲೆ ಎರಡಾಯಿತು. ಶಾಖೆ ಶಾಖೆಗಳು ಪಸರಿಸದವು. ಹಣ್ಣು ಪರಿಪೂರ್ಣವಾದವು ಆಗ, ಕಣ್ಣಿಲ್ಲದೆ ನೋಡಿ, ಕಾಲಿಲ್ಲದೆ ಹೋಗಿ ಗಿಡವನೇರಿ, ಕೈಯಿಲ್ಲದೆ ಆಂ ಫಲವ ಹರಿದು, ನಾಲಿಗೆಯಿಲ್ಲದೆ ಹಣ್ಣಿನ ರುಚಿ ಸವಿದಾಗ ಆ ರುಚಿ ಹೇಳುವೊಡೆ ನಾನಿಲ್ಲ, ನೀನಿಲ್ಲ ಆಖಂಡೇಶ್ವರ (ನಗು) ಅರಳ್ಯಾವ ಮಲ್ಲಿಗೆ, ಪರಿಮಳ ಭೃಂಗಿಗೆ ವನದಾವ ಹೂವು ತುರುಬಿಗೆ, ದೇವರಿಗೆ, ಹೆಣದ ಶ್ರಿಂಗಾರಕ ಒಂದೇ ದಿವಸ ಬಾಳುವ ಹೂವು ವನಕ್ಕ ಶೃಂಗಾರ ಕೊಟ್ಟಿತು, ಪರಿಮಳ ಕೊಟ್ಟಿತು. ತೊಟ್ಟಲಕ್ಕ ಮಸಣಕ್ಕೆ ನಂತರ ಗಾಳಿಪಾಲಾಯ್ತು, ವ್ಯಾಳ್ಯಾ ಹಾಳ್ಮಾಡಿಲ್ಲ! ಸದುಪಯೋಗ ಪಡಸ್ತು! ಆದರ ಈ ಶರೀರವೆಂಬ ಹೂವು ಏನ್ ಮಾಡಿತು ? ಸತ್ತ ಸತ್ತ ಹುಟ್ಟಿ ಬಂತು. ಸಪ್ತಸಾಗರ ಹಾಲ್ಕುಡಿತು ಸಪ್ತ ಭೂಮಿ ಸ್ಮಶಾನ ಮಾಡಿತು. ಸಪ್ತ ಪರ್ವತದಷ್ಟು ಎಲುವಿನ ರಾಶಿ ಹಾಕಿತು. ಮತ್ತ ಬರೂದು ಬಿಡುವಲ್ಲು *(ನಗು)* ಬೆಲ್ಲದನಿಂತ ಬೆಳಿ ತಿನ್ನೊ

ರುಚಿ ದನಕ್ಕ ಹ್ಯಾಂಗ ಹತ್ತಿರ್ತಾದೋ ಹಂಗ ಇದ್ಕ ಈ ಭವದ ರುಚಿ ಹತ್ತೈತಿ ಅದ್ಯಾಕ ಬಿಟ್ಟಿತ್ತು *(ಹಾಡುವನು)* ಎಂದಾದರೊಂದು ದಿನ ಸಾವು ತಪ್ಪದೋ ಸಾವು ತಪ್ಪದೋ ಗಿಲ್ ಗಿಲ್ ಗಿಲಕ್ಕ, ಕೈ ಬಳಿ ಛಲಕ್ಕ, ಮುಗಿನ್ಯಾನ ಬುಲಾಕ ಶರಗ ಜಾರಿತು ಸರಕ್.... ಹತ್ತಿ ಹೊಲ್ದಾಗ ಉಳ್ಯಾಡಿ ಕಂಟಿ ಸಂದ್ಯಾಗ ಸೇರ್ದಿ. ಥೂ ನಿನ್ನ ಜನ್ಮಕ್ಕ ನಾಚಿಗಿ ಬರಬೇಕು. ಜಗನ್ಮಾಯಿ ಆಗಿ ಯಾಕ ಬೆನ್ನಹತ್ತಿದಲೇ ರಂಡಿ ಕಟ್ಟಿಸ್ಕೋ ದಂಡಿ. ಹೊಡಿ ಮುಂಡಿ. ಬಸವಿ ದನ್ನಕ್ಕಿದ್ದಷ್ಟ ಮರ್ಯಾದಿ ನಿನಗಿಲ್ಲಲೇ *(ಹಾಡಿ)* ಎಲ್ಲರಂತಾಕಿ ಅಲ್ಲ ನಮ್ಮಾಕಿ! ಬಲು ಮೋಜಗಾರ್ತಿ। ಮೂರು ಲೋಕವು ಮುಟ್ಟಿ ನಿಂತಾಕಿ, ಮನದ ಕಸವನು ಹೊತ್ತು ಹೊರಗ್ಹಾಕಿ ಅದು ನಿತ್ಯ ಸಾರಿಸಿ! ತನುವಿನೆಚ್ಚರದೊಳಗೆ ಕೂಡ್ಹಾಕಿ॥ *(ನಗು)* ಮಧುರತೆ ಹೃದಯದಲಿ, ಸೌಂದರ್ಯ ನೋಟದಲಿ, ನಮ್ರತೆ ನಾಲಿಗೆಯಲಿ, ಭಯವಿರಲಿ ಮನದಲಿ; ಮರುಳೆ ಮಾಮರದ ಹೂವಿನಲಿ ಮಹಾಂತರ ದರುಶನ ಶಿವನನ್ನು ಕಾಣು, ಸಂತರನ್ನು ಕಾಣು, ಶರಣರನ್ನು ಕಾಣು, ಸಜ್ಜನರನ್ನು ಕಾಣು, ಅಲ್ಲೆ ನಾನಿರುವೆ ಸೇವಾಲಾಲ್‌ನ ಝುಂಡಾ ಹಿಡ್ಕೊಂಡು ಸುಲ್ತಾನ ಬಾಷನ ದೀನ ಹೊಡಿಬೇಕು *(ಹೋಗುವನು)* ಹಜರತ್ ಸುಲ್ತಾನ ಶಹಾ ಬಾಷ್ಯಾಕಿ ದೋಸ್ತೂರಾ ಹೋದ್ದೀನ್ *(ಹೋಗುವನು)*

ಶಾಂತಯ್ಯ : ಶಿಸುವಿನಾಟ ಶಿವನಾಟ ಒಂದೇ ಅಂತಾರಲ್ಲ. ಈ ಮಾತಿಗಿ ಶಿಸು ಆದ ಸಾಧು ಶಿವಲಿಂಗೇಶ್ವರರೇ ಸಾಕ್ಷಿ ನಿದ್ರೆಯಿಲ್ಲ, ನೀರಡಿಕೆಯಿಲ್ಲ. ಯಾವಾಗ ಮಲಗುವನೋ ಯಾವಾಗ ಏಳುವನೋ, ಹಗಲ ಹನ್ನೆರಡತಾಸ ಒದರೂದು, ನಗೂದು, ಹಾಡೂದು, ಆನಂದಪ್ಪ ಪೂಜಾರಿಗಳ ಮನೀಗಿ ಹೋಗಿ ಹೋಗಿ ತೂಗೂ ತೊಟ್ಲ ಡಬ್ಬ ಮಾಡಿ ತೂಗಿದರ ತೊಟ್ಲಲ್ದಾನ ಕೂಸೂ ಕೆಳಗ ಬೀಳಲಿಲ್ಲ. ಎಂಥಲೀಲಾ ಮೂರ್ತಿ

ರಾಮರಾವ : ವೊನ್ನೆ ವುರತೂರಕ್ಕ ಹೋಗಿ ಗಿಡ್ದಾಗ ಕುಂತಿದ್ದ ಕೇಳಗಿಳಿಸಬೇಕಾದರ ರಾಮಾಯಣ ಆಗಿ ಹೋಯ್ತು. ಬೀಡಿ ಸೇದೂದಂದ್ರ ಅವ್ನಗಿ ಆಗಿ ಬರುತಿದ್ದಿಲ್ಲ. ನಾ ಬೀಡಿ ಹಚ್ಚಿದ್ಯಾ ಸರಕ್ಕನ ಕೆಳಗಿಳ್ದಿ ಬಂದವನ ಬಾಯಾಗಿನ ಬೀಡಿ ಕಸದು ಒಗ್ದ ಬಿಟ್ಟಾ, ನಡಿಮುತ್ಯಾ ಅಂತ ನಮ ಇಟಗಿಯವರು ಖಣದಾಳಕ್ಕ ನಡಿಯಂತ ಆ ಊರಿನವರು ನನಗ ಯಾರ ಎತಗೊಂಡು ಹೋಗ್ತೀರಿ ಅವರೂರಿಗಿ ಬರ್ತೀನಿ ಅಂತ

ಡಬ್ಬ ಮಲಗಿಬಿಟ್ಟ. ಖಣದಾಳದ ನಾಗಪ್ಪ ಪೂಜ್ಯಾರಿ ಮೊದ್ಲ ಕುಸ್ತಿ ಪೈಲ್ವಾನ ಈ ಮುತ್ತ್ಯಾ ಎಷ್ಟ ವಲೂ ಅದಾನ. ಜೋಡ ಚೇಲಾ ಹೊತ್ತವನ ಮುಂದ ಅಂತ ಎಬ್ಬಿಸ್ಲಿಕ್ಕಿ ಹತ್ತಿದರ ನೆಲಬಿಟ್ಟ ಏಳಲಿಲ್ಲ. ಒಬ್ಬರು ಇಬ್ಬರೂ ಹತ್ತಮಂದಿ ಎತ್ತಿದರೂ ನೆಲೆಬಿಟ್ಟು ಜಪ್ಪ ಅನ್ನಲಿಲ್ಲ. ಕಡಿಗಿ

ಶಾಂತಯ್ಯ : "ಯಾಕಪ ಮುತ್ತ್ಯಾ ಬರತ್ಯಾ ಹ್ಯಾಂಗ ಅಂದಾಗ ಬರ್ತೀನಿ ಅಂತ ಎದ್ದು ಕುಂತು, ನಾನು ತುರಕರ ಹೆಣಾ ಆಗ್ತೀನಿ ತಲಿಕಡೆ ನಿಮ್ಮಣ್ಣಾ ಚನಬಸಯ್ಯಾ, ಕಾಲ ಕಡಿಗಿ ರಾಮರಾವ ಕುಲಕರ್ಣಿ, ನಡುವ ಕಾಶೀಮ ಹೊತಗೊಳ್ಳಲಿ ಅಂತ ಮತ್ತ ಅಂಗಾತ ಮಲಗಿದ. ನಾವು ಮೂರು ಮಂದಿ ಅವ್ನಗಿ ಹೊತಗೊಂಡು ಒಂದ ಹೊಲದಾಟಬೇಕಾದ್ರ ಸಾಕಬೇಕಾಯ್ತು. ಇಳಿಸಿ ಇಷ್ಟ ಒಲು ಆದಾ ಹ್ಯಾಂಗಂತ ನಾನು ಸಿಟ್ಟ ಮಾಡಿದರ ಲೇ ಕಾಶಾ ಬಾರಲೇ ನಿನ್ನ ಹೆಗಲ ಮ್ಯಾಲ ಕುಂದರತೀನಿ ಅಂತ ಕುಪ್ಪಳಿಸಿ ಹೆಗಲಮ್ಯಾಲ ಕುಂತಬಿಟ್ರ, ಗಾಳಿಗಿಂತ ಹಗರಾಗಿ ಯಾವಾಗ ಇಟಗೀಗಿ ಬಂದ ಮುಟ್ಟಿದರೊ.ಬಾರೋ ಕಾಶೀಮ್ ಸಾಬ.

ಕಾಶೀಮಸಾಬ : ನಮಸ್ಕಾರಿ ಶಾಂತಯ್ಯಾ ಮುತ್ಯಾ ಎಲಿಗೆ ಹೊಂಟಿರೆಲ್ಲ ಸಾಧು ಶಿವಲಿಂಗೇಶ್ವರ ಮುತ್ಯಾಗ ನಿಮ್ಮ ನಿಮ್ಮ ಹೆಸರ ಹೇಳಿದರ ಸಾಕ್ರಿ ಎದ್ದನಿಂದರತಾನ. ನೀವೆಂಥ ಅಂಜ್ಕಿ ಹಾಕೀರಂತಿನಿ.

ಶಾಂತಯ್ಯ : ಅಂಜ್ಕಿ ಅಲ್ಲ ಕಾಶೀಮಸಾಬ ಅದು ಅಭಿಮಾನ ನಮ ಹತಗುಂದಿ ಬಸವಂತಪ್ಪ ಗೌಡ ಬಂದ್ನಲ್ಲ.

ಬಸವಂತಪ್ಪ : ನಮಸ್ಕರ್ರಿ ಶಾಂತಯ್ಯಪ್ಪ! ನಿಮ್ಮಣ್ಣವರು ಚನ್ನಬಸಯ್ಯ ಸ್ವಾಮಿಗಳು ಅದಾರ್ಯಾ ಮನ್ಯಾಗ.

ಶಾಂತಯ್ಯ : ಅವರೆಲ್ಲಿ ಮನ್ಯಾಗಿರ ಬೇಕೋ ಮಹಾರಾಯ ಸಾಧು ಶಿವಲಿಂಗೇಶ್ವರ ತಾತನ ಬೆನ್ನಹಿಂದನ ಇರತಾರ ಅವರಾಯ್ತು ರಾಮರಾವ ಕುಲಕರ್ಣಿರಾಯ್ತು, ಆನಂದೆಪ್ಪ ಪೂಜಾರಿ ಆಯ್ತು, ಹೂಗಾರ ಸಿದ್ದಪ್ಪಾಯ್ತು, ರುಕ್ಮುದ್ದೀನ್ ಮುಲ್ಲಾಸಾಬಾಯ್ತು ರಾಯಗುಂಡಪ್ಪ ಸಾವ್ಕಾರಾಯ್ತು.

ಕಾಶೀಮಸಾಬ : ಈಗ ನೋಡಿ ರಾಯಗುಂಡಪ್ಪಾ ಸಾವ್ಕಾರ ಕುದುರಿ ಕುದುರಿ ಆಗ್ಯಾನ

ಶಾಂತಯ್ಯ : ಸಾಧು ಶಿವಲಿಂಗೇಶ್ವರ ಪುಣ್ಯಹಸ್ತ ಸ್ಪರ್ಶ ಆದಾಗ ಕ್ಷಯರೋಗ ಪರಿಹಾರ ಆಯ್ತು. ಅಕ್ಷಯವಾಯ್ತು ಅವರ ಆರೋಗ್ಯ.

ಕಾಶೀಮಸಾಬ : ನಮ ಹತಗುಂದಿ ಬಸವಂತಪ್ಪಗೌಡ್ರು ಅವರ ಪವಾಡದ ಪದಾ ಹಾಡ್ತಾನ ಕೇಳ್ರಿ

ಹಾಡು

ಬಸವಂತಪ್ಪ : ಜಗವ ಬೆಳಗ ಬಂದ ಜಂಗಮನ ಪಾದ
ತೊಳೆಯ ಬಂದ ಗಂಗೆಯ ಪುಣ್ಯ ಹಸ್ತದಿಂದ
ಶಿವಲಿಂಗನಲೀಲೆಯಿಂದ

ರೋಗದಿಂದ ಬಳಲುವ ರಾಯಗುಂಡಪ್ಪನ
ಮೇಲೆ ಕುಳಿತು ಲಗಾಮ ಹಾಕಿದ ಶರಣ
ಶರಣ ಹಸ್ತಸ್ಪರ್ಶದಿಂದ ಪಡೆದ ಚೇತನ
ನಿತ್ಯ ನೆನವರವರು ಸಾಧು ಶಿವಲಿಂಗೇಶನ
ನಿತ್ಯ ಕಲಾಪೂರ್ಣಾನ

ಜಗತಿ ಮಲ್ಲೇಶಪ್ಪಗ ಕಲ್ಮೇಶ ಮಂದಿರದಿ
ಶ್ರೀಶೈಲವೆ ತೋರಿಸಿದ ಸಾಧುಶಿವ ಸನ್ನಿದಿ
ಪಾತಾಳಗಂಗೆಯಲಿ ಸ್ನಾನಗೈದು ಲಿಂಗಾರ್ಚನದಿ
ಅವರ ಬಟ್ಟೆತರಿಸಿದ ಬಿಲ್ಲಿಗೆ ಸಾಕ್ಷಿ ರೂಪದಿ
ಲೀಲಾ ವಿನೋದದಿ

ತುಂಬಿದ ಕೆರೆಯ ಮುಳುಗಿ ಆಚೆ ತೇಲುವ
ನೀರ ಮೇಲೆ ಮಲಗುವ ಮತ್ತೆ ನಿಲ್ಲುವ
ಕೂಡಿಗಿ ಬಾಬಾಸಂತ ತಾನೆ ಆಗಿ ತೋರುವ
ಸುಲ್ತಾನ ಬಾಷಾ ಸಂತರಾಗೆ ಅಪ್ಪಿಕೊಳ್ಳುವ
ಭೇದಭಾವ ಅಳಿಸಿದವ

ಹಿಂದು ಬನೇಗಾ, ಮುಸಲ್ಮಾನ ಬನೇಗಾ
ಇನ್ಸಾನಕಿ ಅವಲಾದಮೆ ಇನ್‌ಸಾನಹಿ ಬನೇಗಾ
ಎಂಬತತ್ವ ಹಂಚಿದನು ಈ ಜಗದೊಳಗ
ಇಟಗಿ ಮರುವ ಪುಣ್ಯಕ್ಷೇತ್ರಗೈದ ಪಾವನಾಂಗ
ಶ್ರೀ ಸಾಧು ಶಿವಲಿಂಗ

ಶಾಂತಯ್ಯ : ಇಂಥಾ ಮಹಿಮಾನ್ವಿತರು ಸಿಗೂದ ದುರ್ಲಭ ಬಾಗಲ್ ಕೋಟೆಯಲ್ಲಿ ಲಡ್ಡು ಮುತ್ಯಾವರಿದ್ದರ, ಮಾನಿವಿಯಲ್ಲಿ ಅನ್ನಮಯ್ಯತಾತನವರು, ಅಬ್ಬೆ ತುಮಕೂರಿನಲ್ಲಿ ವಿಶ್ವಾರಾಧ್ಯರು,

ಬಡದಾಳದ ಚನ್ನಮಲ್ಲ ಶಿವಾಚಾರ್ಯರು ಅಲ್ಲೋ ಇಲ್ಲೋ ನಕ್ಷತ್ರ ದಂತೆ ಕಾಣಸಿಗುತ್ತಾರೆ ನಮ್ಮ ಕುಸನೂರ ಮಲ್ಲೇಶಪ್ಪಾ ಸಾಹುಕಾರರು ಬಂದ್ರು.

ಮಲ್ಲೇಶಪ್ಪ : ನಮಸ್ಕರ್ರಿ ಗುರುಗಳ ಇದೇನು ಎಲ್ಲಾ ಮ್ಯಾಳ ಇಲ್ಲೇ ಕೂಡ್ಯೈತಲ್ಲ. ನೀವು ಎಲ್ಲಿಂದ ಬಂದ್ರಿ ಹತಗುಂದಿ ಬಸವಂತಪ್ಪಣ್ಣಾ ಗುರು ಮಹಾರಾಜರ ದರುಶನ ಆಯ್ತ್ಯಾ.

ಬಸವಂತಪ್ಪ : ನೆನದವರ ಮನದಾಗಿರ್ತೀನಿ ಅಂದ್ಮ್ಯಾಲ ಅವರಿಗಿ ಹುಡುಕುವ ಮಾತಿನ್ನೆಲ್ಲಿಂದ ಬಂತು ಮಲ್ಲೇಶಪ್ಪಣ್ಣಾ.

ಮಲ್ಲೇಶಪ್ಪ : ಹುಡ್ಕೂದು ಬ್ಯಾಡ, ದುಡುಕೂದು ಬ್ಯಾಡ ತಡಕ್ಯಾಡೂದು ಬ್ಯಾಡ. ಸದಾ ಆತನ ನಾಮಸ್ಮರಣೆ ನಮ್ಮ ಎದಿಯಾಗ ತುಂಬೈತಿ ಆದರ ಆ ಸದ್ಗುರುವಿನ ಕಾರಣದಿಂದಾದರೂ ನಮ್ಮ ನಿಮ್ಮೆಲ್ಲರ ಸಂಗಮ ಆಗಿ ಮನಸಿನ ವಿಷಯಾದಿಗಳು ಪರಸ್ಪರ ಹಂಚಿಕೊಳ್ಳುವುದಕ್ಕ ಇದೊಂದು ಅವಕಾಶ. ಯಾಕ್ರಿ ಶಾಂತಯ್ಯ ಸ್ವಾಮಿಗಳ ಅದೋ ನೋಡಿ ಕೋಟ್ನೂರ ಸಿದ್ದಪ್ಪಗೌಡರು ಬಂದ್ರು.

ಸಿದ್ದಪ್ಪಗೌಡ : ಎಲ್ಲಾ ನಮ್ಮ ಶರಣ ಬಳಗಕ್ಕೂ ಶರಣು ಶರಣಾರ್ಥಿ, ಎಲ್ಲರೂ ಶರಣು ಶರಣಾರ್ಥಿ, ಶರಣು ಶರಣಾರ್ಥಿ

ಸಿದ್ದಪ್ಪಗೌಡ : ಸೋಮನಾಥನ ಹಳ್ಳಿ ಶಿವಶರಣೆ ಸಿದ್ದಮ್ಮ ಗುರುತಾಯಿಯವರು ತಿಳಗೂಳದ ಅಮರಪ್ಪಗೌಡ ರುದ್ರಪ್ಪಗೌಡರೊಡನೆ ಭಜನಾ ತೆಗೆದುಕೊಂಡು ಇಟಗೀಗಿ ಬರತಾರ ಅನ್ನು ಸುದ್ದಿ ಕೇಳಿ ನಾನು ಬಂದೀನ್ರಿ ಗುರು ವಾಕ್ಯಗಳು ಕಿವಿಯೊಳಗ ಬೀಳಲಿ ಅಂತ...

ಮಲ್ಲೇಶಪ್ಪ : ವಿಶ್ವಾರಾಧ್ಯರ ಕರಕಮಲ ಸಂಜಾತರಲ್ಲಿ ಅಗ್ರಗಣ್ಯರಾದ ಶ್ರೀ ಸಿದ್ಧರಾಮ ಶಿವಯೋಗಿಗಳ ಶಿಷ್ಯತ್ವವಹಿಸಿದ ಶಿವಶರಣೆ ಸಿದ್ಧಮ್ಮ ಗುರುತಾಯಿಯವರು ಪ್ರಪಂಚ ಪಾರಮಾರ್ಥವೆರಡರ ಪರಡಿಯ ಸೂತ್ರವನ್ನ ಹಿಡಿದು ಆಧ್ಯಾತ್ಮ ಕೃಷಿಗೈದವರವರು.

ಬಸವಂತಪ್ಪ : ಕಮರಿ ಮಠದ ಕರ್ಪುರವಾಗಿ, ದಾಸೋಹದ ಮೂಲಕ ಜ್ಞಾನ ಪ್ರದೀಪ್ತಿ ಬೆಳಗಿದ ಈ ನಮ್ಮ ನಿಟ್ಟಿನಲ್ಲಿ ಅಗ್ರಗಣ್ಯರೆನಿಸುವವರು. ಹೊಟಗಿಯ ಶ್ರೀಗಳಿಂದ ಸನ್ಮಾನ ಪಡೆದವರು.

ಶಾಂತಯ್ಯ : ಸಾಧು ಶಿವಲಿಂಗೇಶ್ವರರ ಪುಣ್ಯಬಲದಿಂದ, ಕಟ್ಟಿಗೆಮಾರಿ ಬದುಕುವ ನಮ್ಮ ಇಟ್ಗಿ ಸುಕ್ಷೇತ್ರವೆನಿಸಿತು ನಮ್ಮೂರಿಗೆ ಬರುವ

ಶಿವಶರಣೆ ಸಿದ್ದಮ್ಮ ಗುರುತಾಯಿಯವರಿಗೆ ಸ್ವಾಗತ ಮಾಡಿಕೊಳ್ಳೋಣ.

(ಹೋಗುವರು)

ಪ್ರವೇಶ – ೨೬

ದೃಶ್ಯ ಕಲ್ಮೇಶ್ವರ ಮಂದಿರ

(ಲಿಂಗದ ಮುಂದೆ ಶಿವಲಿಂಗೇಶ್ವರರು ಕುಳಿತಿದ್ದಾರೆ ಒಂದೆಡೆ ಕುಸನೂರ ಮಲ್ಲೇಶಪ್ಪ ಸಿದ್ಧಪ್ಪಗೌಡ್ರ, ಬಸವಂತಪ್ಪಗೌಡ ಕುಳಿತಿರಬೇಕು. ಇನ್ನೊಂದೆಡೆ ರಾಮರಾವ ಚನ್ನಬಸಯ್ಯಾ ಕಾಶೀಮಸಾಬ ಇನ್ನಿತರರು)

ರಾಯಗುಂಡಪ್ಪ : ಇದೇನು ? ಹನ್ನೆರಡನೆ ಶತಮಾನದ ರೂವಾರಿ ಜಗಜ್ಯೋತಿ ಬಸವಣ್ಣನವರ ಅನುಭವ ಮಂಟಪದ ನೆನಪು ತಂದುಕೊಟ್ಟಿದೇ ಇಂದಿನ ದೃಶ್ಯ.

ಮಲ್ಲೇಶಪ್ಪ : ಅನುಭವ ಮಂಟಪದ ಅಧ್ಯಕ್ಷ ಸ್ಥಾನವಹಿಸಿದ ಶೂನ್ಯ ಸಿಂಹಾಸನಾಧೀಶ್ವರ ಅಲ್ಲಮ ಪ್ರಭುವಿನ ಅಪರವತಾರಿ ಶ್ರೀ ಸದ್ಗುರು ಸಾಧು ಶಿವಲಿಂಗೇಶ್ವರ ಶಿವಯೋಗಿಗಳ ಶ್ರೀಪಾದಕ್ಕೆ ನಮಿಸುವೆವು.

ಸಿದ್ಧಮ್ಮಾಂಬೆ : ನಿರ್ವಯ, ನಿರ್ಲೇಪ, ನಿರಾಕಾರ, ನಿರಾಳ ನಿರ್ಮಲ ಜ್ಞಾನಿಗೆ ನಮೋ ನಮೋ

ಬಸವಂತಪ್ಪ : (ನಗು) ಆಧ್ಯಾತ್ಮ ವಿದ್ಯಾಪರಂಜ್ಯೋತಿ ಪ್ರಭಾವಲಯದೊಳಗ ಕೂಡಿದ್ದೆ ಕೂಡಲ ಸಂಗಮ ಈ ಕೂಡಲ ಸಂಗಮ ಆಗುವದೇ ಒಂದು ಯೋಗ ಭೋಗದೊಡನಾಟವಿದ್ದವರಿಗೆ ಈ ಯೋಗ ವಿಯೋಗ, ಸಿದ್ಧಾಂತ ಶಿಖಾಮಣಿಯನ್ನೆ ಹೊತ್ತುಕೊಂಡು ಬಂದ ಶಿವಶರಣೆ ಎಲ್ಲರಿಗೂ ನಿಮ್ಮ ಅನುಭವದ ಅಮೃತವನ್ನು ಹಂಚುತಾಯೆ.

ಸಿದ್ಧಮ್ಮಾಂಬೆ : ತಂದೆ! ಜಗದ ತೊಡಕಿನೊಳಗ ಸಿಕ್ಕು ಬಿದ್ದವರು ನಾವು

ಚನ್ನಬಸಯ್ಯ : ಆ ತೊಡಕು ಬಿದ್ದ ಬಳ್ಳಿಗೆ ನೀನೆಂದೋ ಕಡಿದೊಗೆದಿರುವಿ ತಾಯಿ. ಕಡೆಗ್ಹಾಕಿ ನಿಂತಿರುವಿ. ಕಡೆ ಮೊದಲಿಲ್ಲದ ಪದವಿ ಪಡೆದುಕೊಂಡಿರುವವರ ಮಾತುಗಳಿವು.

ಸಿದ್ಧಮ್ಮಾಂಬೆ : ಅಷ್ಟೊಂದು ಎತ್ತರಕ್ಕೆ ಏರಿದವಳಲ್ಲ ಸಾದಾ ಜೀವನದ ಶಿಸು ಪುಣ್ಯ ಪುರುಷರ ತಪಸ್ವಿಗಳ ದರುಶನ ಪಡೆಯುವದೇ ನನ್ನ ಉದ್ದೇಶ ತಂದೆ. ನೀವು ನನ್ನ ಕೇಳಬೇಕೆ? ನಾನು ನಿಮಗೆ ತಿಳಿ ಹೇಳಬೇಕೆ ? ನಡೆದಾಡುವ ಕಾರ್ಯ ಕಾಲುಗಳಿಂದಲ್ಲದೆ, ತಲೆಯಿಂದಲ್ಲ ನೋಡುವ ಸೃಷ್ಟಿ ಕಣ್ಣಿನದಲ್ಲದೆ ಕಿವಿಯಿಂದಲ್ಲ. ಉಣ್ಣುವ ಕೆಲಸ ಬಾಯಿಂದಲ್ಲದೆ, ಮೂಗಿನಂದಲ್ಲ, ತಾಯಿಯಿಲ್ಲದೆ ಮಕ್ಕಳು ಹುಟ್ಟಬಲ್ಲುರೇ, ಸೇವಕರೆತ್ತ, ಸೇವೆ ಮಾಡಿಸಿಕೊಳ್ಳುವರೆತ್ತ ನಾನು ನಿಮ್ಮ ತೊತ್ತು (ಶಿವಲಿಂಗೇಶ್ವರನ ನಗು)

ಮಲ್ಲೇಶಪ್ಪ : ತಾಯೇ! ಕಾಲಿಲ್ಲದೆ ತಲೆನಡೆಯಲಾರದೇನೋ ನಿಜ! ಆದರೆ, ತಲೆಯಲ್ಲಿ ಎಲ್ಲಿಗೆ ಹೋಗಬೇಕು, ಏನು ಮಾಡಬೇಕು ಎಂಬ ವಿಚಾರ ಹೊಳೆಯದಿದ್ದರೆ ಆ ಕಾಲಗಳು ನಡೆಯಬಲ್ಲವೇ ? ಎಲ್ಲದಕ್ಕೂ ತಲೆ ಬೇಕು ತಾಯಿ.

ಬಸವಂತಪ್ಪ : ಒಟ್ಟಾರೆ, ಎಲ್ಲದಕ್ಕೂ ಆತ್ಮಬಲವಿದ್ದಾಗ ಕರಣೇಂದ್ರಿಯಗಳು ತಮ್ಮ ತಮ್ಮ ಕಾರ್ಯಗಳಲ್ಲಿ ನಿರತವಾಗುತ್ತವೆ ಅಷ್ಟೇ.

ಶಿವಲಿಂಗೇಶ್ವರ : (ನಗುತ) ಅರಿವು ಮರವೆಗೆ ಬೀಜ. ಮರವು ಅರಿವಿಗೆ ಬೀಜ. ನಾನು ಮಾಡಿದೆನೆಂಬ ಅರಿವು ಅಹಂಕಾರದಂಕುರ, ಅಭಿಮಾನದಂಕುರ (ನಗು)

ಸಿದ್ಧಮ್ಮಾಂಬೆ : ಬಯಲ ಬತ್ತಲೆಯಾದರ ! ಹೊದಿಸುವವರ್‍ಯಾರು ? ಏರ ನೀರ ಕುಡಿದರೆ ಬಿಡಿಸುವರ್‍ಯಾರು? ಮಹಾಮೇರು ನಡೆದರೆ ಪಥಕಿಂಬು ಗೊಡುವವರಾರು ? ಅರಿದವ ಮರೆದವ ನಾದಡೆ ಅರಿಕೆಯ ಹೇಳುವರ್‍ಯಾರು ? ನಿಮ್ಮ ನಿಜವನು ನೀವೆ ಬಲ್ಲಿರಿ. ನಾನಂಜುವೆ ನಿಃಕಳಂಕ ಮಲ್ಲಿಕಾರ್ಜುನ ಅಂತ ಅಕ್ಕಮಹಾದೇವಿ ಹೇಳ್ಯಾಳ.

ತಂದೆಗಳೀರಾ! ಅಂಬರವನುಟ್ಟ ದಿಗಂಬರ ವಿಶ್ವರೂಪಿ ಸಾಧು ಶಿವಲಿಂಗೇಶ್ವರರು ಸಣ್ಣ ಕೆರೆಯಲ್ಲ. ಅವರೊಂದು ತುಂಬಿದ ಹಿರಿಗಡಲು, ಆ ಹಿರಿಗಡಲಿನಲಿ ಹುಟ್ಟಿದ ತೊರೆನಾನು. ಎಲ್ಲಿ ಹುಟ್ಟುವೆನೋ ? ಎಲ್ಲಿ ಮುಳುಗುವೆನೋ ? ಎಲ್ಲಿ ಅಪ್ಪಳಿಸುವೆನೋ ? ಅದೇ ಗೊತ್ತಿಲ್ಲ. ಗೊತ್ತಿಲ್ಲದವರಿಗೆ ಮುತ್ತಿನ ಬೆಲೆ ಕಟ್ಟಂದರೆ ಕಟ್ಟಬಹುದೇ ? ಹಣವನ್ನು ಅರ್ಪಿಸಿದರೆ ಭಕ್ತನಾಗುವದಿಲ್ಲ ? ಪ್ರಾಣವನ್ನರ್ಪಿಸಿದರೆ ಶಿಷ್ಯನೆನಿಸುವದಿಲ್ಲ ? ಅಭಿಮಾನವನೊಪ್ಪಿಸಿದರ ಶರಣ ನಾಗುವಂತಿಲ್ಲ ? ಈ

ಮೂರನ್ನು ಅರ್ಪಿಸಿ ಮನವನರ್ಪಿಸದಿದ್ದರೆ ಶುದ್ಧ ನಾಗುವದಿಲ್ಲ. ಅಭಿಮಾನ ತನ್ನದಲ್ಲ ತನ್ನ ತಾನರ್ಪಣ ವಾಗುವದೇ ತಾತ್ವಿಕ ಸಮರ್ಪಣ, ಶ್ರೀ ಸಾಧು ಶಿವಲಿಂಗೇಶ್ವರ ಮಹಾರಾಜ್ಕಿ ಜೈ ಸದ್ಗುರು ವಿಶ್ವಾರಾಧ್ಯ ಮಹಾರಾಜ್ಕಿ ಜೈ , ಶ್ರೀ ಸದ್ಗುರು ಸಿದ್ಧರಾಮ ಶಿವಯೋಗಿ ಮಹಾರಾಜ್ಕಿ ಜೈ.

ಶಿವಲಿಂಗೇಶ್ವರ : *(ನಗು)* ವಿಶ್ವ ವಿಭೂತೆತ್ವವನ್ನು ಪಡೆದು ವಿಭೂತಿ ಪುರುಷರ ಮಾಲಿಕೆಯಲ್ಲಿ ಸೇರು *(ವಿಭೂತಿ ಹಚ್ಚುವನು)* ದಿಗ್ಗ್ ದಿಗ್ಗಾಂವಿ ಸಂಗ ಸಂಗಾವಿ, ಆದಿನಾದ ಸ್ವರೂಪ ರುದ್ರ, ಆದಿ ಬಿಂದು ಸ್ವರೂಪಶಕ್ತಿ, ನಾದರಸ ಸ್ವರೂಪಕ್ಕೆ ಬಂದಾಗ ಶಕ್ತಿ ಆದಿಯಾಧಾರವಾಗಿಹುದೇ ಘನ, ಆ ಘನ ಭೇದಿಸಿಹುದೇ ಮನ, ಆ ಮನವು ಮಹವು ನಿಂಬುಗೊಂಬುದೇ ಭಕ್ತಿ. ಭಿನ್ನ ಭಾವ ತಲೆ ತೋರದಿಹುದೇ ಆಚಾರ, ತಟ್ಟುಮುಟ್ಟು ತಾಗು, ನಿರೋದವಿಲ್ಲದಿಹುದೇ ಪೂಜೆ, ಆಸೆ, ರೋಷ ಹರುಷವಿಲ್ಲದಿಹುದೇ ಪ್ರಸಾದ. ಶರಣವುಥನದಿಚ್ಛೆ ದೋರದಿಹುದೇ ಅನುಭಾವ, ಇಂತಿವುಗಳೆಲ್ಲಾ ಸರ್ವಾಂಗದಲ್ಲಿ ಅಳವಟ್ಟಾಗ ನಿರಂತರ ಸುಖಿ. ನಿಶ್ಚಿಂತ ಮುಖಿ ಕೆಂವಸ್ಯೆ, ಭಂವಸ್ಯೆ, ಧೂಲ್ಲ್ಯೋ ಧೂಲ್ಲೋ...

ಸಿದ್ಧಮಾಂಬೆ : ಮೂರಾವಸ್ಥೆಯನ್ನು ಮೀರಿದ ಮಹಾಶಿವಯೋಗಿ ಸಾಧು ಶಿವಲಿಂಗೇಶ್ವರರ ನುಡಿಗಾಡಿಯ ಗೂಢ ತೊಡಕಿನ ಮೋಡಿಗೆ ಮಹಾನುಭಾವಿಗಳ ಮನ ಮಿಡಿಯುವದು ತಡಕಾಡುವದು. ಸಾಸಿವೆಯಲ್ಲಿ ಸಾಗರವನೀಸುವ ಸಾಮರ್ಥ್ಯ.

ಶಿವಲಿಂಗೇಶ್ವರರಿಗೆ ಆರತಿ

ಎತ್ತೀರಿ ಆರತಿ ಇಟಗೀ ವಾಸಗೆ
ಬೆಳಗೀರಿ ಆರತಿಯಾ । ಶ್ರೀ ಶಿವಲಿಂಗೇಶಗೆ

ಆರನು ಅಳಿದು । ಆರನು ತಿಳಿದ
ಆರೂಢ ಅರಸನಿಗೆ । ಜ್ಞಾನದ। ದಿನಮಣಿಧೀಶನಿಗೆ॥
ಮೂರನು ಅಳಿದು ಮೂರನು ತಿಳಿದ
ಮುಕ್ಕಣ್ಣ ಮಹಾಂತನಿಗೆ ॥

ಅರಿವಿನ ಗಿರಿಯಲಿ ಮೀರಿದ ಉನ್ಮನಿ
ಏರಿದ ಅವಧೂತನಿಗೆ। ಸಾರಿ। ಬಡಗಲ ಕಂಡವಗೆ ॥

ದ್ವಾರ ಪಶ್ಚಿಮ ಸಹಸ್ರದೊಳರ್ಪಿಸಿದ
ನಿಸ್ಸೀಮ ಪುರುಷನಿಗೆ ॥

ಧರೆಯಲಿ ಮೆರೆವಾ ಇಟಗಿ ಪುರದೊಳು
ಲೀಲೆಯ ಮೆರೆದವಗ। ಸಾಧು। ಶಿವಲಿಂಗೇಶನಿಗೆ॥
ತರುಳ ಆಲ್ದಾಳನ ಘನಮನದೊಳ್
ನೆಲೆಸಿದ ಶಿವಲಿಂಗನಿಗೆ
ಜೈಕಾರ ಮಾಡುವರು
ಲೈಟ್ ಆಫ್

ಪ್ರವೇಶ – ೨೭

ದೃಶ್ಯ ರಸ್ತಾ

(ಚಂದವ್ವ, ಸುಂದ್ರ್ಯಾ ಶರಣರ ವೇಷದಲ್ಲಿ)

ಸುಂದ್ರ್ಯಾ : ಶರಣರಿಗೆ ಶರಣು ಶರಣಾರ್ಥಿ
ಚಂದವ್ವ : ಶರಣು, ಶರಣರಿಗೆ ಶರಣು ಶರಣಾರ್ಥಿ
ಸುಂದ್ರ್ಯಾ : ಯಾವ ನಾಡಿನಿಂದ ಬಂದಿರುವಿರಿ ಶರಣರೆ?
ಚಂದವ್ವ : ಕಲ್ಯಾಣ ನಾಡಿನಿಂದ
ಸುಂದ್ರ್ಯಾ : ಮತ್ತೆಲ್ಲಿಗೆ ಪಯಣ?
ಚಂದವ್ವ : ಕಾಲೆಳೆದತ್ತ
ಸುಂದ್ರ್ಯಾ : ಯಾವ ದಿಕ್ಕಿಗೆ ಪೋಗುವಿರಿ ಶರಣರೇ?
ಚಂದವ್ವ : ಶರಣರಿಗೆ ದಿಕ್ಕು ದಿಶೆ ಯಾವುದು ಬೇಕಾಗಿಲ್ಲ ಮರುಳೇ! ನಡೆದದ್ದೇ ಕಾಯಕ ಕ್ಷೇತ್ರ ಮಲಗಿದ್ದೆ ಮುಕ್ತಿ ಕ್ಷೇತ್ರ, ವಾಸ ಮಾಡಿದ್ದೇ ಸುಕ್ಷೇತ್ರ.
ಸುಂದ್ರ್ಯಾ : ತಮಗೆ ಹೆಂಡರು ಮಕ್ಕಳು ಯಾರೂ ಇಲ್ಲವೆ ?
ಚಂದವ್ವ : (ಸಿಟ್ಟಿನಿಂದ) ಜೈ ಅಲಕ್ ನಿರಂಜನ್ ಕರದೋ ಇಸ್ಕೊ ಭಂಜನ್... ಕರ್ ದೇತಾ ಹೂ ದಿಗ್ ಬಂಧನ್
ಸುಂದ್ರ್ಯಾ : ಸಿಟ್ಟಿಗೆದ್ದವರು ಶರಣರಲ್ಲಾ ಅಂತಾ ಹೇಳ್ತಾರೆ ಶರಣರು ಶಿವಾ

ಚಂದವ್ವ : ಅದೇ ಸಂಕಟಕ್ಕಾಗಿಯೇ ವೈರಾಗ್ಯ ತಾಳಿದ್ದೇವೆ, ಎಲ್ಲಿಯವರೆಗೆ ಈ ಹೆಂಡರು ಮಕ್ಕಳು ಎಲ್ಲಿಯವರೆಗೆ ಈ ಹುಟ್ಟೂದು ಸಾಯೂದು ಪುನರಪಿ ಜನನ! ಪುನರಪಿ ಮರಣ ಅದಕ್ಕಂತೆಯೇ ಇದೇ ಜನ್ಮ ಕಡೆ ಮಾಡಬೇಕೆಂದು ನಾವೀಗ ಹಿಮವತ್ಪರ್ವತಕ್ಕೆ ಹೋಗಿ ಹನ್ನೆರಡು ವರುಷ ಅನುಷ್ಠಾನ ಮಾಡಿ ಬರುತ್ತೇವೆ. ಆದಿರಲಿ ನೀನು ಎಲಿ ಮಾರುವದನ್ನು ಬಿಟ್ಟು ಈ ಶರಣಮ್ಮನ ವೇಷ ಯಾಕ ಹಾಕಿರುವಿ ಮಗಳೇ.

ಸುಂದ್ರ್ಯಾ : ನಾನು ಎಲಿ ಮಾರೂದು ನಿಮಗ್ಹ್ಯಾಂಗ ಗೊತ್ತಾಯಿತು ಶರಣಾ ।

ಚಂದವ್ವ : ನಾವು ತಪಸ್ವಿಗಳು ನಮಗೆ ಹಿಂದಾಗಿರುವದು ಮುಂದಾಗುವದು ತಿಳಿಯುತ್ತದೆ ನೀನು ಹೂಗಾರ ಹುಡುಗನಿಗೆ ಪ್ರೀತಿಸುತ್ತಿದ್ದಿಲ್ಲವೆ ? ಮಗಳೇ.

ಸುಂದ್ರ್ಯಾ : ಪ್ರೀತಿಯೇನೋ ಇತ್ತ ಬಿಡ್ರಿ ಶರಣ್ರ ಆದರ ಅಂವ ನಡು ನೀರಾಗ ಕೈ ಬಿಟ್ಟು ಹೋಗ್ತಾನ ಅನ್ನೂದು ತಿಳದು ನಾನ ದೂರಾಗೀನ್ರಿ.

ಚಂದವ್ವ : ಇಲ್ಲ! ಅವನೆಂದೂ ದೂರಾಗುದಿಲ್ಲ ಮಗಳೇ ನಿನಗ ಪಂಜರದೊಳಗಿಟ್ಟು ಸಲುತಾನ

ಸುಂದ್ರ್ಯಾ : ಈ ಮಾತ ಖರೇವಂತೀರಾ ಶರಣರೇ

ಚಂದವ್ವ : ಈ ಮಾತು ಸುಳ್ಳಾದರ ನನ್ನ ಗಡ್ಡಾ ಮೀಸಿಕಿತ್ತಿ ನಿನ್ಕೈಯಾಗ ಕೊಡ್ತೀನಿ (ಕಿತ್ತಿಕೊಡುವನು)

ಸುಂದ್ರ್ಯಾ : ಅಯ್ಯ! ಹೂಗಾರ ಸುಂದ್ರ್ಯಾ

ಹಾಡು

ಪ್ರವೇಶ – ೨೮

ದೃಶ್ಯ ಹಿರೇಮಠ

(ಮಲಕೂಡದ ಶ್ರೀಗಳು ಪೂಜೆ ಮಾಡಿಕೊಳ್ಳುತ್ತಿರುವದು)

(ಹೊರಗೆ ಗಂಟಿ ಜಾಗಟೆಗಳ ಸಪ್ಪಳ)

ಶಿವಲಿಂಗೇಶ್ವರ : ಗಂಟಿ ಬಾರ್ಸಿ ಬಾರ್ಸಿ ನಮ್ಮ ನಿದ್ದಿ ಯಾಕ ಹಾಳ್ಮಾಡ್ತೀರೋ.

ಶಿವಯ್ಯ : ನಮ್ಮ ಮಲಕೂಡದ ಶಿವಾಚಾರ್ಯರು ಪೂಜಾ ಮಾಡ್ಕೋಳ್ಲಿಕ್ಕಿ ಕುಂತಾರ! ಅದ್ಕ ಗಂಟಿ ಬಾರಸೀನಿ. ನಾನು ಅವರ ಮರಿ

ಶಿವಲಿಂಗೇಶ್ವರ : ಮರಿ ಅರ ಆಗು, ನರಿ ಅರ ಆಗು ಗಂಟೆ ಬಾರ್ಸ ಬಾರ್ದಂದ್ರ ಬಾರಸಬಾರ್ದು

ಶಿವಯ್ಯಾ : ಅಧ್ಯಾಂಗೋ ಮಾರಾಯ ನಮ್ಮ ಗುರುಗಳದು ತ್ರಿಕಾಲ ಪೂಜಾ ಐತಿ ಅವರ ಪೂಜಾಕ ಗಂಟೆ, ಜಾಗಟೆ, ನಗಾರಿ, ಬಾರಸಬೇಕು ಅದು ಪದ್ಧತಿ ಐತಿ.

ಶಿವಲಿಂಗೇಶ್ವರ : ಅಂದ್ರ! ನೀ ಬಾರ್ಸ ಬೇಕಂತಿಯಾ। ಅಂದ್ರ ಬಾರ್ಸು ಅದು ಹ್ಯಾಂಗ ಸಪ್ಪಳ ಕೊಡ್ತಾದ ನೋಡ್ತೀನಿ.

ಶಿವಯ್ಯ : ಏ! ಹುಚ್ಚ! ಹೋಗ ಅತ್ಲಾಗ, ನಿನ್ನ ತಲಿ ಕೆಟ್ಟದಲ್ಲದ ನಮ್ಮ ತಲಿಯಾಕ ಕೆಡ್ಸಾಕ ಬರತೀದಿ *(ಗಂಟೆ ಬಾರಿಸುವನು ಸಪ್ಪಳ ಬಂದ ಆಗುವದು)*

ಯಾಕೋ! ಶಿವಯ್ಯಾ ಗಂಟಿ ಸಪ್ಪಳ ಕೇಳ್ಸುವಲ್ದು ಗಂಟೆ ಬಾರಸು

ಶಿವಯ್ಯ : ಇದೇನೋ ಮಾರಾಯ! ಎಷ್ಟು ಜೋರಾಗಿ ಹೊಡ್ದ್ರು ಸಪ್ಪಳನ ಕೇಳ್ಸೂವಲ್ದಲ್ಲ ಮೋಡಿ ಹಾಕ್ದೇನತ್ತ.

ಶಿವಲಿಂಗೇಶ್ವರ : *(ನಗುತ್ತ)* ಎಷ್ಟುಹೊತ್ತ ಪೂಜಾ ಮಾಡ್ಕೊಂತಾರೋ ನಿಮ್ಮ ಗುರುಗಳು

ಶಿವಯ್ಯ : ಮೂರ ಹೊತ್ತು ಪೂಜಾ ಮಾಡ್ಕೊಂತಾರ

ಶಿವಲಿಂಗೇಶ್ವರ : ಎಡ ಬಿಡದೆ ನಿತ್ಯ ಪೂಜಾ ನಡದೈತಿ ಗಂಟೆ ಜಾಗಟೆ, ನಗಾರಿ, ನೌಬತ್ತು ಗಳಿಲ್ಲದ ಅಖಂಡ ಪೂಜಾ ನಡದ ಐತಿ ಮತ್ಯಾಕ ಪೂಜಾ ಮಾಡ್ಕೋಬೇಕು.

ಸೋಮಶೇಖರ
ಶಿವಾಚಾರ್ಯ : *(ಒಳಗಿನಿಂದ ಬರುತ್ತ)* ಓಹೋ! ಪಶ್ಚಿಮದ ಗಿರಿ ಏರಿದ ಶಿವಲಿಂಗೇಶ್ವರ ಶಿವಯೋಗಿಗಳು.

ಶಿವಲಿಂಗೇಶ್ವರ : ಎಲ್ಲಿಯವರೆಗೆ ನಿಮ್ಮ ಪೂಜೆ ?

ಸೋಮಶೇಖರ
ಶಿವಾಚಾರ್ಯ : ವೈರಾಗ್ಯ ಚಕ್ರವರ್ತಿ ಘನ ಪಂಡಿತ ಪರಮ ಸದ್ಗುರುವರ ಅಬ್ಬೇ ತುಮಕೂರಿನ ಶ್ರೀ ವಿಶ್ವಾರಾಧ್ಯರು ತಮ್ಮ ತಮ್ಮಂದಿರಾದ ಬಸವಲಿಂಗ ಶಾಸ್ತ್ರೀಗಳಿಗೆ ಇದೇ ಮಾತನ್ನು ಕೇಳಿದ್ದರು. ಶಿವಯೋಗಿಗಳೇ ಆತ್ಮ ಬಲಿಯುವವರೆಗೂ ಬೇಕು ಈ ಪೂಜೆ ಪುರಸ್ಕಾರ.

ಶಿವಲಿಂಗೇಶ್ವರ : ಅಂದರೇ ಆತ್ಮ ಇನ್ನೂ ....

ಸೋಮಶೇಖರ
ಶಿವಾಚಾರ್ಯ : ನನ್ನ ಆತ್ಮ ಬಲಿತರು ಜಗತ್ತಿಗೆ ನಾವು ಆಚರಿಸುತ್ತ ಪಾಠ ಕಲಿಸಿಬೇಕಾಗಿದೆ ಅಂದಾಗ ನಮ್ಮ ಗುರುಪೀಠಕ್ಕೆ ಶ್ರೇಯಸ್ಕರ. ಹೆಚ್ಚಿನ ವ್ಯಾಸಂಗ ಮಾಡಿದ ಶಿಕ್ಷಕನೊಬ್ಬ ಮಕ್ಕಳಿಗೆ ತಾನು ಮೊದಲು ಕಲಿತ ಅಕ್ಷರಗಳನ್ನ ಹೇಗೆ ಕಲಿಸುತ್ತನೋ ಹಾಗೇನೆ ಪೀಠಕ್ಕೆ ಬಂದವರು ತಾವೆಷ್ಟೇ ತಿಳಿದುಕೊಂಡಿದ್ದರೂ ಕೂಡ ಪೂಜೆಮಾಡಿಕೊಳ್ಳುವದು ನಮ್ಮಗಳ ಕರ್ತವ್ಯ.

ಶಿವಲಿಂಗೇಶ್ವರ : *(ನಗು)* ಕ್ರಮ ತಪ್ಪಿ ನಡೆವುದರಿಂ ಕಷ್ಟಮಿನ್ನುಂಟೆ ? ಹೊಲವನ್ನು ಬಿತ್ತ ಬೇಕಾದರೆ ತತಿನೋಡಿ ಬಿತ್ತ ಬೇಕು. ಆ ತತಿಗೆ ಬಿತ್ತದಿದ್ದರೆ ಅದು ಕ್ರಮ ತಪ್ಪಿದಂತಾಗುತ್ತದೆ. ಅಲ್ಲವೆ? ನಿಜ ನಿಜ ಜಗತ್ತಿಗೆ ಬೇಕು ಈ ಸಾಧನಮಾರ್ಗ. ಸಾಧನದಿಂದ ಸಿದ್ಧಿ ಶುದ್ಧ ಬುದ್ಧಿ.

ಶಾಂತಯ್ಯ : ಏನಪ್ಪಾ ! ಯಪ್ಪಾ! ನಿನ್ನಾಕಲಾಗ ನನಜೀವ ಸಾಕ ಸಾಕಾಗಿ ಹೋಯ್ತು. ಪಾಪ ಪೂಜಾ ಮಾಡ್ಕೊಳ್ಳಕ್ಕ ಕುಂತ ಮಲಕೋಡದ ಸೋಮಶೇಖರ ಶಿವಾಚಾರ್ಯರಿಗ್ಯಾಕ ಗಂಟ ಬಿದ್ದೀದಿ. ಎಷ್ಟು ಬಡದರು ಶಬ್ದ ಕೇಳ್ಲಾರ್ದಂಗ ಮಾಡೀದಿ. ಮೋಡಿಕಾರ ಆಟಾ ಆಡಬ್ಯಾಡ ನಡಿ ಕಲ್ಮೇಶ್ವರ ಗುಡೀಗಿ.

ಶಿವಲಿಂಗೇಶ್ವರ : *(ನಗುತ್ತ)* ಬಹುತ ಗಯಾ, ಥೋಡಿರಹಿ, ಥೋಡಿಬಿ ಅಬ್ ಜಾಯೆ, ಬಹಳಷ್ಟು ಹೋಗಿದೆ ಹೊತ್ತು, ಸ್ವಲ್ಪ ಉಳಿದಿದೆ ಅದು ಹೋಗುತ್ತದೆ, ಹೋಗುವದರೊಳಗನ ಏನ್ ತಿದ್ದಕೋ ಬೇಕಾಗಿತ್ತೋ ಅದನ್ನ ತಿದ್ದಬೇಕ್ಕೋ.ನಡಿಯೋ ಶಾಂತಯ್ಯ ನಡಿ, ನಡಿ ನೀವು ಪೂಜಾ ಮಾಡಿಕೊಳ್ಳಿರಿ *(ಆಗ ಆ ಗಂಟೆ ಜಾಗಟೆಗಳು ತನ್ನತಾವೇ ಶಬ್ದಕೊಡ ತೊಡಗಿದ್ದವು) (ಹೋಗುವನು)*

ಸೋಮಶೇಖರ
ಶಿವಾಚಾರ್ಯ : ಎಂತಹ ಅದ್‌ಭೂತಶಕ್ತಿ ಪಡೆದುಕೊಂಡಿದ್ದಾರೆ. ಈ ಶಿವಯೋಗಿಗಳು ಧನ್ಯ ಧನ್ಯ ಶಿವಲಿಂಗೇಶ, ಏಳು ಜನುಮದ ಕಲುಷವನು ಜಯಿಪಯೋಗಿಯುವರ ನೀನು. ಏಳು ತಾರಾಗ್ರದೊಳು ಕೇಳುವ ಸುನಾದವು ನೀನು. ಏಳುಮಲಪಾಶ ದೂರ ಶಂಭುಲಿಂಗನೇ ನೀನು. ಕೇಳುತಿಹೆನು ಓಂಕಾರ ಸುನಾದವನು ಆ, ಓಂಕಾರದ ಝೇಂಕಾರವು ಅಂಬರದ ತುಂಬೆಲ್ಲ ಬಿಂಬಿಸಿದೆ. ಸಾಕು ಸಾಕು ಮಾಡೆಂದು ಹೇಳಿದರೂ

ತಂತಾನೆ ಹಕ್ಕಿಗಳಿಂಚರದಿ ಪ್ರಾಣಿಗಳ ಗುಡುಗಿನಲಿ ನದಿಗಳ ತರಂಗದಲಿ ತಂಗಾಳಿಯಲಿ ಕೇಳಿಬರುತ್ತಿದೆ.

ಪ್ರವೇಶ – ೨೯

ದೃಶ್ಯ ರಸ್ತಾ

ಚಂದವ್ವ : ಹಂಗ ಹಿಂಗ ಮಾಡಿ ಚಂದ್ರಿ ಕೊರಳಾಗ ತಾಳಿಕಟ್ಟಿ ಬಿಟ್ಟಾ್ಯ ಆಕಿನ್ನ ಒಂದ ಮಾಡ್ಕೋಬೇಕಂತ ಏನ ಗುದಮುರಗಿ ಆಯ್ತೋಯಪ್ಪಾ! ಬ್ಯಾಡದು ಸುದ್ದಿ, ಇದ ಗುದಮುರಗಿ ಶಿವನಾಮದೊಳಗ ಆಗಿತ್ತಂದ್ರ ನಾನೂ ದೇವರಾಗಿ ಕುಂದ್ರತಿದ್ದ್ಯಾ ಏನ್ಮಾಡ್ತಿ. ನಮ್ಮ ಹಣೆಬಾರ್ದಾಗ ಬರದಾದ ಏಳೂರ ತಿರಗೂದು. ಒಂದ ಸ್ವಲ್ಪ ತಡಮಾಡಿ ಮನೀಗಿ ಹ್ವಾದ್ರ ಸಾಕು ಹಾಸಿಗಿ ಸುರಳಿ ಹೊರಗ.

ಸುಂದ್ರ್ಯಾ : ಓಹೋ! ಇಲ್ಲೇ ನಿಂತೈತಲ್ಲ ನಮ್ಮ ಆಸಾಮಿ, ಕಷ್ಟಕ್ಕ ಕರಿಬ್ಯಾಡ್ರೀ ಊಟಕ್ಕ ಮರಿಬ್ಯಾಡ್ರಿ. ಕೆಸರಟಗಿ ಕ್ವಾಣ ನಿಂತಂಗ ಯಾಕ ನಿಂತೀದಿ ಹೋಗಂಗಿಲ್ಲೇನು ಕೆಲಸಕ್ಕ.

ಚಂದವ್ವ : ಎಷ್ಟು ದುಡದ್ರು, ಏನೈತಿ ಒಂದು ಅಂದ ಕಾಣ್ಲೆಲ್ಲ ಒಂದ ಚಂದ ಕಾಣ್ಲೆಲ್ಲ.

ಸುಂದ್ರ್ಯಾ : ಯಾಕ! ಯಾರ ನಿನಗ ಅಡ್ಡಾಗಟ್ಟ್ಯಾರ ಬ್ಯಾಡಂತ

ಚಂದವ್ವ : (ಅಳುತ್ತ) ಮದುವಿ ಆಗಿ ಐದಾರ ತಿಂಗಳಾಯ್ತು ಎಷ್ಟು ಮಕ್ಕಳ ಗ್ಯಾವಂತ ಕೇಳಿದರ ನಾ ಏನ್ ಹೇಳ್ಲಿ.

ಸುಂದ್ರ್ಯಾ : ಅದ್ಕ ಅಳ್ತೇನು ನೀನು! ಮದುವಿ ಆಗೂದ್ಕಿಂತ ಮುಂಚೆನೆ ಹೇಳಿದ್ದಿ ಅಂದ್ರ ಎಂಟ್ಹತ್ತ ಮಕ್ಕಳ ಹಡ್ಕೊಂಡು ಬಂದು ನಿನಸರಿ ಮದವಿ ಆಗ್ತಿದ್ದ್ಯಾ. ಮೂಳಾ ಅಲ ಮೂಳಾ ಎಲ್ಲಿಟ್ಟೀದಿ ಬುದ್ಧಿ, ಬುದ್ದಿರ ಐತಿಲ್ಲ ನಿನ ಯಾರ್ದೊ ಆಸ್ತಿ ತಂದು ಮತ್ತೊಬ್ಬರ ಮನಿ ತುಂಬೊ ಹೆಣ್ಣಲ್ಲ. ನನಗೂ ಅಟ ಮಾನ ಐತಿ, ಮರ್ಯಾದಿ ಐತಿ.

ಚಂದವ್ವ : ಅದ್ಕಂತ ನಾನೂ ನಿನಗ ಕೈ ಹಿಡ್ದೀನಿ. ನಾ ಮಾಡ್ಕೊಂತೀನಿ, ನಾ ಮಾಡ್ಕೊಂತೀನಿ ಅಂತ ಸಾಲ ಹಚ್ಚಿ ನಿಂತವರಿಗೆಲ್ಲಾ ಸರ್ಸಿ ನಿನ್ಕೈಹಿಡದೀನಿ.

ಸುಂದ್ರ್ಯಾ : ನನಗೂ ಮಸ್ತ ಮಂದಿ ದುಂಬಾಲ ಬಿದ್ದಿದ್ರಲ್ಲ, ನಾ ಮಾಡ್ಕೋಂತೀನಿ ಅಂತ. ನಾನು ಮಗಳ ಐದಾರ ತಿಂಗಳಗಟ್ಲೆ ನನ ಮನ್ಯಾಗಿರಬೇಕು. ನಾ ಹೇಳಿದ ಕೆಲ್ಸಮಾಡಬೇಕು. ಆವಾಗ ಅದೂ ನನ ಮನಸಿಗಿ ಬಂದ್ರ ಮಾಡಿಕೊಳ್ಳುವಾಕಿ ಅಂತ ಹೇಳ್ದ್ಯಾ

ಚಂದವ್ವ : ಮತ್ತ ನನಗ್ಹ್ಯಾಂಗ ಮಾಡ್ಕೊಂಡಿ

ಸುಂದ್ರ್ಯಾ : ನಿನ್ನಲ್ಲಿರುವ ನಿಷ್ಠಿಕಂಡು ನಡಿ ನಡಿ ಹೋಗೋನು ಬಾ ಅಲ್ಲ ಮಾರಾಯ ನಮ್ಮ ಇಟಗಿ ಮುತ್ತ್ಯಾ ಪಿಂಜಾರ ನಬುಮಾನ ಮನ್ಯಾಗ ಹೋಗಿ ರೊಟ್ಟಿ ಬಂಡಿ ಮ್ಯಾಲೊಂದು ಕಾಲು, ಸುಡೋಹಂಚಿನ್ಯಾಗೊಂದು ಕಾಲಿಟ್ಟು ನೀ ಹ್ಯಾಂಗ ರೊಟ್ಟಿ ಮಾಡ್ತಿ ಮಾಡು ಅಂತ ನಿಂತ ಬಿಟ್ಟಿದ್ದನಂತ ಕಾಲ ಸುಡಲಿಲ್ಲೇನು ಅಂತೀನಿ.

ಚಂದವ್ವ : ಸುಡ ಸುಡೋ ಔಡ್ಲಣ್ಣಿ ಕುಡ್ದನಂತ?

ಸುಂದ್ರ್ಯಾ : ತಕಪಕಾ ಅಂತ ಕುದಿಯೋ ಎಣ್ಣ್ಯಾಗ ಕೈ ಇಟ್ಟು ಭಜಿ ತಿಂದ್ನಂತ

ಚಂದವ್ವ : ಅದ ಪಿಂಜಾರ ನಬೂಮಾಗ ಒಂಟಿಗ್ಯೆಲೆ ಶರಗ ಚಾಚಲೇ ಅಂತ ಬಾಳಿಹಣ್ಣ, ನಿಂಬಿಕಾಯಿ, ಟೆಂಗ ಹಾಕಿದ್ನಂತ ಅಂದಂಗ ಗಂಡಕೂಸ ಹುಟ್ಟ್ಯಾದಂತ.

ಸುಂದ್ರ್ಯಾ : ಮರತೂರ ಕರಬಸಪ್ಪ ಕಾಳ್ನೂರ ಅವರ ಹೊಲಕ ಹೋಗಿ ಅವ್ವಮಗ ಶರಣಬಸಪ್ಪಗ ಕರದು ತಂದಿ ತಲಿಮ್ಯಾಲಿನ ಪಟಗಾ ಹುಡಗನ ತಲಿ ಮ್ಯಾಲಿಟ್ಟು ಅವನ ಕೊಳ್ಳಾಗಿನಲಿಂಗ ತೆಗೆದು ಹುಡುಗನ ಕೊಳ್ಳಾಗ ಹಾಕಿ ಕರಬಸಪ್ಪಗ ಮೂರಸಾರಿ ಉಗಳಿ, ಹುಡುಗನ ಬೆನ್ನ ಚಪ್ಪರ್ಸಿ ಹ್ವಾದ ವರ್ಷೊಪ್ಪತ್ತ್ಯಾಗ ಕರಬಸಪ್ಪ ಸತ್ತ ಹ್ವಾದ್ನಂತ, ಹ್ಯಾಂಗ ಕಂಡ ಹಿಡಿದರಬೇಕಂತೀನಿ.

ಚಂದವ್ವ : ಅದೇ ಮರತೂರಿನ ವಿಧವೆ ಶರಣಮ್ಮನ ಕೈಯಾಗಿನ ತಂಬಗಿ ತೊಗೊಂಡು ತಿಳಗೂಳದಾರಿಗಿ ಒಗ್ದ, ಹೋಗ ಹುಚರಂಡಿ ಅಂತ ಹೇಳಿದ ಆರೇ ತಿಂಗಳ್ದಾಗ ತಿಳಗೂಳದ ಸಂಗಪ್ಪನ ಸರಿ ಮರು ಮದವಿ ಆಯ್ತುಂತ.

ಸುಂದ್ರ್ಯಾ : ಖಣದಾಳದ ದೊಡ್ಮನಿ ಸಿದ್ರಾಮಪ್ಪನ ಕೈಯಾಗಿನ ಗಡಿಯಾರತೊಗೊಂಡು ಗ್ವಾಡೀಗಿ ಹೊಡದ್ರ ಎಲ್ಲಾ ಒಡ್ದ ಚೆಲ್ಲಾಪಿಲ್ಲಿ ಆಯ್ತಂತ ಸಿಟ್ಟಿಗೆದ್ದಾಗ ಹ್ಯಾಂಗಿದ್ದ ಗಡಿಯಾರ ಹ್ಯಾಂಗ ಇತ್ತಂತ.

ಚಂದವ್ವ : ಅದೇ ಖಣದಾಳದ ಬೀರಪ್ಪ ಪೂಜೇರಿ ಕೊಡದ ತುಂಬಾ ಹಾಲಿದ್ದಾಗ ಮುತ್ಯಾ ಹೋಗಿ ಹಾಲ ಕೊಡಲೇ ಅಂತ ಕೇಳಿದಾಗ ಇಲ್ಲಿ ಮುತ್ಯಾ ಹಾಲ ಇವತ್ತ ಬಂದಿಲ್ಲಾಂತ ಕಳಿಸಿದ್ನಂತ. ಅಂವಾ ಹ್ವಾದ ಕೂಡ್ಲೆ ಕೊಡಾ ನೋಡಿದ್ರ ಖಾಲಿ ಕೊಡಾನ ಇತ್ತಂತ.

ಸುಂದ್ರ್ಯಾ : ಇದ ಇಟಗಿ ಶಿವಯ್ಯ ಈಳಗೇರ ಗಾಡಿ ಹೂಡ್ಕೊಂಡು ಹೊಲ್ಕ ಹೋಗುಮುಂದ ಠಣ್ ಅಂತ ಗಾಡ್ಯಾಗ ಜಿಗದ ಹೊಡತೀನಿ ಸರಿಯಲೇ ಗಾಡಿ ಅಂದಾಗ ಪಾಪ ಅಂವ ಸರ್ದ್ನಂತ ಗಾಡಾಗಿದ್ದ ಕೊಡ್ಲಿ ಎತ್ತಿ ಎತ್ತಿನ ಡುಬ್ಬದಾಗ ಇಳಿಸಿ ಬಿಟ್ರ ಎತ್ತ ಅಲ್ಲೆ ಕುಂದ್ರಬಿತ್ತು. ರಕ್ತ ಧಾರಾಕಾರ ಸುರದ ಹಳ್ಳ ಹರ್ದಂಗ ಹರೀತು. ಮುತ್ಯಾ ಗೌಡ್ಯಾಗ್ನಿಂದ ಹಾರಿ ಓಡಿ ಹೋಗಿಬಟ್ನಂತ ಹಂಗ ಹಿಂಗ ಮಾಡಿ ಗಾಡಿ ವಾಪಸ ತಂದ ಎತ್ತು ಸಾಯ್ತದ ಅಂತ ಚಿಂತಿ ಮಾಡ್ಕೊಂಡ ಕುಂತಾಗ ಮತ್ತ ಬಂದ ಯಾಕಳ್ತಲೇ ನಾ ಎಲ್ಲಿ ಹೊಡದೇನಿ ಅಂತ ಎತ್ತಿನ್ಯಾ್ಯಲ ಕೈ ಎಳದ ಬಿಟ್ಟರ ಗಾಯದ ಕಲಿಸಹಿತ ಇದ್ದಿದ್ದಲ್ಲಂತ ನೋಡಾ.

ಚಂದವ್ವ : ಮಾದರ ಶರಣಪ್ಪಾ ಸಣ್ಣ ಕೂಸಿದ್ದಾಗ ಜಡ್ಡಾಗಿ ಈಗ ಸಾಯ್ತಾದ, ಆಗ ಸಾಯ್ತಾದಂತ ಅಳಾಕ ಹತ್ತಿದಾಗ ಮುತ್ಯಾ ಹ್ವಾದವ್ನ ಆ ಕೂಸಿಗೆ ರಗಟ್ಯಾಗ ಸುತ್ತಿ ಬಚ್ಚಲ ಮೋರ್ಯಾಗ ಮೂರ ದಿವಸ ಇಟ್ಟು ಹೊರಗ ತೆಗೆದಾಗ ಆ ಕೂಸು ಎದ್ದು ಆಡಾಕ ಹತ್ತಿತಂತ ಮಾರಾಯ

ಸುಂದ್ರ್ಯಾ : ಅಲ್ಲ ಮಾರಾಯ! ಈಗೀಗ ೨-೩ ವರ್ಷಾತು ಜರ ಜರಾ ಅರವಿನ್ಯಾಗ ಬಂದಂಗ ಕಾಣಸ್ತಾನ. ಆಗಿದಷ್ಟ ಅರ್ಭಟ ಈಗ ಇಲ್ಲ ನೋಡು ಮೈಮ್ಯಾಗ ಯಾವತ್ತು ಒಂದು ಅರವಿ ಇರತಾದ.

ಚಂದವ್ವ : ಈಗೀಗಂತೂ ಸೋಡಾ ಕುಡಿತಾನಂದ್ರ ಬ್ಯಾಡದು ಸುದ್ದಿ ಒಂದದಿನಕ್ಕ ಎರಡ ಡಜನೇನು ಮೂರು ಡಜನೇನು ಕಲಬುರ್ಗಿಯಿಂದ ತರಲಿಕ್ಕಿ ಅಗಸರ ಸಾಯಬಣ್ಣ ಖಾಯಂ ಕೂಲಿ ಮ್ಯಾಲ ಠರಾವು ಮಡ್ಯಾರಂತ ನೋಡು.

ಸುಂದ್ರ್ಯಾ : ಶಹಾಬಾದ ಶಂಕರ ಬಂದು ಹೊಲಾ ತಗೊಳ್ಳಿಕ್ಕಿ ರೂಪಾಯಿಕೊಟ್ಟರ ಬ್ಯಾಡಲೇ ತಗೊಬ್ಯಾಡ್ರಿ ಅದರಿಂದ ಮುಂದ ಕೆಡ್ತಾದ ಬ್ಯಾಡ, ಸುಮ್ನ ಕಲ್ಮೇಶನ ಗುಡಿ ಮ್ಯಾಲಿನ ಶಿಖರ ಕಟ್ಟಿಸು ಅಂತ ಹೇಳಿ ಶಿಖರ ಕಟ್ಟಿಸಿ ಬಿಟ್ಟರು ಎಷ್ಟ ಚಂದ ಕಾಣಸ್ತಾದ ಈಗ ಗುಡಿ. ನಡಿ ಮಾರಾಯ ಮುತ್ಯಾನ ಪುರಾಣ ಹೇಳ್ಬೇಕಾದ್ರ ಒಂದ್ಹಗಲ ಒಂದರಾತ್ರಿ ಸಾಲುದಿಲ್ಲ.

(ಹೋಗುವರು)

ಪ್ರವೇಶ – ೩೦

ದೃಶ್ಯ ಕಲ್ಮೇಶ್ವರ ಗುಡಿ

ಮಲ್ಲೇಶಪ್ಪ : ಬಸವಂತಪ್ಪ ಹತಗುಂದಿಯವರೇ! ಇತ್ತಿತ್ತಲಾಗಿ ನಮ್ಮ ಗುರುಗಳು ಮೌನಿಯಾಗಿ ಬಿಟ್ಟಿದ್ದಾರೆ.

ಬಸವಂತಪ್ಪಾ : ಅದುವೇ! ಬ್ರಹ್ಮ ಜ್ಞಾನಿಗಳ ಲಕ್ಷಣ ಅಂತ

ಮಲ್ಲೇಶಪ್ಪ : ಜ್ಞಾನಕ್ಕೆ ಕೊನೆಯಿಲ್ಲ, ಬಳ್ಳಿಗೆ ತೆನೆಯಿಲ್ಲ, ಜ್ಞಾನದ ತುತ್ತ ತುದಿಯನ್ನ ಮುಟ್ಟಿದವರು ಯಾರೂಯಿಲ್ಲ. ಜ್ಞಾನವನ್ನ ಸಂಪಾದನೆ ಮಾಡಿಕೊಂಡಷ್ಟು ಮೌನಿಗಳಾಗುತ್ತಾರೆ ಹೊರತು ನಾನು ಮೌನಿಯಾಗಿದ್ದೇನೆ ಎಂದು ಯಾರು ಹೇಳಿಕೊಳ್ಳುವುದಿಲ್ಲ.

ಬಸವಂತಪ್ಪ : ನಿಜ! ಮಲ್ಲೇಶಪ್ಪಣ್ಣಾ! ಭಾವವೆಂಬ ಭಾವಿಯೊಳಗ ಅರುವಿನ ಜಲ ತುಂಬ್ಲಿಕ್ಕಿ ಜ್ಞಾನದ ಬಿಂದ್ಗೀಗಿ ಅನುಭಾವದ ಹಗ್ಗಾ ಕಟ್ಟಿ ಬಿಟ್ಟರ ಅನುಭಾವದ ಹಗ್ಗಾ ಸಾಲ್ದಂಗ ಹೋಯ್ತು ಅಂತ. ನಾವೆಷ್ಟು ಅನುಭವದ ಆಳಕ್ಕಿಳಿದ್ರು ತಳಾನ ಹತ್ತುದಿಲ್ಲ, ಅದು ಅಪರಂಪಾರ ಐತಿ.

ಮಲ್ಲೇಶಪ್ಪ : ನನಗ ಎಲ್ಲಾನು ತಿಳಿದೈತಿ ಅಂತ ಯಾರ ಹಾರ್‍ಯಾಡ್ತಾರ ಅವ್ರಿಗಿ ಏನೇನು ತಿಳಿದಿರಂಗಿಲ್ಲಾ

ಬಸವಂತಪ್ಪಾ : ಯಾರು ನಿಜವಾದ ಜ್ಞಾನದ ದರ್ಶನ ಮಾಡಿಕೊಂಡಿರತಾರೋ ಅವರು ಅದರ ಬೃಹತ್ತೆಯನ್ನ, ಮಹತ್ತತೆಯನ್ನ, ಭವ್ಯತೆಯನ್ನ ದಿವ್ಯತೆಯನ್ನ ಕಂಡು ಕಾಣದಂತೆ ಕುಳಿತಿರುತ್ತಾರೆ ಅದಕ್ಕೆ ನಮ್ಮ ಗುರುಗಳೇ ಸಾಕ್ಷಿ.

ಮಲ್ಲೇಶಪ್ಪ : ಅಂತೆಯೇ ನಮ್ಮ ಗುರುಗಳು ಒಲೆಯ ಮೇಲೆ ಮಾಡಿದ ಅಡಗಿ ಉಣ್ಣಲಿಲ್ಲ, ತಲೆಯೆಂಬ ಒಲೆಯ ಮೇಲೆ ಅಮೃತವನ್ನ ಮಾಡಿ ತಾವು ಉಂಡಿದ್ದಾರೆ, ಜನ ಸಮುದಾಯಕ್ಕೂ ಹಂಚಿದ್ದಾರೆ.

ಬಸವಂತಪ್ಪ : ಮೊನ್ನೆ ಆದ ೧೯೪೭ರ ರಜಾಕಾರ ಹಾವಳ್ಯಾಗ ಮಸೂತಿ ಮ್ಯಾಲಿನ ಕಲ್ಲುಗಳು ಕೆಳಗ ಬಿದ್ದಾಗ ನಮ್ಮಪ್ಪವರು ಇವು ಶಿವನ ರುಂಡಗಳು ಅಂತ ತೆಗದಿಟ್ರು

ಮಲ್ಲೇಶಪ್ಪ : ನಮ್ಮ ಕಾಶೀಮಸಾಬ ಯಾವಾಗ್ಲೂ ಅಂತಿದ್ದನ್ರಿ ನನ್ಜೀವ ನಿನ್ನ ಪಾದದ ಕೆಳಗ ಹೋಗ್ಲಿ ನಾನದ್ಕ ಅಂಜಲಾದಿಲ್ರಿ ಅಂತ ಅಂದಂಗನ ಶರಣರ ಮುಂದನ ಎಳಕೊಂಡು ಕೊಲೆ ಮಾಡಿದ್ರು

ಮಲ್ಲೇಶಪ್ಪ : ಆದರೂ ಶರಣರಿಗೆ ಮರಣವೇ ಮಹಾನವಮಿ ಆಯ್ತು. ಆತ ಬ್ಯಾನಿ ಬ್ಯಾಸರಕಿಯಿಂದ ಸಾಯಲಿಲ್ಲ. ಒಬ್ಬರಗಿ ಒಲು ಆಗಿ ಸಾಯಲಿಲ್ಲ, ವೀರ ಮರಣ ಪಡ್ಕೊಂಡ ನಮ್ಮ ಕಾಶೀಮಸಾಬ.

ಬಸವಂತಪ್ಪ : ಅಪ್ಪಾವರು ಬ್ಯಾಡಂದ್ರ ಬಿಡತಿದ್ರೋ ಏನೋ ಸುಮ್ನೆಕುಂತ ಬಿಟ್ರು

ಮಲ್ಲೇಶಪ್ಪಾ : ಭವಿಷ್ಯ ಬಲ್ಲವರು, ಬ್ರಹ್ಮ ಬರಹವನ್ನ ತಪ್ಪಿಸ್ಲಿಕ್ಕಿ ಯಾರಿಗೂ ಸಾಧ್ಯವಿಲ್ಲ.

ಬಸವಂತಪ್ಪ : ಇನ್ನುಳಿದ ಎಲ್ಲಾ ಮುಸ್ಲಿಂರಿಗೆ ಏನೇನು ಮಾಡ್ಬ್ಯಾಡ್ರಿ ಅಂತ ಹೇಳಿದ್ರು

ಮಲ್ಲೇಶಪ್ಪ : ಕಲಬುರ್ಗಿಗೆ ಹೋದ ಅಗಸರ ಸಾಂಬಣ್ಣಾ ಸೋಡಾಬಾಟ್ಲಿಗಳು ತಗೊಂಡ ಬಂದಿರಬೇಕಂತೀನಿ

ಬಸವಂತಪ್ಪಾ : ಮರಾಮರಿ ಮಲಗಿ ಬಿಟ್ಟಾರ. ತುತ್ತನ್ನವಿಲ್ಲ ಅವರ ಹೊಟ್ಯಾಗ. ಉತಾಮಾಡ್ರಿಯಪ್ಪಾ ಅಂದಾಗ ಖಣದಾಳ ನೀಲಮ್ಮಗೌಡತಿ ಮಾಡಿದ ಅಡಗಿ ತಂದ್ರ ಉಣ್ತೇನಿ ಅಂತಾರ

ಮಲ್ಲೇಶಪ್ಪ : ಅವರಂತೂ ಲಿಂಗೈಕ್ಯರಾಗಿ ಇಪ್ಪತ್ತು ವರ್ಷ ಆಗ್ಯಾದ.

ಬಸವಂತಪ್ಪ : ಅಂದಂಗ ಛಟ್ಟಿ ಅಮಾಸಿದಿವಸ ನಂದಿಕೂರ ಭೋಜಪ್ಪಗೌಡ್ರು ಲಿಂಗೈಕ್ಯರಾದರು

ಮಲ್ಲೇಶಪ್ಪ : ಅಂದ್ರ ಐದ ದಿವಸಕ್ಕ ಇವರ ಜಾತ್ರೀನೂ ಆಗ್ತಾದ ಅಂದಂಗಾಯ್ತು.

ಬಸವಂತಪ್ಪ : ಅವರಂದದ್ದಂತೂ ಇವತ್ತಿಗೂ ಸುಳ್ಳಾಗಿಲ್ಲೆಪ್ಪಾ ಅಂದಂಗ ಎಲ್ಲಾ ನಮ್ಮ ಗುರು ಬಾಂಧವ್ರಿಗಿ ಹೇಳಿ ಕಳಸೂನ ರಾಯಗುಂಡಪ್ಪ ಸಾವ್ಕಾರು, ರಾಮರಾವ ಕುಲಕರ್ಣಿ, ಆನಂದಪ್ಪ ಪೂಜ್ಯಾರಿ, ರುಕ್ಮುದ್ದೀನ, ಹೂಗಾರ ಶರಣಪ್ಪಾ ಅವರಿಗಿ ಕರಸಿ ಹೇಳಿ ಬಿಡೋಣ.

ಮಲ್ಲೇಶಪ್ಪ : ಹಾಜಿ ಸುಲ್ತಾನ ಬಾಷಾ ಖಾದರಿಯವರು ಬೀದರದಿಂದ ಬಂದು ಇಲ್ಲಿ ಕೆಲವು ದಿವಸ ವಾಸ ಮಾಡಿದ ಸ್ಥಳದಲ್ಲೆ ಅವರ ಚಿಲ್ಲಾ (ಸಮಾದಿ) ನಿರ್ಮಿಸಿ ದರ್ಗಾಕಟ್ಟಿದ್ದಾರೆ. ಅವರು ಅಲ್ಲಮ ಪ್ರಭುಗಳ ಅಪರವತಾರವಂತೆ. ಬೀದರದ ಅವರ ಸಮಾಧಿಯಲ್ಲಿ ಒಂದೆಡೆ ಭಜನೆ ಒಂದೆಡೆ ಪಾತಿಹಾಕೊಟ್ಟು ಊದು ಹಾಕುತ್ತಿದಂತೆ ಅಂತೆಯೇ ಇವರ ದರ್ಗಾದ ಮುಂದುಗಡೆಯ

ತಮ್ಮ ಮಂದಿರವಾಗಲಿ ಅಂತ ಈ ಊರ ಹಿರಿಯರಿಗೆ ತೋರಿಸಿದ್ದಾರಂತೆ.

ಬಸವಂತಪ್ಪ : ಪ್ರತಿವರ್ಷ ಶಾಲು ಹೊದಿಸಿ ಸನ್ಮಾನ ಮಾಡುವ ಹೈದರ ಪಟೇಲರು ಬಂದಾರ, ಸೋಮನಾಥನ ಹಳ್ಳಿ ಸಿದ್ದಮ್ಮ ಶಿವಶರಣಿಯವರು ತಿಳಿಗೂಳದ ಭಜನಿಮ್ಯಾಳದೊಂದಿಗೆ ಬಂದಿಳದಾರ. ಕೋಳ್ಕೂರಿನ ಚಂದಮ್ಮ ಶಿವಶರಣಿ ಗುರುಗಳ ಸೇವಾ ಮಾಡ್ಕೊಂತ ಇಲ್ಲೇ ಅದಾಳ, ಅಗಸರ ನೀಲಮ್ಮ ಅದು ಅಲ್ದ ಊರಿಗಿ ಊರೇ ಬಂದು ಬಂದು ದರ್ಶನ ಮಾಡ್ಕೊಂಡು ಹೋಗ್ಲಿಕ್ಕಿ ಹತ್ಯಾರ. ಪಡಸಾವಳಗಿ ಪ್ರಭಯ್ಯಾ ಸ್ವಾಮಿಗಳು ಬಂದಾರ;

ಪ್ರವೇಶ – ೩೧

ದೃಶ್ಯ ಕಲ್ಮೇಶ್ವರ ಗುಡಿ

(ಸಾಧು ಶಿವಲಿಂಗೇಶ್ವರರು ಅತ್ಯಂತ ಕ್ಷೀಣ ಸ್ವರದಲ್ಲಿ ಮಾತಾಡುವರು)

ಶಿವಲಿಂಗೇಶ್ವರ : ಮಗುವಾಗಿ ಕಂಡೀರಿ. ಗುರುವೆಂದು ಪೂಜಿಸಿದಿರಿ. ಶಿವನಿವನೆಂದು ಧ್ಯಾನಿಸಿದಿರಿ. ಇಟಗಿಯ ನನ್ನ ಪರಮ ಭಕ್ತರೆ! ನಾವು ಈ ಭವಕೆ ಬಂದ ಪಾತ್ರ ಮುಗಿಯಿತು. ಆ ಶಿವನಾದೇಶದಂತೆ ಇಂದು ಛಟ್ಟಿ ಆದ ಪಂಚಮಿಗೆ ಹೋಗಲೇಬೇಕು, ನೀವೆಲ್ಲರು. ನಗು ನಗುತ ಬೀಳ್ಕೊಡಬೇಕು.

ಎಲ್ಲರೂ : ತಂದೆ!

ಶಿವಲಿಂಗೇಶ : ಯಾರೂ ದುಃಖಿಸಬಾರದು. ಇದು ಕರ್ಮ ಶರೀರ ಪಂಚ ತತ್ವಗಳಲ್ಲಿ ಬೆರೆತು ಒಂದಾಗಿ ಅನಂತತೆಯಲ್ಲಿ ಅನುರಣಿತವಾಗುವದು.

ಚನ್ನಬಸಯ್ಯ : ಇಲ್ಲಿಯವರೆಗೆ ಕೂಸಿನಂತೆ ಕಾಡಿದೆ; ಬಾಲನಂತೆ ಓಡಾಡಿಸಿದೆ, ಈ ನಿನ್ನ ಆಟದಲಿ ಇಲ್ಲಿಯವರೆಗೆ ಅದು ಹೇಗೆ ಸಮಯ ಗಳೆದೆವೋ? ನನಗೇನೆ ಗೊತ್ತಾಗಲಿಲ್ಲ ತಂದೆ!

ಶಾಂತಯ್ಯಾ : ನಿನ್ನ ಲೀಲಾಮಯವಾದ ಆಟದೊಳಗ ನಮ್ಮನ್ನ ಕೂಡಿಸಿಕೊಂಡು ಈಗ ಕಡಿಮಾಡಿ ಹೋಗೊದು ನಿನ್ನ ಧರ್ಮವೇನು ತಾತ.

ಶಿವಲಿಂಗೇಶ : ಹುಚ್ಚಪ್ಪ! ಭೂಮಿಮ್ಯಾಲ ಹುಟ್ಟಿ ಬಂದವರೆಲ್ಲಾ ಹಂಗ ಜೀವಂತ ಇದ್ದರ ಇರಲಿಕ್ಕಿ ಜಾಗಾ ಸಾಲೂದಿಲ್ಲ. ತಿಲ್ಲಿಕ್ಕಿ ಅನ್ನಾ ಸಿಗೂದಿಲ್ಲ, ಅದ್ಕಂತ ಪರಮಾತ್ಮ ಕಾಲಾವಧಿ ಇಟ್ಟಾನ ಕುಸನೂರ ಮಲ್ಲೇಶಪ್ಪ ಕೋಟ್ನೂರ ಸಿದ್ರಾಮಪ್ಪಗೌಡ ಬಂದಾನ.

ಮಲ್ಲೇಶಪ್ಪ : ಯಪ್ಪಾ! ಬಂದಾರ ಹೆಂಡ್ರು ಮಕ್ಕಳು ಎಲ್ಲರೂ ಬಂದಾರ.

ಶಿವಲಿಂಗೇಶ : ನೀನು ಸಾಮಾನ್ಯನಲ್ಲ. ನನಗಿಂತಲೂ ಒಂದ್ಹೆಜ್ಜಿ ಮುಂದಿಟ್ಟಿ, ಇದ್ದ ಆಸ್ತಿ, ಗಳಿಸಿದ ಸಂಪತ್ತು, ನಿಟ್ಟಹಚ್ಚಿ ತೂರಿ ಬಂದು ಶರಣ ಮಾರ್ಗದ ಹರಿಕಾರನಾದಿ. ಇದು ಸಾಮಾನ್ಯರ ಮಾತಲ್ಲ ? ಅಸಾಮಾನ್ಯರ ಮಾತು. ಬಸವಂತಪ್ಪಾ ರಾಮರಾವ ಕುಲಕರ್ಣಿ ರಾಯಗುಂಡಪ್ಪಾ ರುಕ್ಮುದ್ದೀನ್ ನೀವೆಲ್ಲರೂ ಭಜನಿ ಮಾಡ್ರಿಪಾ ಶಿವ ಬೆಳಗಿನೊಳಗೇಕಾಗ್ತೀವಿ. ಮಾಟ್ನಳ್ಳಿ ವಸ್ತಾದ ಹಸನ್ ಶಿವಯೋಗಿ ಭವ ಹಸನಮಾಡಿ ಹ್ಯಾಂಗ ಹ್ವಾದ್ನೋ ಹಂಗ ನಾವೂ ಈ ಜಗತ್ತು ಜಳಜಳಾ ಮಾಡಿ ಹೊಂಟೀವಿ ಎಲ್ಲರೂ ಶಿವನಾಮಸ್ಮರಣೆ ಮಾಡ್ರಿ (ಐಕ್ಯ)

ಎಲ್ಲರೂ : ತಂದೇ ಶಿವಲಿಂಗೇಶ
ಹಿನ್ನಲೆ
ಇಟಗಿಯಾಜ್ಯೋತಿ
ಬೆಳಗಿನಲಿ ಬೆಳಕಾಯಿತು
ಭಕ್ತರ ಹೃದಯ ಸ್ಪಂದಿಸಿತು
ಕಲ್ಯಾಣ ಶರಣರ ನೆನಪಿಸಿತು
ಇಟಗಿ ಶ್ರೀ ಸಾಧು ಶಿವಲಿಂಗೇಶ್ವರ ಮಹಾರಾಜ್ಕಿ ಜೈ

ಪ್ರವೇಶ – ೩೨

ದೃಶ್ಯ ಜಾತ್ರೆ

(ತೇರು ಶೃಂಗರಿಸಿ ಕಾಯಿ ಕರ್ಪುರ ಬೆಳಗಿ ತೇರು ಎಳೆಯುವರು)

ಶಾಂತಯ್ಯ : ಕುಸನೂರ ಮಲ್ಲೇಶಪ್ಪನವರು ಮಾಡಿಸಿದ ತೇರು ಪಲ್ಲಕ್ಕಿ ನಂದಿಕೋಲ ಕುಸನೂರದಿಂದ, ಮಿಣೆ ರಾಮರಾವ ಕುಲಕರ್ಣಿಯವರ ಮನಿಯಿಂದ, ರಾಮರಾವ ಗೌಡರ ಮನಿಯಿಂದ ಮಿಣೆ ನಂದಿಕೋಲ್ ಬರತಾವ, ಶಂಕರಶೆಟ್ಟಿಯವರ ಮನೆತನದಿಂದ ಪಾಲಕಿ ಈ ರೀತಿ ಚಾಜಾ ವಹಿಸಿಕೊಂಡು ಸಾಧು ಶಿವಲಿಂಗೇಶ್ವರ ಜಾತ್ರಿ ಸಂಭ್ರಮದಿಂದ ಹರ ಗುರು ಚರಮೂರ್ತಿಗಳ ಸನ್ನಿಧಿಯಿಂದ ಜಗರುಗಿತು. ಶ್ರೀ ಸಾಧುಶಿವಲಿಂಗೇಶ್ವರ ಮಹಾರಾಜ್ಕೀ ಜೈ.

ಮಂಗಲಂ ನಾಟಕಕ್ಕೆ ಮಂಗಲಂ ರಂಗ ಭೂಮಿಗೆ

ಮಂಗಲಂ ಸಾಹಿತ್ಯ ಸಿರಿದೇವಿಗೆ

ಜಯಾಜಯ ನಮಃ ಪಾರ್ವತಿ ಹರ ಹರ ಮಹಾದೇವ

ಸರ್ವ ಮಂಗಲ ಮಾಂಗಲ್ಯ
ಶಿವೆ ಸರ್ವಾರ್ಥ ಸಾಧಿಕೆ
ಶರಣ್ಯತ್ರ್ಯಂಬಿಕೆ ಗೌರಿ
ನಾರಾಯಣಿ ನಮೋಸ್ತುತೆ

■■

ಶ್ರೀ ಚನ್ನಬಸವೇಶ್ವರ ಸಂಸ್ಥಾನ ಹಿರೇಮಠ, ಹಾರಕೂಡ
ಪ್ರಕಟಿಸಿದ ಗ್ರಂಥಗಳು

೧. ಹಾರಕೂಡ ಹಿರೇಮಠದ ಶ್ರೀ ಸದ್ಗುರು ಚನ್ನಬಸವ ಸ್ವಾಮಿಗಳ ಅಷ್ಟೋತ್ತರ ಶತನಾಮಾವಳಿ.	:	ಶ್ರೀ ವೇ. ಪುರಾಣಿಕ ಶರಣ್ಯನವರು ಹೊಸಮಠ, ಗುರಸಣಗಿ
೨. ಜನಪದ ಸಾಹಿತ್ಯದಲ್ಲಿ ಜೀವನ ಮೌಲ್ಯಗಳು	:	ಪ್ರೊ. ಸೂಗಯ್ಯ ಹಿರೇಮಠ
೩. ಅನುಭವ ಮಂಟಪದಲ್ಲಿ ವೀರಶೈವ ಸಂಸ್ಕೃತಿ	:	ಶ್ರೀ ವಿ. ಎಸ್. ಚರಂತಿಮಠ
೪. ವಚನ ಸಾಹಿತ್ಯದಲ್ಲಿ ಜೀವನ ಮೌಲ್ಯಗಳು	:	ಡಾ. ಎಂ. ಎಸ್. ಲಠ್ಠೆ, ಕಲಬುರ್ಗಿ
೫. ಅಂತರ (ಸಣ್ಣ ಕತೆಗಳ ಸಂಕಲನ)	:	ಪ್ರೊ. ಸೂಗಯ್ಯ ಹಿರೇಮಠ, ಬೀದರ
೬. ಅನುಭಾವಿಯ ಆತ್ಮಕಥನ	:	ಡಾ. ಎಸ್. ಆರ್. ಗುಂಜಾಳ
೭. ಶರಣರ ಕಾಯಕ ಮತ್ತು ದಾಸೋಹ	:	ಶ್ರೀ ಶಿವರಾಜ ಜಿ. ಪಾಟೀಲ, ಕಲಬುರ್ಗಿ
೮. ಶರಣರ ವಚನಗಳಲ್ಲಿ ಸಾಮಾಜ ಕಾರ್ಯದರ್ಶಿ	:	ಪ್ರೊ. ಎಸ್. ಆರ್. ಶಾಸ್ತ್ರಿ
೯. ಸನ್ನಿಧಿ	:	ಡಾ. ಸಂಗಮೇಶ ಸವದತ್ತಿಮಠ
೧೦. ಪುಣ್ಯಚಿತ್ತರು	:	ಡಾ. ಪಂಚಾಕ್ಷರಿ ಹಿರೇಮಠ
೧೧. ಶೂನ್ಯ ಸಂಪಾದನೆ ಮುಖಗಳು	:	ಡಾ. ಸಂಗಮೇಶ ಸವದತ್ತಿಮಠ
೧೨. ಚನ್ನವೀರ	:	(ಸಂ) ಡಾ. ಸಂಗಮೇಶ ಸವದತ್ತಿಮಠ
೧೩. ವೀರಶೈವ ಸಾಹಿತ್ಯ	:	ಡಾ. ಎಸ್. ಎಂ. ಹಿರೇಮಠ
೧೪. ಕಡಕೋಳ ಮಡಿವಾಳೇಶ್ವರ ಶಿಷ್ಯರ ತತ್ವ ಪದಗಳು	:	(ಸಂ). ಡಾ. ಮೀನಾಕ್ಷಿ ಬಾಳಿ
೧೫. ವೀರಶೈವ ಸಂಪದ	:	ಡಾ. ಬಿ. ಆರ್. ಹಿರೇಮಠ, ಧಾರವಾಡ
೧೬. ಶಿವಶರಣರು ಹಾಗೂ ವೈಚಾರಿಕತೆ	:	ಡಾ. ಎಸ್. ವಿದ್ಯಾಶಂಕರ, ಬೆಂಗಳೂರು
೧೭. ಸಿದ್ಧರಾಮ – ಒಂದು ಸಮೀಕ್ಷೆ	:	ಡಾ. ಬಿ. ವ್ಹಿ. ಮಲ್ಲಾಪೂರ, ಧಾರವಾಡ
೧೮. ಹಾರಕೂಡ ಶ್ರೀ ಚನ್ನಬಸವೇಶ್ವರ ಚರಿತ್ರೆ	:	ಶ್ರೀಮತಿ ಗೋಪಿಕಾದೇವಿ ದೇಶಮುಖ
೧೯. ರುದ್ರಲಿಂಗ ಸಂಸ್ಕೃತಿ	:	ಶ್ರೀ ಆಚಾರ್ಯ ನಂದೀಶ, ಬೀದರ
೨೦. ಬಸವೋತ್ತರ ಯುಗದ ವಚನಕಾರರು	:	ಡಾ. ವೀರಣ್ಣ ರಾಜೂರ, ಧಾರವಾಡ
೨೧. ಕಲ್ಯಾಣ ನಾಡಿನ ಪರಂಜ್ಯೋತಿ	:	(ಸಂ) ಡಾ. ಎಂ. ಎಸ್. ಲಠ್ಠೆ
	:	ಶ್ರೀ ಮಲ್ಲಿನಾಥ ಹಿರೇಮಠ, ಹಾರಕೂಡ
	:	ಶ್ರೀ ಮಲ್ಲಿನಾಥ ಹಿರೇಮಠ, ಹಾರಕೂಡ
	:	ಡಾ. ಹೆಚ್. ಕಾಶೀನಾಥರೆಡ್ಡಿ
೨೨. ಕರಿಯನಿತ್ತಡೆ ಒಲ್ಲೆ	:	ಶ್ರೀ ರಮೇಶಬಾಬು ಯಾಳಗಿ
೨೩. ವೀರಶೈವ ಪರಿಜ್ಞಾನ	:	ಶ್ರೀ ಷಣ್ಮುಖಯ್ಯ ಅಕ್ಕೂರಮಠ, ಬೆಂಗಳೂರು
೨೪. ಶಿವಶರಣರ ಲೋಕನೀತಿ	:	ಡಾ. ಸಂಗಮೇಶ ಸವದತ್ತಿಮಠ, ಧಾರವಾಡ
೨೫. ಕರ್ನಾಟಕದ ಶಿಲ್ಪಗಳಲ್ಲಿ ಶಿವಶರಣರು	:	ಡಾ. ಜೆ. ಎಂ. ನಾಗಯ್ಯ, ಧಾರವಾಡ

೨೬. ಆಲಂದೆ ಏಕಾಂತ ರಾಮಯ್ಯ	:	ಡಾ. ಸಿ. ನಾಗಭೂಷಣ
೨೭. ಪುಲಿಗೆರೆಯ ಆದಯ್ಯ	:	ಡಾ. ಸೋಮನಾಥ ಯಾಳವಾರ
೨೮. ಉಡುತಡಿಯ ಮಹಾದೇವಿಯಕ್ಕ	:	ಡಾ. ಶಾಂತಾ ಇಮ್ರಾಪೂರ, ಧಾರವಾಡ
೨೯. ಸದ್ಗುರು ಶ್ರೀ ಚನ್ನಬಸವ ಶಿವಯೋಗಿಗಳ ಪುರಾಣ	:	(ಸಂ)ಡಾ. ಸಂಗಮೇಶ ಸವದತ್ತಿಮಠ
೩೦. ಅಲ್ಲಮ ಪ್ರಭು–ಬೆರಗು, ಬೆಡಗು, ಬೆಳಗು	:	ಶ್ರೀ ಬಸವರಾಜ ಪುರಾಣಿಕ, ಬೆಂಗಳೂರು
೩೧. ಚಿಂತನೆ ಧಾರೆ	:	ಡಾ. ಸಿ. ಪಿ. ಕೆ. ಮೈಸೂರು
೩೨. ಬಸವ ಸಿರಿ	:	ಪ್ರೊ. ವೀರೇಂದ್ರ ಸಿಂಪಿ, ಬೀದರ
೩೩. ವಚನ ಸಂಪದ	:	ಡಾ. ಜಿ. ಬಿ. ವಿಸಾಜಿ, ಭಾಲ್ಕಿ
೩೪. ಕಲ್ಪವೃಕ್ಷ	:	ಡಾ. ಎ. ಸಿ. ವಾಲಿ, ಭಂಡಿವಾಡ
೩೫. ವಚನಗಳಲ್ಲಿ ವೀರಶೈವ	:	ಡಾ. ಮಲ್ಲಿಕಾರ್ಜುನ ಪರಡ್ಡಿ, ಧಾರವಾಡ
೩೬. ಹಾರಕೂಡ ಶ್ರೀ ಚೆನ್ನಬಸವ ಶಿವಯೋಗಿ ಮಹಾತ್ಮೆ	:	ಶ್ರೀ ಎಲ್. ಬಿ. ಕೆ. ಆಲ್ದಾಳ, ಮಳ್ಳಿ
೩೭. ವಚನ ಸಂಸ್ಕೃತಿ	:	ಡಾ. ಟಿ. ಎಂ. ಭಾಸ್ಕರ್
೩೮. ಸಿರಗಾಪೂರ ನಾಗೇಂದ್ರಪ್ಪ ಕವಿಯ ಭಜನೆ ಹಾಡುಗಳು	:	(ಸಂ) ಡಾ. ಸಂಗಮೇಶ ಸವದತ್ತಿಮಠ
೩೯. ಕಲ್ಯಾಣ ನಾಡಿನಲ್ಲಿ ವೀರಭದ್ರ	:	ಡಾ. ಎಮ್. ಜಿ. ನಾಗರಾಜ, ಬೆಂಗಳೂರು
೪೦. ರಂಗ ಸಂತ ಜಂಗಮ	:	ಶ್ರೀ ಎಲ್. ಬಿ. ಕೆ. ಆಲ್ದಾಳ ಅಭಿನಂದನ ಗ್ರಂಥ ವಿವಿಧ ಲೇಖಕರಿಂದ
೪೧. ಕೋಡ್ಲಿ ಕಂಟೆಪ್ಪ ಮಾಸ್ತರ ವಿರಚಿತ ಹಾರಕೂಡ ಶ್ರೀ ಚೆನ್ನಬಸವೇಶ್ವರ ಮಹಾತ್ಮೆ	:	(ಸಂ) ಡಾ. ಸಂಗಮೇಶ ಸವದತ್ತಿಮಠ
೪೨. ಶಿವಶರಣರ ವಚನಗಳಲ್ಲಿ ಸಾಮಾಜಿಕ ಮೌಲ್ಯಗಳು	:	ಡಾ. ಸಿ. ಶಿವಕುಮಾರಸ್ವಾಮಿ, ಬೆಂಗಳೂರು
೪೩. ಮರಕುಂದಿ ಬಸವಣೆಪ್ಪಾ ಕೃತ 'ನಿಜಾನಂದ ಲಹರಿ'	:	ಸಂಪಾದಕರು ಶ್ರೀಮತಿ ಗೋಪಿಕಾದೇವಿ ದೇಶಮುಖ, ಗುಲಬರ್ಗಾ
೪೪. ಕನ್ನಡ ಭಾಷಾ ವಿಜ್ಞಾನ ನಡೆದು ಬಂದದಾರಿ	:	ಡಾ.ಸಂಗಮೇಶ ಸವದತ್ತಿಮಠ
೪೫. ಶಿವಶರಣರು ಹಾಗೂ ಸೂಫಿಮತ	:	ರೇವಣಸಿದ್ದಯ್ಯ ರುದ್ರಸ್ವಾಮಿಮಠ, ಗುಲಬರ್ಗಾ
೪೬. ಸಾಹಿತ್ಯ ತಪಸ್ವಿ, ಡಾ.ಜ.ಚ.ನಿ	:	ಡಾ. ಸಂಗಮೇಶ ಹಂಡಗಿ, ಹುಬ್ಬಳ್ಳಿ
೪೭. ಸುಗಂಧ	:	(ಸಂ) ಡಾ. ಗವಿಸಿದ್ದಪ್ಪ ಪಾಟೀಲ
೪೮. ತುರುಗಾಹಿ ರಾಮಣ್ಣಾ	:	ಜಯದೇವಪ್ಪ ಜೈನಕೇರಿ, ಶಿವಮೊಗ್ಗ
೪೯. ಇಟಗಿಯ ಶ್ರೀ ಸಾಧು ಶಿವಲಿಂಗೇಶ್ವರ ಮಹಾತ್ಮೆ	:	ಎಚ್. ಬಿ. ಕೆ. ಆಲ್ದಾಳ
೫೦. "ಸುವರ್ಣ ಸಿರಿ"	:	ಡಾ. ಗವಿಸಿದ್ದಪ್ಪ ಪಾಟೀಲ

ಹಾರಕೂಡ ಸಂಸ್ಥಾನ ಹಿರೇಮಠವು ಕಲ್ಯಾಣ ಕರ್ನಾಟಕದ ಒಂದು ಅತ್ಯಂತ ಜಾಗೃತ ಶ್ರೀಮಠವಾಗಿದೆ. ಅದಕ್ಕೆ ಕಾರಣ ಈ ಶ್ರೀಮಠದ ಪರಂಪರಾಗತ ಶ್ರೀಗಳ ತಪಃಪ್ರಭಾವ ಮತ್ತು ಭಕ್ತೋದ್ಧಾರದ ಕೈಂಕರ್ಯ. ಧಾರ್ಮಿಕ, ನೈತಿಕ, ಸಾಮಾಜಿಕ ಕ್ಷೇತ್ರಗಳಲ್ಲಿ ಮಠದ ಪರಂಪರೆಯಲ್ಲಿ ಬಂದ ಸ್ವಾಮಿಗಳ ಕಾಣಿಕೆ ಅನನ್ಯವಾಗಿದೆ. ಮಠವು ಅನೇಕ ಜನಕಲ್ಯಾಣ ಕಾರ್ಯಗಳನ್ನು ಅತ್ಯಂತ ಯಶಸ್ವಿಯಾಗಿ ನಿರಂತರವಾಗಿ ನಡೆಸುತ್ತ ಬಂದಿದೆ. ಜಾತಿ ಮತ ವರ್ಗ ವರ್ಣ ಭೇದವಿಲ್ಲದೆ ಎಲ್ಲ ಭಕ್ತರನ್ನೂ ಸಮಾನವಾಗಿ ಕಾಣುತ್ತ ಎಲ್ಲರಿಗೂ ಸನ್ಮಾರ್ಗದರ್ಶನವನ್ನು ನೀಡುತ್ತಲಿದೆ. ಲಕ್ಷಾಂತರ ಭಕ್ತರಿಗೆ ಕಾಮಧೇನು ಕಲ್ಪವೃಕ್ಷವೆನಿಸಿರುವ ಈ ಮಠವು ಆರೋಗ್ಯಪೂರ್ಣ ಸಮಾಜನಿರ್ಮಾಣ ಮತ್ತು ವ್ಯಕ್ತಿಗಳ ಮಾನಸಿಕ ನೆಮ್ಮದಿಗೆ ಆವಶ್ಯಕ ಸೇವೆಗಳನ್ನು ನೀಡುತ್ತಿರುವುದು ವಿಶೇಷವಾಗಿದೆ. ಧರ್ಮ, ಸಾಹಿತ್ಯ, ಸಂಸ್ಕೃತಿಗಳನ್ನು ಬೆಳೆಸುವುದರ ಮೂಲಕ ಸುಸಂಸ್ಕೃತ ಸುಶಿಕ್ಷಿತ ಮನುಷ್ಯ ಸಂಸ್ಕೃತಿಯ ಘನತೆಯನ್ನು ಎತ್ತಿಹಿಡಿಯುವ ಸರಿಯಾದ ಮಾರ್ಗದಲ್ಲಿ ಶ್ರೀಮಠ ಸಾಗುತ್ತ ಇದು ನಮ್ಮದು ಇದು ನಮ್ಮದು ಎನ್ನುವಂಥ ಸೌಹಾರ್ದ ವಾತಾವರಣವನ್ನು ಉಂಟುಮಾಡಿದೆ. ಅಂತೆಯೆ ಇದರ ಪ್ರಭಾವ ಅಚ್ಚಳಿಯದೆ ಶತಮಾನದಿಂದ ಉಳಿದುಕೊಂಡು ಬಂದಿದೆ.

ಶ್ರೀ ಎಲ್.ಬಿ.ಕೆ ಆಲ್ದಾಳ ಅವರು ಹುಟ್ಟಿನಿಂದ ಮುಸಲ್ಮಾನರಾಗಿದ್ದರೂ ಹಾರಕೂಡ ಹಿರೇಮಠದ ಮೇಲೆ ಅಪಾರ ಭಕ್ತಿಶ್ರದ್ಧೆಯನ್ನಿಟ್ಟುಕೊಂಡವರು. ಕರ್ನಾಟಕರಾಜ್ಯೋತ್ಸವ ಪ್ರಶಸ್ತಿ, ಗುಬ್ಬಿವೀರಣ್ಣ ಪ್ರಶಸ್ತಿಗಳಲ್ಲದೆ ಹಾರಕೂಡ ಸಂಸ್ಥಾನ ಹಿರೇಮಠದ ಪ್ರತಿಷ್ಠಿತ "ಶ್ರೀಚೆನ್ನರೇಣುಕಬಸವ" ಪ್ರಶಸ್ತಿಗೆ ಭಾಜನರಾದವರು. ರಂಗನಾಟಕ ಕಲಾಪ್ರವೀಣರು. ಅಂಥವರು ಇಟಗಿಯ ಸಾಧು ಶಿವಲಿಂಗೇಶ್ವರರ ಅಚ್ಚಳಿಯದ ಪ್ರಭಾವ ಮತ್ತು ಮಹಿಮೆಗಳನ್ನು ಇಲ್ಲಿ ರಂಗನಾಟಕ ರೂಪದಲ್ಲಿ ಬಹಳ ಸುಂದರವಾಗಿ ಹೆಣೆದಿದ್ದಾರೆ. ರಂಗನಾಟಕಗಳು ಕಡಿಮೆಯಾಗುತ್ತಿರುವ ಈ ಸಮಯದಲ್ಲಿ ಇದೊಂದು ಅಪರೂಪದ ನಾಟಕ ಕೃತಿಯಾಗಿದೆ.

